ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮಾರ್ಚ್ 23, 2011 ಪುಟ 20 ರೂ. 12/-



ಚಿಮೂಗೆ ಛೀಮಾರಿ



ಮರ್ಯಾದಾ ಹತ್ಯೆ

ಮಗಳನ್ನೇ ಕೊಂದ ಅಪ್ಪ-ಅಮ್ಮ



ವಿಷವಾದ ರೇಣುಕಾ ಶುಗರ್ಸ್

ಸಾಲೆ ದೋಸೆಗಳು, ನಾರಾಯಣ ಮೂರ್ತಿಗಳು!




ಕೊಪ್ಪಳ

ಕಾಂತರಿ ಡೆ ಕರಡಿ



ಮೈಸೂರು ವಿವಿ

ಲೈಂಗಿಕ ಹಗರಣದ ಸತ್ಯವೇನು?



ನಂದಿಕೂರು

ಎಡಬಿಡಂಗಿ ಪೇಜಾವರ

ಮಸಾಲೆ ದೋಸೆಗಳು ಮತ್ತು ನಾರಾಯಣ ಮೂರ್ತಿಗಳು!!



"ಇದೊಂದು ವಿಚಿತ್ರ ವಿಷಾದದ ಕಾಲ. ಪಕ್ಕದ ಮನೆಯಲ್ಲಿ ಹೆಣ ಬಿದ್ದಿದ್ದರೂ ನಿರುಮ್ಮಳವಾಗಿ ಹಬ್ಬದೂಟ ಮಾಡುವ ಸಂವೇದನಾ ಶೂನ್ಯ ಕಾಲ. ಕೇವಲ ಒಂದೂವರೆ ವರ್ಷದ ಹಿಂದಿನ ಮಾತು. ಶತಮಾನಗಳಲ್ಲೂ ಇಲ್ಲದಿದ್ದ ಪ್ರವಾಹ ಬಂದು ಇಡೀ ಉತ್ತರ ಕರ್ನಾಟಕದ ಜನತೆಯನ್ನು ಬೀದಿಗೆ ದೂಡಿತ್ತು. ಲಕ್ಷ ಲಕ್ಷ ಮನೆ ಕಟ್ಟಿಕೊಡುವ ಮಾತಾಡಿದ್ದ ಸರ್ಕಾರ ಲಕ್ಷಗಳಿರಲಿ, ಸಾವಿರದಲ್ಲೂ ಮನೆಗಳನ್ನು ಕಟ್ಟಿಕೊಟ್ಟಿಲ್ಲ. ಬೆಂದ ಮನೆಯಲ್ಲಿ ಗಳ ಹಿರಿಯುವ ಕೆಲಸ ಮಾಡುವ ಸಂಘಸಂಸ್ಥೆಗಳು ಮಾತ್ರ ಕೆಲವು ಮನೆಗಳನ್ನು ಕಟ್ಟಿಸಿಕೊಟ್ಟು ಅವರ ಮನದಲ್ಲಿ ಶಾಶ್ವತವಾಗಿ ಬೇರೂರುವ ಕೆಲಸ ಮಾಡುತ್ತಿವೆ. ಉಳಿದಂತೆ ಮಳೆಯಲ್ಲಿ ನೆಂದು ಸೋತ ಜನ ಬಿಸಿಲಲ್ಲಿ ಬೆವರಿಳಿಸುತ್ತಿದ್ದಾರೆ. ಈ ವರ್ಷವೂ ರಾಜ್ಯಾದ್ಯಂತ 1700 ಕನ್ನಡಿಗ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕನ್ನಡ ಕ್ರೈಸ್ತರ ಮೇಲೆ ಸರ್ಕಾರದ ಕುಮ್ಮಕ್ಕಿನಿಂದಲೇ ದಾಳಿ ನಡೆದರೂ ನ್ಯಾಯಮೂರ್ತಿಗಳ ನೇತೃತ್ವದ ಆಯೋಗವೇ ಆಕ್ರಮಣಕಾರರನ್ನು ರಕ್ಷಿಸುವ ವರದಿ ನೀಡಿದೆ. ದಿನ ಬೆಳಗಾದರೆ ಮುಖ್ಯಮಂತ್ರಿಗಳೆ ಮುಂದೆ ನಿಂತು ಬಡಬಗ್ಗರಿಗೆ ಸೇರಿದ್ದ ಮತ್ತು ಸೇರಬೇಕಾದ ಜಮೀನುಗಳನ್ನು ಕಿತ್ತುಕೊಂಡು ತಮ್ಮ ತಿಜೋರಿಗೆ ಸೇರಿಸಿಕೊಳ್ಳುತ್ತಿದ್ದಾರೆ. ರಾತ್ರೋರಾತ್ರಿ ಸ್ಲಂಗಳಿಗೆ ಬೆಂಕಿಬಿದ್ದು ಆಳುವ ಪಕ್ಷದ ವಿಶ್ವಾಸಿಗಳ ಅಪಾರ್ಟ್‌ಮೆಂಟ್‌ಗಳಿಗೆ ಖಾಲಿಯಾಗುತ್ತಿವೆ. ಕಳೆದ ಎರಡು ವರ್ಷದಲ್ಲಿ ಕರ್ನಾಟಕ ಇಡೀ ಭಾರತದಲ್ಲೇ ಅತಿ ಭ್ರಷ್ಟ ರಾಜ್ಯವೆಂಬ ಹೆಸರು ಮಾಡಿದೆ. ಸೌಹಾರ್ದ ಸಂಸ್ಕೃತಿಯ ಪರಂಪರೆಯುಳ್ಳ ಕರ್ನಾಟಕದಲ್ಲಿ ಜಾತೀಯತೆ ಮತ್ತು ಕೋಮುವಾದದ ವಿಷಬೀಜವನ್ನು ಬಿತ್ತಿದ ಪಕ್ಷದ ಸರ್ಕಾರವೇ ಇಂದು ವಿಶ್ವಮಟ್ಟದಲ್ಲಿ ಕನ್ನಡದ ಸಂಸ್ಕೃತಿಯನ್ನು ಸಾರುವ ಸಾರಥ್ಯ ವಹಿಸಿದೆ.


25 ವರ್ಷದ ಕೆಳಗೆ ಮೈಸೂರಿನಲ್ಲಿ ಪ್ರಥಮ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು, ಆಗಲೂ ಕರ್ನಾಟಕದಲ್ಲಿ ತೀವ್ರ ಬರಗಾಲ. ಕರ್ನಾಟಕಕ್ಕೆ ಅನ್ನ ಇಕ್ಕುವ ಕನ್ನಡಿಗ ರೈತಾಪಿ ಮತ್ತವನ ರಾಸುಗಳು ಸಾಯಲು ಪ್ರಾರಂಭಿಸಿದ್ದವು. ಹೀಗಾಗಿ ಅನ್ನದಾತ ಕಷ್ಟದಲ್ಲಿರುವಾಗ ಭಾಷೆಯ ಹೆಸರಲ್ಲಿ ಈ ಬಗೆಯ ಸಂಭ್ರಮ ಸರಿಯಲ್ಲ ಎಂದು ರಾಮದಾಸ್, ರಾಮಲಿಂಗಂರಂಥ ಹಲವು ಸಂವೇದನಾಶೀಲ ಬರಹಗಾರರು, ಆಗಿನ್ನೂ ಯುವ ಬರಹಗಾರರಾಗಿದ್ದ ಬಂಜಗೆರೆ ಜಯಪ್ರಕಾಶ್, ಅಬ್ದುಲ್ ರಷೀದ್, ನಂತರ ಖ್ಯಾತ ಕ್ರಾಂತಿಕಾರಿ ನಾಯಕರಾದ ಸಾಕೇತ್ ರಾಜನ್, ರೈತ ವಿದ್ಯಾರ್ಥಿ ಒಕ್ಕೂಟದಂಥ ಸಂಘಟನೆಗಳು ಒಟ್ಟು ಸೇರಿಕೊಂಡು ಜನತಾ ಸರ್ಕಾರದ ಈ ಜನವಿರೋಧಿ ನೀತಿಯನ್ನು ವಿರೋಧಿಸಿ ವಿಶ್ವ ಕನ್ನಡ ಸಮ್ಮೇಳನ ವಿರೋಧಿ ಒಕ್ಕೂಟವನ್ನು ರಚಿಸಿಕೊಂಡಿದ್ದರು. ಕರ್ನಾಟಕದ ರೈತಾಪಿ ಕಂಗಾಲಾಗಿರುವಾಗ ಅದಕ್ಕೆ ಸಂಬಂಧವೇ ಇಲ್ಲದಂತೆ ಈ ಬಗೆಯ ಸಂಭ್ರಮಾಚರಣೆ ಕೂಡದೆಂದು ಹೋರಾಟ ನಡೆಸಿದ್ದರು. ಈ ಹೋರಾಟವನ್ನು ಆಗ ಲಂಕೇಶ್ ಮತ್ತು ತೇಜಸ್ವಿಯವರು ಕೂಡಾ ಬೆಂಬಲಿಸಿದ್ದರು.

ಆದರೆ ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಸಾಹಿತಿ ಶಿವರಾಮ ಕಾರಂತರು ಮಾತ್ರ ತಮ್ಮ ಭಾಷಣದ ಮಧ್ಯದಲ್ಲಿ "ಜನ ಬರಗಾಲ ಬಂದಿದೆಯೆಂದು ಮಸಾಲೆ ದೋಸೆಯನ್ನು ತಿನ್ನುವುದನ್ನು ಬಿಟ್ಟಿದ್ದಾರೆಯೇ" ಎಂದು ಕೇಳಿ ಇಡೀ ರೈತಾಪಿ ಬದುಕಿನ ಸಂಕಷ್ಟಗಳಿಂದ ನಮ್ಮ ಸಾರಸ್ವತ ಲೋಕದ ಕಣ್ಮಣಿಗಳು ಎಷ್ಟು ದೂರವಿದ್ದಾರೆಂಬುದನ್ನು ಸಾಬೀತುಪಡಿಸಿದ್ದರು. ವಿಕಸ ವಿರೋಧಿ ಒಕ್ಕೂಟದ 30ಕ್ಕೂ ಹೆಚ್ಚು ಕಾರ್ಯಕರ್ತರನ್ನು ಸಮ್ಮೇಳನದ ದಿನ ಬಂಧಿಸಿ ಜೈಲಿಗೆ ತಳ್ಳಲಾಯಿತು. ಆದರೆ ನೈಜ ಕನ್ನಡ ಹೋರಾಟಗಾರರಾಗಿದ್ದ ಆ ನಾಡಪ್ರೇಮಿಗಳು ಜೈಲಿನಲ್ಲೇ ಪರ್ಯಾಯ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಿದ್ದರು. ಹೋರಾಟಗಾರ ಕನ್ನಡಿಗರನ್ನು ಬಂಧಿಸಿದ್ದನ್ನು ಪ್ರತಿಭಟಿಸಿ ಅನಂತಮೂರ್ತಿಗಳು ಸಹ ಮಾರನೇ ದಿನ ತಮ್ಮ ಪ್ರಬಂಧ ಓದದೆ ಹೊರಬಂದ ನೆನಪು. ನಂತರ ಶಿವರಾಮ ಕಾರಂತರ ಹೇಳಿಕೆಯನ್ನು ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದವು. ಮೈಸೂರಿನಲ್ಲಿ ವಿಕಸ ವಿರೋಧಿ ಒಕ್ಕೂಟದ ಕಾರ್ಯಕರ್ತರು ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಜನರಿಂದ ಸಂಗ್ರಹಿಸಿದ್ದ ಮೇವು, ದವಸ-ಧಾನ್ಯಗಳನ್ನು ಹಂಚಿದರು. ಹೀಗೆ ಮೊದಲನೇ ವಿಶ್ವ ಕನ್ನಡ ಸಮ್ಮೇಳನವೇ ಸರ್ಕಾರದ ಜನವಿರೋಧಿತನಕ್ಕೆ, ನಮ್ಮ ಸಾರಸ್ವತ ಲೋಕದ ಇಬ್ಬಂದಿತನಕ್ಕೆ ಮತ್ತು ಅದರ ನಡುವೆಯೇ ಗಟ್ಟಿಗೊಂಡ ಜನಪರ ನಾಡವರ ಅಭಿಮತಕ್ಕೆ ಸಾಕ್ಷಿಯಾಯಿತು.

25 ವರ್ಷಗಳ ನಂತರ ಈಗ, ಕನ್ನಡಿಗ ರೈತಾಪಿ ಮತ್ತು ದುಡಿಯುವ ಜನರ ಬದುಕು ಮತ್ತಷ್ಟು ಆತಂಕದಲ್ಲಿರುವಾಗ ಮತ್ತು ಕನ್ನಡ ಭಾಷೆಯ ಮತ್ತು ಭವಿಷ್ಯದ ಪ್ರಶ್ನೆ ಇನ್ನಷ್ಟು ಮಸುಕುಗೊಂಡಿರುವಾಗ, ಮತ್ತೊಂದು ವಿಶ್ವ ಕನ್ನಡ ಸಮ್ಮೇಳನ ನಡೆಯುತ್ತಿದೆ. ಈ ಅವಧಿಯಲ್ಲಿ ಮಸಾಲೆದೋಸೆ ತಿನ್ನುತ್ತಿದ್ದ ಕನ್ನಡಿಗರು ಪಿಜ್ಜಾ ಬರ್ಗರ್‌ಗಳನ್ನು ತಿನ್ನುತ್ತಿದ್ದಾರೆ. ಆದರೆ ಮೂರುಹೊತ್ತಿನ ಕೂಳಿಗೂ ಪರದಾಡುತ್ತಿದ್ದ ಬಡ ಕನ್ನಡಿಗರ ಬದುಕು ಇನ್ನಷ್ಟು ಮೂರಾಬಟ್ಟೆಯಾಗುತ್ತಿದೆ. ಕಳೆದ ಹತ್ತು ವರ್ಷಗಳಿಂದ ಅತಿಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಥಮ ಐದು ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕಕ್ಕೆ ಮೊದಲ ಮೂರರಲ್ಲಿ ಒಂದು ಸ್ಥಾನ ಕಾಯಂ ಆಗಿ ಸಿಗುತ್ತಿದೆ. ಕಳೆದ 25 ವರ್ಷಗಳ ಅವಧಿಯಲ್ಲಿ 20,000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ ಈ ವರ್ಷವೂ 1700 ಕನ್ನಡಿಗ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂದು ಬರಗಾಲದಿಂದ ರೈತಾಪಿ ಕಂಗಾಲಾಗಿದ್ದರೆ ಇಂದು ನೆರೆಯಿಂದ ಬೀದಿಪಾಲಾಗಿದ್ದಾನೆ. ಆದರೆ ಕನ್ನಡಕ್ಕೆ ಅನ್ನ ಹಾಕುವ ಈ ನೆಲೆದೊಡೆಯನನ್ನು ಬೆಂಗಳೂರಿನಲ್ಲಿ ನಡೆದ ಕನ್ನಡ ಸಮ್ಮೇಳನದಲ್ಲಿ ಸಾರಸ್ವತ ಲೋಕ ನೆನೆಸಿಕೊಳ್ಳಲೇ ಇಲ್ಲ, ಈಗ ಬೆಳಗಾವಿಯಲ್ಲಿ ನಡೆಯುತ್ತಿರುವ ವಿಶ್ವ ಕನ್ನಡ ಸಮ್ಮೇಳನದಲ್ಲೂ ಇದರ ಬಗ್ಗೆ ಯಾವೊಂದೂ ಗೋಷ್ಠಿಯೂ ಆಯೋಜನೆಗೊಂಡಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಇಂದು ಕನ್ನಡದ ಮತ್ತು ಕನ್ನಡಿಗರ ಬದುಕು ಮತ್ತು ಪರಂಪರೆಯನ್ನು ಹೀನಾಯಗೊಳಿಸಿರುವ ಕೋಮುವಾದಿ ಸರ್ಕಾರವೇ ಕನ್ನಡದ ಹೆಮ್ಮೆಯ ಹೆಸರಲ್ಲಿ ಜನತೆಯನ್ನು ದಾರಿ ತಪ್ಪಿಸುವ ಬಗ್ಗೆ ಸಾರಸ್ವತ ಲೋಕ ಒಂದು ಅನರ್ಥಕಾರಿ ಮೌನವನ್ನು ವಹಿಸಿಬಿಟ್ಟಿದೆ. ಬೆಳಗಾವಿಯಲ್ಲಿ ಸಮ್ಮೇಳನ ಆಯೋಜಿಸುವ ಹಿಂದೆಯೂ ಯಡಿಯೂರಪ್ಪನವರ ಸರ್ಕಾರ ಅಧಿಕಾರಕ್ಕೆ ಬಂದಾಗಲಿಂದ ಅನುಸರಿಸಿಕೊಂಡು ಬಂದಿರುವ ಒಂದು ಕುತಂತ್ರದ ಮುಂದುವರಿಕೆಯಿದೆ. ಜನಸಮುದಾಯಗಳ ಬದುಕನ್ನು ಒಟ್ಟಾರೆಯಾಗಿ ಮೇಲೆತ್ತುವ ಯಾವ ಕಾರ್ಯಕ್ರಮವನ್ನೂ ಹಾಕಿಕೊಳ್ಳದೆ ಕೇವಲ ಆ ಸಮುದಾಯಗಳ ನಾಯಕರನ್ನು ಅಥವಾ ಮಠಾಧಿಪತಿಗಳನ್ನು ಓಲೈಸುವ ತಂತ್ರವನ್ನು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಅನುಸರಿಸಿಕೊಂಡು ಬರುತ್ತಿದೆ. ಇಡೀ ಲಿಂಗಾಯತ, ಒಕ್ಕಲಿಗ, ಕುರುಬ, ವಾಲ್ಮೀಕಿ ಇನ್ನಿತ್ಯಾದಿ ಸಮುದಾಯಗಳ ಬದುಕನ್ನು ಬೀದಿಪಾಲು ಮಾಡಿ ಆಯಾ ಸಮುದಾಯಗಳ ಮಠಾಧಿಪತಿಗಳಿಗೆ ಕೋಟಿ ಕೋಟಿ ರೂಪಾಯಿಗಳ ದೇಣಿಗೆ ನೀಡಿ ಆ ಸಮುದಾಯಗಳ ಬಾಯಿ ಮುಚ್ಚಿಸುವುದನ್ನು ಸರ್ಕಾರ ಪ್ರತಿ ಬಜೆಟ್ಟಿನಲ್ಲಿ ಮಾಡುತ್ತಾ ಬಂದಿದೆ. ಇದರ ಮೂಲಕ ಹುಸಿ ಸಮಾಧಾನ ಮತ್ತು ಜಾತಿ ದುರಭಿಮಾನ ಬೆಳೆಸುವುದೇ ಯಡಿಯೂರಪ್ಪನವರು ಕಂಡುಕೊಂಡಿರುವ ಹೊಸ ಜನವಿರೋಧಿ ಆಡಳಿತ ತಂತ್ರ.

ಇದೇ ಕುತಂತ್ರವೇ ಈಗ ದಿಢೀರನೆ ಗಡಿನಾಡಾದ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಿರುವುದರ ಹಿಂದೆಯೂ ಇದೆ. ಬಿಜೆಪಿ ಮತ್ತು ಈ ಹಿಂದಿನ ಎಲ್ಲಾ ಸರ್ಕಾರಗಳ ಜಾಗತೀಕರಣದ ಪರವಾದ ನೀತಿಗಳಿಂದಾಗಿ ಕನ್ನಡ ಭಾಷೆ ಬದುಕಿನ ಭಾಷೆಯಾಗುವ ಸಾಮರ್ಥ್ಯವನ್ನು ದಿನೇದಿನೆ ಕಳೆದುಕೊಳ್ಳುತ್ತಿದೆ. ಕನ್ನಡ ವಿಶ್ವ ದಿನೇದಿನೆ ಮಾರುಕಟ್ಟೆ ಜಗತ್ತಿನಲ್ಲಿ ಅಪ್ರಸ್ತುತವಾಗಿ ಬಿಡುತ್ತಿದೆ. ಕನ್ನಡ ವಿಶ್ವದ ಬದುಕಿ ಬಾಳುವ ಎಲ್ಲಾ ಅಂತರ್ಗತ ಸಾಮರ್ಥ್ಯವನ್ನು ಬಿಜೆಪಿ ಸರ್ಕಾರದ ಐಟಿ, ಬಿಟಿ ಪರ, ವಿದೇಶೀ ಹೂಡಿಕೆದಾರರ ಪರ ಆರ್ಥಿಕ ನೀತಿಗಳು ಕೊಂದುಹಾಕುತ್ತಿವೆ. ಆದರೆ ಅದೇ ಸರ್ಕಾರ ಈಗ ಕನ್ನಡದ ಹೆಮ್ಮೆಯನ್ನು ವಿಶ್ವದ ಎತ್ತರದಲ್ಲಿ ಹಾರಿಸುವುದಾಗಿ ಸಮ್ಮೇಳನವನ್ನು ನಡೆಸುತ್ತಿದೆ. ಬೆಳಗಾವಿಯಲ್ಲಿ ಮರಾಠಿ ಭಾಷಿಕರ ಆಟಾಟೋಪಕ್ಕೆ ಈ ಸಮ್ಮೇಳನ ತಕ್ಕ ಉತ್ತರ ಕೊಡುತ್ತದೆ ಎಂಬ ಭಾವನಾತ್ಮಕ ಸಮಾಧಾನದಲ್ಲಿ ಬಿಜೆಪಿ ಸರ್ಕಾರದ ಇತರ ವಿಷಯಗಳ ಬಗ್ಗೆ ತಕರಾರಿರುವವರೂ ಈ



ಶಿವಸುಂದರ್

ಚಾರ್ವಾಕ

ಸಂದರ್ಭದಲ್ಲಿ ಬಿಜೆಪಿ ಸರ್ಕಾರದ ನಾಯಕತ್ವವನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಗಾಂಧಾರಿ ಕುರುಡನ್ನು ತೋರುತ್ತಿದ್ದಾರೆ.

ಕೆಲವೇ ದಿನಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ರಾಜ್ಯಪಾಲರು ಅಪರೂಪಕ್ಕೊಮ್ಮೆ ಸಕಾರಣವಾದ ಕ್ರಮವನ್ನು ಕೈಗೊಂಡು ಪರಮ ಹಿಂದೂತ್ವವಾದಿ ಚಿದಾನಂದಮೂರ್ತಿಗಳಿಗೆ ಗೌರವ ಡಾಕ್ಟರೇಟ್ ತಡೆಹಿಡಿದಿದ್ದನ್ನು ಎಡ-ಬಲವೆನ್ನದೇ ಇಡೀ ಸಾರಸ್ವತ ಲೋಕವೇ ಕೋಮುವಾದಿಯೊಬ್ಬನ ಬೆಂಬಲಕ್ಕೆ ನಿಂತುಬಿಟ್ಟಿತ್ತು. ಇಲ್ಲೂ ಸಹ ರಾಜಕಾರಣದ ಜನವಿರೋಧಿ ಪಟ್ಟುಗಳನ್ನು ಕಾಣಲಾಗದಂತೆ ಮಾಡಿದ್ದು ಅಮೂರ್ತ ಕನ್ನಡಾಭಿಮಾನ. ಕನ್ನಡಾಭಿಮಾನ ಖಂಡಿತ ತಪ್ಪಲ್ಲ. ಈ ಕನ್ನಡತೆಯ ಸಾರಾಂಶವೇನು ಎಂಬುದು ಮುಖ್ಯ. ತಮಿಳು ಭಾಷಾ ಚಳವಳಿ ಪ್ರಾರಂಭವಾದಾಗ ಅದು ದಮನಿತ ಜಾತಿ ಮತ್ತು ವರ್ಗಗಳ ಸ್ವಾಭಿಮಾನದ ಚಳವಳಿಯೂ ಆಗಿತ್ತು, ಆಂಧ್ರದಲ್ಲಿ ಆಂಧ್ರ ಮಹಾಸಭಾದ ನಾಯಕತ್ವದ ತೆಲುಗು ಏಕೀಕರಣ ಚಳವಳಿ ನಡೆಯುತ್ತಿದ್ದಾಗ ಆ ಅಭಿಮಾನದ ಸಾರದಲ್ಲಿದ್ದದ್ದು ರೈತ-ಕೂಲಿ ಬಡ ತೆಲುಗರ ಅಭಿವೃದ್ಧಿಯ ಆಕಾಂಕ್ಷೆಗಳೇ.

ಆದರೆ ನಮ್ಮ ಸಾರಸ್ವತ ಲೋಕ ತೋರುತ್ತಿರುವ ಹಾಗೂ ಸರ್ಕಾರ ಜನತೆಯ ಮೇಲೆ ಹರಿಬಿಟ್ಟಿರುವ ಅಖಂಡ ಕನ್ನಡಾಭಿಮಾನದ ಸಾರವೇನು? ಈ ಕನ್ನಡತ್ವದ ಅರ್ಥವೇನು?

ಇದಕ್ಕೆ ಬಿಜೆಪಿ ಸರ್ಕಾರವೇ ಸ್ಪಷ್ಟ ಉತ್ತರ ಕೊಟ್ಟಿದೆ. ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನೆ ಮಾಡುವವರು ವಿಶ್ವ ಮಟ್ಟದಲ್ಲಿ ಕನ್ನಡದ ಮತ್ತು ಕರ್ನಾಟಕದ ಹೆಮ್ಮೆಯನ್ನು ಎತ್ತಿಹಿಡಿದವರಾಗಿರಬೇಕು ಎನ್ನುವ ನೆಲೆಯಲ್ಲಿ ಇನ್ಫೋಸಿಸ್ ನಾರಾಯಣ ಮೂರ್ತಿಗಳನ್ನು ಬಿಜೆಪಿ ಸರ್ಕಾರ ಆಹ್ವಾನಿಸಿದೆ. ನಾರಾಯಣ ಮೂರ್ತಿಗಳನ್ನು ಕನ್ನಡದ ಹೆಮ್ಮೆ ಎಂದು ಬಿಂಬಿಸುವ ಮೂಲಕ ಬಿಜೆಪಿ ಸರ್ಕಾರ ತನ್ನ ಈವರೆಗಿನ ಎಲ್ಲಾ ಜನವಿರೋಧಿ ಆರ್ಥಿಕ ಮತ್ತು ಸಾಂಸ್ಕೃತಿಕ ನೀತಿಗಳಿಗೆ ಮಾನ್ಯತೆ ಪಡೆದುಕೊಳ್ಳುವ ಹುನ್ನಾರ ನಡೆಸಿದೆ. ಆದರೆ ನಿಜಕ್ಕೂ ಇನ್ಫೋಸಿಸ್ ನಾರಾಯಣ ಮೂರ್ತಿಗಳು ಪ್ರತಿನಿಧಿಸುವುದೇನನ್ನು?

ಅವರು ಜಾಗತೀಕರಣದ ಕಾಲಘಟ್ಟದಲ್ಲಿ ಒಂದು ಸಾಫ್ಟ್‌ವೇರ್ ಸಾಮ್ರಾಜ್ಯವನ್ನು ಕಟ್ಟಿ ದೇಶವಿದೇಶಗಳಲ್ಲಿ ಕರ್ನಾಟಕದ ಕೀರ್ತಿಯನ್ನು ಪಸರಿಸಿದರು ಎಂಬ ಮಾಧ್ಯಮ ಪ್ರೇರಿತ ಮೂಢನಂಬಿಕೆಯೇ ಇದರ ಹಿಂದೆ ಇದೆ. ಇದು ಪೊಳ್ಳು ಅಭಿಮಾನ. ವಿದೇಶಗಳಲ್ಲಿ ನಾರಾಯಣ ಮೂರ್ತಿಯವರಿಂದ ಗೊತ್ತಾಗಿರುವುದು ಬೆಂಗಳೂರೇ ಹೊರತು ಕರ್ನಾಟಕವಲ್ಲ. ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ನಾರಾಯಣ ಮೂರ್ತಿಗಳ ಬಗೆಗೆ ವಿಶೇಷ ಮೆಚ್ಚುಗೆ ಏಕೆಂದರೆ ಅವರು ಭಾರತದ ಪ್ರತಿಭೆಗಳನ್ನು ಅಗ್ಗದ ರೇಟಿಗೆ ಬಾಡಿಗೆಗೆ ಕೊಡುತ್ತಾರೆ! ನಮ್ಮ ಬಹುಪಾಲು ಸಾಫ್ಟ್‌ವೇರ್ ಎಕ್ಸ್‌ಪೋರ್ಟ್‌ಗಳೆಲ್ಲಾ ಒಂದು ರೀತಿಯಲ್ಲಿ ವೈಭವೀಕೃತ ಬಾಡಿ ಶಾಪಿಂಗ್ ಉದ್ಯಮವೇ! ಡಾಲರ್‌ಗೂ ಮತ್ತು ರೂಪಾಯಿಗೂ ಇರುವ ಅಜಗಜಾಂತರ ವ್ಯತ್ಯಾಸವೇ ಅವರ ಲಾಭದ ಮೂಲ. ರೂಪಾಯಿಯ ಅಪಮೌಲ್ಯ ಹೆಚ್ಚಿದಷ್ಟೂ ಅವರ ಲಾಭ ಹೆಚ್ಚುತ್ತದೆ. ಆದರೆ ಈ ಅಪಮೌಲ್ಯ ಈ ನಾಡಿನ 90ಕ್ಕೂ ಹೆಚ್ಚು ಜನರು ಆಧರಿಸುವ ಆರ್ಥಿಕತೆಯ ಶಾಖೆಗಳ ಮೇಲೆ ತೀವ್ರ ಪ್ರಭಾವ ಬೀರುತ್ತದೆ. ಹೀಗೆ ನಾರಾಯಣ ಮೂರ್ತಿಗಳ ಯಶಸ್ಸಿನ ಸೌಧ ಕಟ್ಟಲಾಗಿರುವುದೇ ಉಳಿದ ಆರ್ಥಿಕತೆಯ ಅವನತಿಯ ಮೇಲೆ. ಆದ್ದರಿಂದಲೇ ನಾರಾಯಣ ಮೂರ್ತಿಗಳು ಸಾಫ್ಟ್‌ವೇರಿಗಳ ಕಣ್ಮಣಿಯಾಗಿರಬಹುದು. ಆದರೆ ಉಳಿದ ಕನ್ನಡಿಗರ ಆರ್ಥಿಕತೆಯ ಕಣ್ಣು ಕಿತ್ತವರು ಅವರು...

ನಾರಾಯಣ ಮೂರ್ತಿಗಳು ಪ್ರತಿನಿಧಿಸುವ ಸಾಫ್ಟ್‌ವೇರ್ ಬಾಡಿ ಶಾಪಿಂಗ್ ಆರ್ಥಿಕತೆಗೆ ಕನ್ನಡ ಒಂದು ಅಡ್ಡಿ. ಮೀಸಲಾತಿ ಒಂದು ದುಸ್ವಪ್ನ. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಕನ್ನಡ ಸಂಸ್ಕೃತಿಗೆ ನಾರಾಯಣ ಮೂರ್ತಿಯವರು ಪ್ರತಿನಿಧಿಸುವ ಕಬಳಿಕೆ ಸಂಸ್ಕೃತಿ ತದ್ವಿರುದ್ಧವಾದದ್ದು. ಅವರ ಮಾರುಕಟ್ಟೆ ಆರ್ಥಿಕತೆಯಲ್ಲಿ ಯಾವುದೇ ಸಾಮಾಜಿಕ ಜವಾಬ್ದಾರಿಗಳೂ ಇಲ್ಲ, ಅಲ್ಲಿ ಲಾಭವೇ ಧರ್ಮ ಮತ್ತು ಸಂವಿಧಾನ. ಹೀಗಾಗಿ ಅಲ್ಲಿ 'ಪ್ರತಿಭೆ' ಇಲ್ಲದವರಿಗೆ ಕೆಲಸವಿಲ್ಲ. ಆದರೆ 2005ರಲ್ಲಿ ಯುಜಿಸಿಯ ಅಧ್ಯಕ್ಷರಾದ ಸುಖದೇವ್ ಥೋರಟ್‌ರವರು ನಡೆಸಿದ ಅಕೆಡೆಮಿಕ್ ಸ್ಟಿಂಗ್ ಅಧ್ಯಯನದಲ್ಲಿ ಬಯಲಾದಂತೆ ಪ್ರತಿಭೆ ಇದ್ದರೂ ಪ್ರಧಾನವಾಗಿ ದಲಿತ-ಮುಸ್ಲಿಂ ಹಿನ್ನೆಲೆಯಿಂದ ಬಂದವರಿಗೆ ವಿಶೇಷ ಆದ್ಯತೆಯನ್ನೇನೂ ಅವರು ಕೊಡುವುದಿಲ್ಲ. ಇದು ಎಲ್ಲಾ ಬಂಡವಾಳಶಾಹಿಗಳಿಗೂ ಅನ್ವಯವಾಗುತ್ತದಾದರೂ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ ಉದ್ಯಮ ಅದರಲ್ಲಿ ಮುಂಚೂಣಿಯಲ್ಲಿರುತ್ತದೆ. ಅದರ ನಾಯಕ ನಾರಾಯಣ ಮೂರ್ತಿಗಳು. ಅವರು ಹೇಗೆ ಕನ್ನಡದ ಹೆಮ್ಮೆಯಾಗಲು ಸಾಧ್ಯ?

ಇನ್ಫೋಸಿಸ್ ನಾರಾಯಣ ಮೂರ್ತಿಗಳಂಥ ಭಾರತದ ಬೃಹತ್ ಉದ್ಯಮಿಗಳು ಜಾಗತೀಕರಣದ ಕಾಲಘಟ್ಟದಲ್ಲಿ ಅತಿ ಹೆಚ್ಚು ಲಾಭ ಮಾಡಲು ಸಾಧ್ಯವಾಗಿರುವುದು ಜನರಿಗೆ ದಕ್ಕಬೇಕಾದ ಸಂಪನ್ಮೂಲಗಳನ್ನು ಸರ್ಕಾರ ಅವರಿಗೆ ದುಗ್ಗಾಣಿ ಬೆಲೆಗೆ ಒದಗಿಸುತ್ತಿರುವುದಕ್ಕೆ. ಈ ದೇಶದ ಬಡವರಿಗೆಲ್ಲಾ ಉಚಿತ ಆಹಾರ ಒದಗಿಸಲು 60,000 ಕೋಟಿ ರೂಪಾಯಿ ಸಾಕು. ಆದರೆ ಅಷ್ಟು ಹಣ ಇಲ್ಲವೆಂದ ಸರ್ಕಾರ ಕಳೆದ ಬಜೆಟ್ಟಿನಲ್ಲಿ ನಾರಾಯಣ ಮೂರ್ತಿಗಳು ಸಂಕೇತಿಸುವ 20 ದೊಡ್ಡ ಕಾರ್ಪೊರೇಟ್ ಸಂಸ್ಥೆಗಳಿಗೆ 5 ಲಕ್ಷ ಕೋಟಿ ರೂಪಾಯಿಗಳ ತೆರಿಗೆಯನ್ನು ಮಾಫಿ ಮಾಡಿತು. ಆದ್ದರಿಂದಲೇ ಈ ದೇಶದಲ್ಲಿ ಏಕಕಾಲದಲ್ಲಿ ಇನ್ಫೋಸಿಸ್‌ಗಳು ಸಾವಿರಾರು ಕೋಟಿ ತ್ರೈಮಾಸಿಕ ಲಾಭ ಘೋಷಿಸುತ್ತವೆ. ಅದೇ ಸಮಯದಲ್ಲಿ ಪ್ರತಿವರ್ಷ 17,000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇದು ಒಂದೇ ಅಭಿವೃದ್ಧಿ ಮಾದರಿಯ ಎರಡು ಮುಖ. ನಾರಾಯಣ ಮೂರ್ತಿಗಳು ಈ ಅಭಿವೃದ್ಧಿ ಮಾದರಿಯ ಪ್ರೇರಕರೂ ಹೌದು. ಫಲಾನುಭವಿಗಳೂ ಹೌದು. ಅವರನ್ನು ಕರ್ನಾಟಕದ ಹೆಮ್ಮೆಯ ಪ್ರತಿನಿಧಿಯಾಗಿಸುವ ಮೂಲಕ ಯಡಿಯೂರಪ್ಪನವರ ಸರ್ಕಾರ ಜನವಿರೋಧಿ ಅಭಿವೃದ್ಧಿ ಮಾದರಿ ಮತ್ತು ಅಭಿವೃದ್ಧಿ ಸಂಸ್ಕೃತಿಯನ್ನೇ ಜನರ ಆಯ್ಕೆ ಎಂಬ ಸಂದೇಶ ನೀಡಲು ಪ್ರಯತ್ನಿಸುತ್ತಿದೆ.

ಆದ್ದರಿಂದಲೇ ಆರ್ಥಿಕ ಮತ್ತು ಭಾಷಿಕ ಸಾಮ್ರಾಜ್ಯಶಾಹಿ ಎರಡಕ್ಕೂ ಸಂಕೇತದಂತಿರುವ ಇನ್ಫೋಸಿಸ್ ನಾರಾಯಣ ಮೂರ್ತಿಗಳನ್ನು ಬಿಜೆಪಿ ಸರ್ಕಾರ ಉದ್ಘಾಟನೆಗೆ ಕರೆದಿರುವುದು ಅದರ ಜನವಿರೋಧಿತನಕ್ಕೆ ತಕ್ಕನಾಗಿಯೇ ಇದೆ. ನಾರಾಯಣ ಮೂರ್ತಿ ಉದ್ಘಾಟನೆ ಮಾಡಿದರೂ ಮಾಡದಿದ್ದರೂ ಜನತೆಯ ಬದುಕಿನ ಮತ್ತು ಭಾಷೆಯ ಸರ್ವಾಂಗೀಣ ಅವನತಿಗೆ ಸಾರಥ್ಯ ವಹಿಸಿರುವ ಸರ್ಕಾರವೇ ಕೃತಕ ಸಂಭ್ರಮದ ಸೂತಕದಲ್ಲಿ ಅದನ್ನು ಮರೆಮಾಚುವ ಪ್ರಯತ್ನವನ್ನು ನೈಜ ಕನ್ನಡಿಗರು ಮತ್ತು ನಾಡಪ್ರೇಮಿಗಳೆಲ್ಲಾ ವಿರೋಧಿಸಲೇಬೇಕಿದೆ. ಇವತ್ತಿನ ಸಂದರ್ಭದಲ್ಲಿ ಅದೇ ನಿಜವಾದ ಕನ್ನಡತನ. ಅದೇ ನಿಜವಾದ ನಾಡಪ್ರೇಮ. ಬಿಜೆಪಿ ಸರ್ಕಾರ ಮತ್ತು ನಾರಾಯಣ ಮೂರ್ತಿಗಳು ಪ್ರತಿನಿಧಿಸುವ ಆರ್ಥಿಕ ಆಕ್ರಮಣಕ್ಕೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಂಡ ಕರ್ನಾಟಕದ ಸಹಸ್ರಾರು ರೈತಾಪಿಗಳಿಗೆ, ಬವಣೆಯಿಂದ ಬದುಕುತ್ತಿರುವ ಕೋಟ್ಯಾಂತರ ಬದುಕಿಗೆ ತೋರುವ ನಿಜವಾದ ಗೌರವ.

...ಂದು ಸಮಾರಂಭ ಮತ್ತು ಒಂದು ತಪ್ಪಿದ ಅನಾಹುತ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

...ತ್ತು ಭಾನುವಾರ. ಜೊತೆಗೆ ಬೆಂಗಳೂರಿನಲ್ಲಿ ...ಮತ್ತು ಐರ್ಲೆಂಡ್ ನಡುವೆ ವಿಶ್ವಕಪ್ ಕ್ರಿಕೆಟ್ ...ನಡೆಯುತ್ತಿತ್ತು, ಆದರೂ ಮಾರ್ಚ್ ಆರರಂದು ...ಮುಲು ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ...ಂಕೇಶ್ 76' ಕಾರ್ಯಕ್ರಮ ತುಂಬಾ ಚೆನ್ನಾಗಿ ...

...ಲು ಪಿ. ಲಂಕೇಶರ ಬರವಣಿಗೆ ಮತ್ತು ...ನ್ನು ಕುರಿತು ಮಾತನಾಡಿದ ಡಾ. ನಟರಾಜ್ ...ರ್ ಲಂಕೇಶರ ವ್ಯಕ್ತಿತ್ವ, ಅವರ ಸಾಮಾಜಿಕ ...ಕೆಟಿಪ್ಪಣಿ, ಕಾವ್ಯ, ನಾಟಕಗಳನ್ನಲ್ಲದೆ ಪ್ರಸ್ತುತ ...ಗಳತ್ತ ಕೂಡ ತಮ್ಮ ದೃಷ್ಟಿಯನ್ನು ...ರಿ...ು.

...ದ ವರ್ಷ 'ಲಂಕೇಶ್ 75' ...ಮವನ್ನು ನಡೆಸಿದ ಸಂದರ್ಭದಲ್ಲಿ ಚಿಡ್ಡಿಗಳು ...ನ್ನ 'ಗೋಹತ್ಯೆ ನಿಷೇಧ' ಕಾನೂನು ದೊಡ್ಡ ... ಕೇಂದ್ರವಾಗಿತ್ತು. ಆಗ, ದೇವನೂರು ...ಕ ಅವರು "ಲಂಕೇಶರು ಇದ್ದಿದ್ದರೆ ಈ ... ನಿಷೇಧ ಎಂಬ ನರಹತ್ಯೆ ಅಜೆಂಡಾದ ... ಬಗ್ಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು ಎಂದು ...ು ಲಂಕೇಶರನ್ನು ಅವಗಾಹಿಸಿಕೊಂಡರೆ ನನಗೆ ...ನ್ನಿಸಿತು-ಲಂಕೇಶ್ ಗೋಮಾಂಸ ಸೇವನೆಗೆ ...ಯಿ ಖಾದ್ಯ' ಎಂದು ಹೆಸರಿಡುತ್ತಿದ್ದರು. ...ರಾಜ್ಯದ ತುಂಬ ಪ್ರಸಿದ್ಧಿಗೆ ತರುತ್ತಿದ್ದರು. ...ರ್ಥ ಬಗೆಹರಿಯುತ್ತಿತ್ತು" ಎಂದಿದ್ದರು.

...ಯೇ ಈಗ ಸಾಂಸ್ಕೃತಿಕ ವಲಯದಲ್ಲಿ ಗಾಢ ... ಕೇಂದ್ರವಸ್ತು ಆಗಿರುವುದು ಮಡೆಸ್ನಾನ ...ದಕ್ಕೆ ಹೆಗ್ಗೋಡಿನ ಅಕ್ಷರ ನೀಡಿರುವ ... ಆದ್ದರಿಂದ ಹುಳಿಯಾರ್ ಅವರು ತಮ್ಮ ...ಲ್ಲಿ "ಲಂಕೇಶ್ ಇದ್ದಿದ್ದರೆ ಪ್ರಸ್ತುತ ...ಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು" ಎಂಬ ಪ್ರಶ್ನೆಯನ್ನು ತಮಗೇ ಹಾಕಿಕೊಳ್ಳುತ್ತ "ಕೆಲವರನ್ನು 'ಲೆಫ್ಟ್‌ಓವರ್ ಇಂಟಲೆಕ್ಚುಯಲ್ಸ್' (leftover intellectuals) ಎಂದು ಕರೆಯುತ್ತಿದ್ದರು" ಎಂದು ಹೇಳಿದಾಗ ಎಲ್ಲರೂ ಚಪ್ಪಾಳೆ ಹೊಡೆದರು.

ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ಓರ್ವ ಅಪ್ಪಟ ಜೆಂಟಲ್‌ಮ್ಯಾನ್. ಅವರನ್ನು ನಮ್ಮ ಸಮಾರಂಭಕ್ಕೆ ಆಹ್ವಾನಿಸಿದಾಗ ಅವರಿಗೆ ಪಿ.ಲಂಕೇಶ್ ಬಗ್ಗೆ ಅಷ್ಟು ಗೊತ್ತಿರಲಿಲ್ಲ, ಆದರೆ ಕಾರ್ಯಕ್ರಮಕ್ಕೆ ಬರುವ ಮುನ್ನ ಲಂಕೇಶ್ ಬಗ್ಗೆ ತಿಳಿದುಕೊಂಡಿದ್ದರು. ಮಾತ್ರವಲ್ಲ 'ಕರ್ನಾಟಕದ



ಬಿಕ್ಕಟ್ಟುಗಳು ಮತ್ತು ಪರಿಹಾರದ ಮಾರ್ಗಗಳು' ಎಂಬ ವಿಷಯ ಕುರಿತು ತಮ್ಮ ಮನಸ್ಸಿನಾಳದಿಂದ, ಅನುಭವದಿಂದ ಮನಮುಟ್ಟುವಂತೆ ಮಾತನಾಡಿದರು.

ಹಾಗೆಯೇ ಅಂದಿನ ಕಾರ್ಯಕ್ರಮಕ್ಕೆ ಆಗಮಿಸಿದ್ದ ಬಿಎಸ್‌ಪಿ ನಾಯಕ ಎನ್. ಮಹೇಶ್, ಸಿಪಿಐ ನಾಯಕ ಡಾ. ಸಿದ್ದನಗೌಡ ಪಾಟೀಲ್ ಮತ್ತು ಜನಶಕ್ತಿ ಸಂಘಟನೆಯ ಸಂಚಾಲಕ ಡಾ.ಎಚ್.ವಿ.ವಾಸು ಕೂಡ ನಮ್ಮ ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳನ್ನು ನಿವಾರಿಸಲು ಕಂಡುಕೊಳ್ಳಬೇಕಿರುವ ಮಾರ್ಗಗಳನ್ನು ಕುರಿತು ಮಾತನಾಡಿದರು.

ಒಂದು ರೀತಿಯಲ್ಲಿ ನ್ಯಾ. ಸಂತೋಷ್ ಹೆಗ್ಡೆಯವರಿಂದ ಹಿಡಿದು ನಿಮ್ಮ ಈ ಪತ್ರಿಕೆಯ ಸಂಪಾದಕಿಯಾದ ನನ್ನ ತನಕ ಅಂದು ಮಾತನಾಡಿದ ಎಲ್ಲರೂ ಪಿ.ಲಂಕೇಶರು ಬಯಸುತ್ತಿದ್ದ ರೀತಿಯಲ್ಲೇ ಆಡಳಿತ ಪಕ್ಷಕ್ಕೆ ವಿರುದ್ಧವಾಗಿ ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು ಲಂಕೇಶರ ಪರಂಪರೆಯನ್ನು ಸಮರ್ಪಕವಾಗಿ ಮುಂದುವರೆಸಿದೆವು....

****

ಅನಾಹುತ (accident) ಒಂದು ಸಂಭವಿಸುವುದಕ್ಕೆ ಅರೆಕ್ಷಣದ ಮೈಮರೆಯುವಿಕೆ ಸಾಕು. ಒಂದೆರಡು ವಾರಗಳ ಹಿಂದೆ ನಾನು ಅರೆಕ್ಷಣದಲ್ಲಿ ದೊಡ್ಡ ಅನಾಹುತದಿಂದ ಬಚಾವಾದ ರೀತಿಯನ್ನು ನೆನೆಸಿಕೊಂಡರೆ ಈಗಲೂ ಮೈ ಜುಮ್ ಎನ್ನುತ್ತದೆ. ಇದು ನನಗೂ ಒಂದು ಪಾಠವಾಗಲಿ ಮತ್ತು ಇತರರಿಗೆ ಎಚ್ಚರಿಕೆ ಆಗಿರಲಿ ಎಂದು ಅದನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ಏನಾಯಿತೆಂದರೆ, ಅಮ್ಮ ಮತ್ತು ನನ್ನ ಪುಟ್ಟ ಇಶಾಳ ಜೊತೆ ಟ್ರೈನಿನಲ್ಲಿ ಮಂಗಳೂರಿಗೆ ಹೊರಟಿದ್ದೆ. ಅವತ್ತು ಗಡಿಬಿಡಿಯಲ್ಲಿ ಇಶಾಳಿಗೆ ಬಿಸ್ಕತ್‌ಗಳನ್ನು ಪ್ಯಾಕ್ ಮಾಡಿಕೊಳ್ಳಲು ಅಮ್ಮ ಮರೆತಿದ್ದರು. ಬೆಂಗಳೂರು ಮತ್ತು ಮಂಗಳೂರಿನ ನಡುವೆ ರೈಲು ಮಾರ್ಗದಲ್ಲಿ ಬರುವ ರೋಮಾಂಚಕಾರಿ ಸುರಂಗಗಳು ಮತ್ತು ಸೇತುವೆಗಳು ಇನ್ನೂ ಪ್ರಾರಂಭವಾಗಿರದಿದ್ದ ಕಾರಣ ಇಶಾಳಿಗೆ ಬೋರ್ ಹೊಡೆಯಲಾರಂಭಿಸಿತು. ಒಂದೇ ಸಮನೆ ಬಿಸ್ಕತ್ ಬೇಕೆಂದು ಪಿರಿಪಿರಿ ಮಾಡಲಾರಂಭಿಸಿದಳು. ಆಗ ಒಂದು ಪುಟ್ಟ ನಿಲ್ದಾಣದಲ್ಲಿ ಟ್ರೈನ್ ನಿಂತಾಗ ಇಶಾಳೊಂದಿಗೆ . ಬಿಸ್ಕತ್ ಖರೀದಿಸಲು ಟ್ರೈನಿನಿಂದ ಇಳಿದೆ.

ನಾವಿಬ್ಬರೂ ಬಿಸ್ಕತ್ ಖರೀದಿಸಿ ಟ್ರೈನಿನ ಹತ್ತಿರ ಬರುವಷ್ಟರಲ್ಲಿ ಟ್ರೈನು ಚಲಿಸಲಾರಂಭಿಸಿತು. ಒಂದು ಬೋಗಿಯ ಬಾಗಿಲಲ್ಲೇ ಯಾರೋ ಹತ್ತಾರು ಸಾಮಾನುಗಳನ್ನು ಇರಿಸಿದ್ದರಿಂದ ಅದನ್ನು ಹತ್ತುವುದು ಸುಲಭವಲ್ಲ ಎಂದು ಮುಂದಿನ ಬೋಗಿಗೆ ಹೋದೆವು. ಅಲ್ಲೂ ಯಾರೋ ಒಬ್ಬ ಪುರುಷ ತನ್ನ ಮಗುವಿನೊಂದಿಗೆ ಟ್ರೈನನ್ನು ಹತ್ತುತ್ತಿದ್ದರಿಂದ ಮತ್ತೊಂದು ಬೋಗಿಯತ್ತ ನಾನು ಮತ್ತು ಇಶಾ ಓಡಿದೆವು.

ಇಶಾಳನ್ನು ಎತ್ತಿಕೊಂಡ ನಾನು ಆ ಬೋಗಿಯನ್ನು ಹತ್ತಿದೆ. ಈಗಾಗಲೇ ನನ್ನ ಭುಜಕ್ಕೆ ಬರುವಷ್ಟು ಎತ್ತರವಾಗಿರುವ ಇಶಾಳ ಒಂದು ಚಪ್ಪಲಿ ಬೋಗಿಯ ಮೆಟ್ಟಲಿಗೆ ಸಿಕ್ಕಿಹಾಕಿಕೊಂಡಿತು. ಅದು ಹೇಗೋ ಇಬ್ಬರು ಬೋಗಿಯನ್ನು ಹೊಕ್ಕೆವು. ಆಗ ಆ ಬೋಗಿಯಲ್ಲಿದ್ದ ಪುರುಷರೊಬ್ಬರು "ಏನ್ರೀ, ಮಗಳನ್ನು ಹಿಡಿದು ಮೂವ್ ಆಗುತ್ತಿರುವ ಟ್ರೈನ್ ಹತ್ತುತ್ತೀರಲ್ಲ..." ಎಂದು ನನ್ನನ್ನು ಬೈದರು. ಇಶಾಳಿಗೂ ಅದೆಂತಹದ್ದೋ ಅಪಾಯದಿಂದ ಬಚಾವಾದಂತೆ ಅನ್ನಿಸಿತೇನೋ... "ಅವ್ವಾ, ಒಂದು ಚಪ್ಪಲಿ ಬಿದ್ದುಹೋಯಿತು" ಎಂದು ಕಣ್ಣೀರಿಡಲಾರಂಭಿಸಿದಳು.. ಆಗ ಆ ವ್ಯಕ್ತಿ "ಪರವಾಗಿಲ್ಲ ಬಿಡು. ಚಪ್ಪಲಿ ತಾನೆ. ಇನ್ನೇನೂ ಆಗಲಿಲ್ಲವಲ್ಲ" ಎಂದು ಆಕೆಗೆ ಸಮಾಧಾನ ಹೇಳಿದರು.

ಇಶಾಳ ಜೊತೆ ಅಮ್ಮ ಇದ್ದ ಎಸಿ ಕೋಚನ್ನು ತಲುಪಿದಾಗ ಅದರೊಳಗೆ ಸಾಕಷ್ಟು ಚಳಿ ಇದ್ದರೂ ನನ್ನ ಮೈ ಸಣ್ಣಗೆ ಬೆವರುತ್ತಿತ್ತು, ನಾನ್ಯಾಕೆ ಹಾಗೆ ಮಾಡಿದೆ? ಇಶಾಳೊಂದಿಗೆ ಇರುವಾಗ ಬಹಳ ಎಚ್ಚರ ವಹಿಸುವ ನಾನು ಯಾಕೆ ಎಚ್ಚರ ವಹಿಸಲಿಲ್ಲ? ನನ್ನ ಬುದ್ಧಿಗೆ ಏನಾಗಿತ್ತು? ಇಶಾಳನ್ನು ಎತ್ತಿಕೊಂಡು ನಾನು ಅಂತಹ ದುಸ್ಸಾಹಸಕ್ಕೆ ಯಾಕೆ ಮುಂದಾದೆ? ನನಗೂ ವಯಸ್ಸಾಗುತ್ತಿದೆ. ದಿನವಿಡೀ ಕುರ್ಚಿಯಲ್ಲಿ ಕೂತುಕೂತು ನನ್ನ ದೈಹಿಕ ಸಾಮರ್ಥ್ಯ ಕುಗ್ಗಿದೆ. ನನ್ನ ದೇಹ ಈಗ ಅಷ್ಟು ಚುರುಕಾಗಿ ಚಲಿಸುವುದಿಲ್ಲ... ಅಂತಹದ್ದರಲ್ಲಿ ನಾನು ಅರೆಕ್ಷಣ ನಿಂತು ಯೋಚಿಸುವ ಬದಲಾಗಿ ನಮ್ಮಿಬ್ಬರ ಜೀವವನ್ನೇ ಅಪಾಯಕ್ಕೆ ಒಡ್ಡಿದ್ದು ಪೆದ್ದುತನವಲ್ಲದೆ ಮತ್ತೇನಲ್ಲ... ಆಕಸ್ಮಾತ್ ಆ ಟ್ರೈನ್ ನಾನು ಲೆಕ್ಕಿಸಿದ್ದಕ್ಕಿಂತ ಸ್ವಲ್ಪ ವೇಗವಾಗಿ ಚಲಿಸಿದ್ದರೆ ನಮ್ಮಿಬ್ಬರಿಗೂ ಅಪಾಯ ಕಟ್ಟಿಟ್ಟ ಬುತ್ತಿ....

ಇವತ್ತಿಗೂ ಆ ನೆನಪು ನನ್ನನ್ನು ಕಾಡುತ್ತದೆ. ಮೈ ಜುಮ್ ಅನ್ನುತ್ತದೆ. ನಾನು ಪಾಠ ಕಲಿತೆ. ಬೇರೆಯವರ್‍ಯಾರೂ ಅಂತಹ ಪರಿಸ್ಥಿತಿಯಲ್ಲಿ ನನ್ನಂತೆ ವರ್ತಿಸದೆ ಎಚ್ಚರ ವಹಿಸಲಿ ಎಂದು ಆಶಿಸುತ್ತೇನೆ...

ಹಾಗೆಯೇ, ರೇಲ್ವೆ ಸಚಿವಾಲಯಕ್ಕೆ ಪತ್ರ ಬರೆದು ಇನ್ನು ಮುಂದೆ ಟ್ರೈನುಗಳು ರೈಲ್ವೆ ನಿಲ್ದಾಣದಿಂದ ಹೊರಗೆ ಹೋಗುವ ತನಕ ಕಡಿಮೆ ವೇಗದಲ್ಲಿ ಚಲಿಸಿದರೆ ಉತ್ತಮ ಎಂಬ ಸಲಹೆಯನ್ನು ಕೊಡಬೇಕೆಂದುಕೊಂಡಿದ್ದೇನೆ....

ಅಷ್ಟೇ ಅಲ್ಲ, ನನ್ನ ಪೆದ್ದುತನಕ್ಕೆ ತಲೆ ಚಚ್ಚಿಕೊಳ್ಳುತ್ತಿದ್ದೇನೆ... ಸದ್ಯ, ಇಶಾಳಿಗೂ, ನನಗೂ ಏನೂ ಆಗಲಿಲ್ಲವಲ್ಲ ಎಂದು ಮತ್ತೆ ಮತ್ತೆ ನಿಟ್ಟುಸಿರುಬಿಡುತ್ತಿದ್ದೇನೆ... •


ಅಮೆರಿಕದಲ್ಲೊಬ್ಬ ಶಿಶುಕಾಮಿ ಪ್ರಕಾಶಾನಂದ ಸ್ವಾಮೀಜಿ!



ಅಮೆರಿಕದ ಹಿಂದೂ ಭಕ್ತರು ದಿಗ್ಭ್ರಾಂತರಾಗಿದ್ದಾರೆ. ಸಹಸ್ರಾರು ಮಂದಿ ಅದನ್ನು ನಂಬುಗೆ ಕಳಚಿ ಬಿದ್ದಂತಹ ತಲ್ಲಣಕ್ಕೀಡಾಗಿದ್ದಾರೆ. ಕೆಲವರಲ್ಲಿ ಅಸಹ್ಯ, ಮತ್ತೆ ಕೆಲವರಲ್ಲಿ ನಂಬಬೇಕೋ ಬಿಡಬೇಕೋ ಎಂಬಂಥ ಗೊಂದಲ. ಇದೆಲ್ಲದಕ್ಕೆ ಕಾರಣ ಪುರುಷ ಸ್ವಾಮಿ ಪ್ರಕಾಶಾನಂದನೆಂಬ ಕಾವಿ ಕಾಮುಕ!

ಅಮೆರಿಕದ ಆಸ್ಟಿನ್ ರಾಜ್ಯದಲ್ಲಿ ಅಖಂಡ ಇನ್ನೂರು ಎಕರೆ ಪ್ರದೇಶದಲ್ಲಿ ಮೈಚಾಚಿಕೊಂಡಿರುವ 'ಬರ್ಸಾನಾ ಧಾಮ'ದ ಪೀಠಾಧೀಶ ಪ್ರಕಾಶಾನಂದ ಅಲಿಯಾಸ್ ಶ್ರೀ ಸ್ವಾಮೀಜಿ. ಈಗ್ಗೆ ಮೂರು ವರ್ಷದ ಹಿಂದೆ ಆಶ್ರಮದ ಯುವತಿಯರಿಬ್ಬರು ಸ್ವಾಮಿಯ ವಿರುದ್ಧ ಲೈಂಗಿಕ ದೌರ್ಜನ್ಯದ ದೂರು ದಾಖಲಿಸಿದ್ದರು. ಈ ಬಗ್ಗೆ ವಿಸ್ತೃತ ತನಿಖೆ ನಡೆಸಿದ ಅಮೆರಿಕ ನ್ಯಾಯಾಲಯ ಸ್ವಾಮಿ ತಪ್ಪಿತಸ್ಥನೆಂದು ತೀರ್ಪಿತ್ತು ವಾರೆಂಟ್ ಹೊರಡಿಸಿದೆ. 82 ರ ಹರೆಯದ ಸ್ವಾಮಿ ಕಡೆಗಾಲವನ್ನು ಸರಳ ಹಿಂದೆ ಕಳೆಯಬೇಕಾಗಿರುವುದು... ನಿಶ್ಚಿತವಾದಂತಾಗಿದೆ.

ದೇಶ ಬಿಟ್ಟರೂ ಮೌಢ್ಯ ಬಿಡಲಾರದ ಹಿಂದೂ ಮಂದಿಗೆ ಕಳ್ಳ ಸ್ವಾಮಿ ಸರಿಯಾಗಿ ಮಂಕುಬೂದಿ ಎರಚಿದ್ದ. ಚಂದಾ ಎತ್ತಿದ ಹಣದಿಂದ ಆಶ್ರಮಕ್ಕೆ ಹೈಟೆಕ್ ಟಚ್ ಕೊಟ್ಟು ದಿನೇದಿನೇ ಭಕ್ತರನ್ನು ಸೆಳೆಯಲಾರಂಭಿಸಿದ. ಹಾಗೆ ಬಂದವರಿಗೆ ಸಂಗೀತ ಚಿಕಿತ್ಸೆ, ಯೋಗ ಶಿಬಿರ ಅಂತೆಲ್ಲ ಮರುಳು ಮಾಡುವಲ್ಲಿ ಯಶಸ್ವಿಯಾದ. ಇದು ಯಾವ ರೀತಿ ಪ್ರಚಾರ ಪಡೆಯಿತೆಂದರೆ, ಅಮೆರಿಕಾವಾಸಿ ಹಿಂದೂಗಳು ಕುಟುಂಬ ಸಮೇತರಾಗಿ ಬರ್ಸಾನಾ ಧಾಮದಲ್ಲಿ ಬೀಡು ಬಿಡಲಾರಂಭಿಸಿದರು.



ಇದೆಲ್ಲದರಿಂದಾಗಿ ಸ್ವಾಮಿಯ ಕೀರ್ತಿಯ ಮೀಟರು ಏರತೊಡಗಿತು. ವಯಸ್ಸೂ ಕೂಡಾ ಅದಕ್ಕೆ ಪೈಪೋಟಿಯಲ್ಲಿತ್ತು. ತೆಪ್ಪಗೆ ತನ್ನ ಪಾಡಿಗೆ ತಾನು ಆಧ್ಯಾತ್ಮ, ಯೋಗ ಅಂತೆಲ್ಲ ಬೋಧಿಸ್ತುತ್ತಿದ್ದರೆ ಮಾನ ಮರ್ಯಾದೆಗಳಾದರೂ ಉಳಿಯುತ್ತಿದ್ದವು. ಆದರೆ ಅದಾಗಲೇ ವೃದ್ಧಾಪ್ಯ ಅಡರಿಕೊಂಡಿದ್ದ ಖಾವಿಧಾರಿ ಪ್ರಕಾಶಾನಂದನೊಳಗೆ ಕಾಮದ ಛಳಕು ಮೆಲ್ಲಗೆ ಗರಿಗೆದರಲಾರಂಭಿಸಿತು. ಇದಕ್ಕೆ ಆಶ್ರಮದ ಕಟ್ಟಾ ಭಕ್ತೆಯರನೇಕರು ಬಲಿ ಬಿದ್ದರೂ ಅವರೆಲ್ಲ ಅದನ್ನೂ ಆಧ್ಯಾತ್ಮದ ಭಾಗವೆಂದು ಪರಿಗಣಿಸಿದ್ದರಿಂದಲೋ ಏನೋ ಕಾಮಿ ಸ್ವಾಮಿ ಬಚಾವಾಗಿದ್ದ.

ಈ ನಡುವೆ ಭಕ್ತ ದಂಪತಿಯೊಂದು ಆಶ್ರಮಕ್ಕೆ ಅಡಿಯಿರಿಸಿ ಕಳ್ಳ ಸ್ವಾಮಿಯ ಮಂಕುಬೂದಿಗೆ ಮೈಮನಸ್ಸುಗಳನ್ನೊಪ್ಪಿಸಿತು. ಇವರೊಂದಿಗೆ ಶ್ಯಾಮ ರೋಸ್ ಹಾಗೂ ಥಾನ್‌ಸೆನ್ ಕಜ್ಮೇರ್ ಎಂಬಿಬ್ಬರು ಮುದ್ದಾದ ಹೆಣ್ಣುಮಕ್ಕಳೂ ಸ್ವಾಮಿಯ ಭಕ್ತಗಣ ಸೇರಿಕೊಂಡರು.

ಈ ಸಂದರ್ಭದಲ್ಲಿ ಅಂದರೆ 1990 ರ ಹೊತ್ತಿಗೆ ಸ್ವಾಮಿಯ ಭಕ್ತಗಣ ಸೇರಿಕೊಂಡ ದಂಪತಿಯ ದೊಡ್ಡ ಮಗಳು ರೋಸ್‌ಗೆ 12 ವರ್ಷವಾದರೆ, ಚಿಕ್ಕವಳಿಗೆ 9 ವರ್ಷ. ಅದಾಗಲೇ ಕಾಮಯಾಗ ಶುರುವಿಟ್ಟಿದ್ದ ಪ್ರಕಾಶಾನಂದ ಈ ಪುಟ್ಟ ಬಾಲೆಯರ ಸ್ನಿಗ್ಧ ಸೌಂದರ್ಯಕ್ಕೆ ಹುಚ್ಚನಾಗಿದ್ದ. ಭಕ್ತಿ ಬೋಧನೆಯ ನೆಪದಲ್ಲಿ ಹತ್ತಿರ ಸೆಳೆದುಕೊಂಡ ದುಷ್ಟ ಸ್ವಾಮಿ ಮೆಲ್ಲಗೆ ಮುಂದುವರೆಯ ಹತ್ತಿದ. ಅದು ಏನೂ ಅರಿಯದ ಮನಸ್ಸು ಮತ್ತು ಅಜ್ಜನಂತಿದ್ದ ಸ್ವಾಮಿಯ ಬಗ್ಗೆ ಡೌಟು ಪಡುವಂಥ ಪ್ರೌಢಿಮೆಯೂ ಆ ಹೆಣ್ಮಕ್ಕಳಿಗಿರಲಿಲ್ಲ. ಆದರೆ ಕಾಮುಕ ಸ್ವಾಮಿ ಇಬ್ಬರನ್ನೂ ಬಳಸಿಕೊಂಡ. ಇದು ಒಂದಷ್ಟು ಕಾಲ ಗುಪ್ತವಾಗಿ ಮುಂದುವರೆದಿತ್ತಾದರೂ ಭಕ್ತಿಯಲ್ಲಿ ಮುಳುಗಿದ್ದ ದಂಪತಿಗೆ ಸ್ವಾಮಿಯ ಕಳ್ಳಾಟ ಅರಿವಿಗೆ ಬರಲೇ ಇಲ್ಲ.

ಆದರೆ ಸ್ವಾಮಿಯ ಕಾಮುಕತನಕ್ಕೆ ಸಿಕ್ಕು ನರಳಿದ ಹೆಣ್ಮಕ್ಕಳಿಬ್ಬರು ಪ್ರೌಢಾವಸ್ಥೆ ತಲುಪುತ್ತಲೇ ತಮ್ಮ ಮೇಲಾಗುತ್ತಿರುವ ದೌರ್ಜನ್ಯದ ಅರಿವಾಯಿತು. ಅಂತೂ 1990 ನಂತರ ನಡೆದ ದೌರ್ಜನ್ಯದ ವಿರುದ್ಧ ಈ ಹುಡುಗಿಯರು 2007 ರ ಹೊತ್ತಿಗೆ ಸಿಡಿದೆದ್ದರು. ವಿಷಯ ಭಕ್ತಿಯಲ್ಲಿ ಮುಂದೇಳುತ್ತಿದ್ದ ಪೋಷಕರಿಗೂ ತಿಳಿಯಿತು. ಕೊನೆಗೆ ಕಾಮಿ ಸ್ವಾಮಿಯ ವಿರುದ್ಧ ಪ್ರಕರಣವೂ ದಾಖಲಾಯಿತು.

ಈ ಬಗ್ಗೆ ವಿಸ್ತೃತ ತನಿಖೆ ನಡೆದ ಬಳಿಕ 2008 ರಲ್ಲಿ ಆಶ್ರಮಕ್ಕೆ ನುಗ್ಗಿದ ಪೊಲೀಸರು ಕಾಮಿ ಸ್ವಾಮಿಯ ಬುಡ ಕೊಡ್ಡು ಜೈಲಿಗೆ ಗದುಮಿದ್ದರು. ಅದಾಗಲೇ ಪ್ರಕಾಶಾನಂದ ಸ್ವಾಮಿ ಅಮೆರಿಕದ ಹಿಂದೂ ಭಕ್ತರ ಅಘೋಷಿತ ಧರ್ಮ ಗುರುವಾಗಿದ್ದರಿಂದ ಕೋಲಾಹಲವೆದ್ದಿತು. ಬಹುತೇಕರು ಹಣ್ಣು ಹಣ್ಣು ಮುದುಕ ಕಾಮುಕನೆಂಬುದನ್ನು ಒಪ್ಪಲು ಬಿಲ್‌ಕುಲ್ ರೆಡಿಯಿರಲಿಲ್ಲ, ಇದೆಲ್ಲದರ ನಡುವೆ ಸ್ವಾಮಿ ಬೇಲ್ ಪಡೆದು ಹೊರ ಬಂದಿದ್ದನಾದರೂ ವಿಚಾರಣೆ ಮುಂದುವರೆಯುತ್ತಿತ್ತು.

ಮೌಢ್ಯ ಎಂತಹುದಿರುತ್ತದೋ ನೋಡಿ, ಲೈಂಗಿಕ ದೌರ್ಜನ್ಯದಂಥ ಆರೋಪ ಹೊತ್ತು ಜೈಲು ಕಂಡು ಹೊರಬಂದ ಸ್ವಾಮಿ ಸೀದಾ ಆಶ್ರಮ ಹೊಕ್ಕಿದ್ದ. ಮೂಢ ಭಕ್ತರು ಕಿಂಚಿತ್ತೂ ಪ್ರಶ್ನಿಸದೆ ಆರಾಧನೆ ಮುಂದುವರೆಸಿದರು. ಅವರೆಲ್ಲರ ಕಣ್ಣಲ್ಲಿ ಆದ ದೌರ್ಜನ್ಯದ ವಿರುದ್ಧ ಸಿಟಿಗೆದ್ದ ಯುವತಿಯರು ವಿಲನ್‌ಗಳಂತೆಯೂ ಅವರಿಗೆ ಆಸರೆಯಾಗಿ ನಿಂತ ಪೋಷಕರು ದುಷ್ಟರಂತೆಯೂ ಕಂಡಿದ್ದರು.

ಆದರೀಗ ದೀರ್ಘ ತನಿಖೆಯ ಬಳಿಕ ಪ್ರಕಾಶಾನಂದ ಸ್ವಾಮಿ ಶುದ್ಧ ಕಾಮುಕ ಅಂತ ಅಮೆರಿಕದ ನ್ಯಾಯಾಂಗವೇ ಸಾರಿ ಹೇಳಿದೆ. ಈತನಿಗೆ ಏನಿಲ್ಲವೆಂದರೂ 20 ವರ್ಷ ಜೈಲು ಗ್ಯಾರಂಟಿ. ಈ ದುಷ್ಟ ಸ್ವಾಮಿಯ ಬಲಾತ್ಕಾರಕ್ಕೆ ವರ್ಷಾನು ಗಟ್ಟಲೆ ಬಲಿಯಾದ ಬಾಲೆಯರಿಗೀಗ ಏರು ಯೌವನ. ಅವರ ಮುಖದಲ್ಲಿ ನೋವಿನ ನಡುವೆಯೂ ಗೆಲುವಿನ ಗೆರೆ ಕಾಣಿಸುತ್ತಿದೆ.

ಆದರೆ ಜನರ ಮುಠ್ಠಾಳತನಗಳು ಮಾತ್ರ ಮರೆಯಾಗುವ ಯಾವ ಲಕ್ಷಣಗಳೂ ಕಾಣಸಿಗುತ್ತಿಲ್ಲ. ಅದಕ್ಕೆ ಕಾಮುಕ ಸ್ವಾಮಿಯ ಆಶ್ರಮದಲ್ಲಿ ಇಂದಿಗೂ ಬೀಡುಬಿಟ್ಟಿರುವ ಅವಿವೇಕ ಅಮೆರಿಕನ್ ಹಿಂದೂಗಳೇ ಸ್ಪಷ್ಟ ಸಾಕ್ಷಿ.

ಶಿಶುಕಾಮಿ ಪ್ರಕಾಶಾನಂದನ ಪೂರ್ವಾಪರ!

ಇಹದ ವಾಂಛೆಗಳನ್ನೆಲ್ಲ ತಹಬಂದಿಗೆ ತಂದು ಸನ್ಯಾಸಿಯಾದ ಪ್ರಕಾಶಾನಂದ ಲಂಗೋಟಿಯ ಮೇಲೆ ನಿಗಾ ತಪ್ಪಿ ಯಡವಟ್ಟು ಮಾಡಿಕೊಂಡಿದ್ದಾನೆ. ಆದುದರಿಂದಲೇ ವಿಶ್ವಾದ್ಯಂತ ಸುದ್ದಿಯಲ್ಲಿದ್ದಾನೆ. ಅಮೆರಿಕದ ಹಿಂದೂ ನೇತಾರನೀಗ ಶಿಶು ಕಾಮಿಯಾಗಿ ಅಸಹ್ಯ ಹುಟ್ಟಿಸಿದ್ದಾನೆ.



ಇಂಥಾ ಸ್ವಾಮಿಯ ಪೂರ್ವಾಪರಗಳು ಕೊಂಚ ಇಂಟರೆಸ್ಟಿಂಗ್ ಆಗಿವೆ. ಈತ ಮೂಲತಃ ಭಾರತದವನು 1929 ರಲ್ಲಿ ಅಯೋಧ್ಯೆಯ ಮರ್ಯಾದಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಪ್ರಕಾಶ ತನ್ನ 21 ನೇ ವಯಸ್ಸಿನಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದ.

ಅದಾಗಲೇ ಧಾರ್ಮಿಕ ಸಂಸ್ಕಾರಗಳ ಹುಚ್ಚು ಹತ್ತಿಸಿಕೊಂಡು ಸನ್ಯಾಸದೆಡೆಗೆ ಆಕರ್ಷಿತನಾಗಿದ್ದ ಪ್ರಕಾಶ ನೌಕರಿ ಹುಡುಕುವ ಬದಲು ಹಿಮಾಲಯದತ್ತ ಪಾದ ಬೆಳೆಸಿದ. ಒಂದಷ್ಟು ಕಾಲ ಕಾಡುಮೇಡು ಸುತ್ತಿದ ನಂತರ ಕೃಪಾಲ್‌ಜಿ ಜಗದ್ಗುರುವಿನ ಶಿಷ್ಯನಾಗಿ 'ಕೆಲಸ' ಶುರುವಿಟ್ಟ. ಗುರುಗಳೂ ಪ್ರಕಾಶನನ್ನು ಬಹುವಾಗಿ ಹಚ್ಚಿಕೊಂಡರು. ಕೃಪಾಲ್‌ಜಿ ಯೋಗದ ಬಗ್ಗೆ ಅಪಾರ ಒಲವು ಹೊಂದಿ ಐರ್ಲೆಂಡ್, ಸಿಂಗಾಪೂರದಂಥ ವಿದೇಶಗಳಲ್ಲಿಯೂ ಆಶ್ರಮ ಸ್ಥಾಪಿಸಲು ಶುರುವಿಟ್ಟರು. 1975 ರ ಸುಮಾರಿಗೆ ನ್ಯೂಜಿಲೆಂಡ್‌ನಲ್ಲೂ ಒಂದು ಆಶ್ರಮ ತೆರೆದರು. ಇದರ ದೇಖಾರೇಖಿಯನ್ನು ಶಿಷ್ಯ ಪ್ರಕಾಶನಿಗೆ ಒಪ್ಪಿಸಿದರು.

ಇದರಲ್ಲಿ ಸಂಪೂರ್ಣ ಪಳಗಿದ ಪ್ರಕಾಶ ತದನಂತರ ಅಮೆರಿಕದತ್ತ ಪಾದ ಬೆಳೆಸಿ ಆಸ್ಟಿನ್ ನಗರದಲ್ಲಿ ನೆಲೆಗೊಂಡ. ಕೃಪಾಲ್‌ಜಿಯ ನೆರವಿನೊಂದಿಗೆ ಬರ್ಸಾನಾ ಧಾಮ ಸ್ಥಾಪಿಸಿದ. ಗುರುಗಳು ಅದೇ ಸಮಯಕ್ಕೆ ಕೈಲಾಸ ಸೇರಿದ್ದೇ ತಕ್ಷಣ ಗೆಟಪ್ಪು ಬದಲಿಸಿದ ಪ್ರಕಾಶ ಪ್ರಕಾಶಾನಂದ ಸ್ವಾಮೀಜಿ ಅಂತ ಖಾವಿ ತೊಟ್ಟು ಪೀಠಾಲಂಕಾರ ಮಾಡಿದ. ತದನಂತರ ಶ್ರೀ ಸ್ವಾಮೀಜಿ ಅಂತಲೇ ಹೆಸರಾದ.

ಅಮೆರಿಕನ್ ಹಿಂದೂ ಭಕ್ತ ಮಿಕಗಳನ್ನು ಬಲೆಗೆ ಬೀಳಿಸಿಕೊಂಡು, ಚೆಂದದ ಬಾಲೆಯರನ್ನು ಮಂಚಕ್ಕೆ ಕೆಡವುತ್ತಲೇ ಮುಂದುವರೆದ. ಈಗ 82 ರ ಹೊಸ್ತಿಲಲ್ಲಿ ಆ ಕಾಮದಾಟಗಳಿಗೆಲ್ಲ ಬ್ರೇಕ್ ಬಿದ್ದಂತಾಗಿದೆ.

ಯಶವಂತಪುರ ಬಿಬಿಎಂಪಿಯ ಡೀಲ್-ಡೆಮಾಲಿಷ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜನಪ್ರತಿನಿಧಿಗಳ ಅಧಿಕಾರಕ್ಕೊಳಪಟ್ಟಿದೆಯೆಂಬುದು ಮೇಲ್ನೋಟದ ಸತ್ಯ. ವಾಸ್ತವವಾಗಿ ಯಾರ್ಯಾರದ್ದೋ ಪ್ರಭಾವ, ಮುಲಾಜುಗಳು ಹಾಗೂ ಭ್ರಷ್ಟಾಚಾರಗಳೇ ಬಿಬಿಎಂಪಿಯನ್ನು ಬೇಕಾದಂತೆ ಆಡಿಸುತ್ತಿವೆ. ಯಶವಂತಪುರದಲ್ಲಿ ನಡೆದ ಒಂದು ಘಟನೆ ಅದಕ್ಕೆ ತಕ್ಕ ಸಾಕ್ಷಿಯಂತಿದೆ.

ಯಶವಂತಪುರದ ಮುತ್ತು ಆನಂದ್ ಎಂಬಾತನ ಕುಟುಂಬಿಕರು ಬಿಬಿಎಂಪಿ ಮಂದಿಯ ಸರಣಿ ದೋಖಾಗಳಿಂದ ತತ್ತರಿಸಿಹೋಗಿದ್ದಾರೆ. ಕಣ್ಣೆದುರೇ ಅನ್ಯಾಯ ನಡೆಯುತ್ತಿದ್ದರೂ, ಅದರ ವಿರುದ್ಧ ದನಿ ಎತ್ತರಿಸಿ ಮಾತನಾಡಿದರೂ ಬಿಬಿಎಂಪಿಯ ಕೆಲ ಖದೀಮರು ಅದಾಗತಾನೇ ಯಾರದ್ದೋ ಪ್ರಸಾದ ಮೆದ್ದವರಂತೆ ತೆಪ್ಪಗಿದ್ದಾರೆ.

ನಡೆದದ್ದೇನೆಂದರೆ, ಮುತ್ತು ಆನಂದನ ತಂದೆ ಅಣ್ಣಾಮಲೈ ಪ್ಯಾರಲೆಲ್ ರಸ್ತೆಯ ಬಾಜಿನಲ್ಲೊಂದು ಜಮೀನು ಖರೀದಿಸಿದ್ದರು. ಬಿಬಿಎಂಪಿಯ ಕಾನೂನು ಕಟ್ಟಳೆಗಳಿಗನುಸಾರವೇ ಮೂರಂತಸ್ತಿನ ಮನೆಯ ಪ್ಲಾನ್‌ಗೆ ಅಂಕಿತ ಬಿದ್ದು ಕಾಮಗಾರಿ ಆರಂಭವಾಗಿತ್ತು, ಅಷ್ಟರಲ್ಲೇ ಕ್ಯಾತೆ ಶುರುವಿಟ್ಟದ್ದು




ಪಕ್ಕದ ಮನೆಗಳ ಮಾಲಕಿ ಸಾಕಮ್ಮ. ಅಣ್ಣಾಮಲೈ ಪಾಲಿಕೆಯ ನಿಯಮದಂತೆ ಆಸುಪಾಸಲ್ಲಿ ಜಾಗ ಬಿಡದೆ ತಮ್ಮ ಜಾಗವನ್ನು ಆಕ್ರಮಿಸಿ ಮನೆ ಕಟ್ಟುತ್ತಿದ್ದಾರೆಂಬುದು ಆಕೆಯ ವಾದ. ಇದನ್ನಿಟ್ಟುಕೊಂಡೇ ಬಿಬಿಎಂಪಿಗೆ ದೂರನ್ನೂ ನೀಡಿದ್ದರು.

ಈ ದೂರು ಕೈಗೆತ್ತಿಕೊಂಡ ಬಿಬಿಎಂಪಿ ಅಧಿಕಾರಿಗಳು ಎಷ್ಟು ವೇಗವಾಗಿ ಕೆಲಸ ಶುರುವಿಟ್ಟರೆಂದರೆ, ಅಣ್ಣಾಮಲೈಗೆ ಪಿಓ, ಸಿಪಿ ಅಂತೆಲ್ಲ ಒಂದರ ಹಿಂದೊಂದರಂತೆ ಆರ್ಡರುಗಳು ರವಾನೆಯಾದವು. ಅದರಲ್ಲಿ ನಕ್ಷೆಗೆ ವಿರುದ್ಧವಾಗಿ ಕಟ್ಟಡ ಎಬ್ಬಿಸಿರುವ ಬಗೆಗೆಲ್ಲಾ ಆರೋಪಿಸಲಾಗಿತ್ತು, ಇದೆಲ್ಲದರ ವಿರುದ್ಧ ಅಣ್ಣಾಮಲೈ ಕಡೆಯವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದರು. ಅಕ್ರಮ ಕಟ್ಟಡದ ಹೆಸರಲ್ಲಿ ನೆಲಸಮವಾಗಲಿದ್ದ ಮನೆಯ ಭಾಗ ಉಳಿಸಲು ನಾಳೆ ತಡೆಯಾಜ್ಞೆ ತರುವ ಅವಕಾಶವಿದ್ದರೆ ಬಿಬಿಎಂಪಿಯ ಮಂದಿ ಇಂದೇ ಏಕಾಏಕಿ ಗೃಹಪ್ರವೇಶಕ್ಕೆ ಅಣಿಯಾಗಿದ್ದ ಕಟ್ಟಡದ ಒಂದು ಮಗ್ಗುಲನ್ನು ಚೆಂದಗೆ ಕೆತ್ತಿ ಬಿಸಾಡಿದರು.

ಈ ದುಷ್ಟ ಕೆಲಸದ ಮುಂದಾಳತ್ವ ವಹಿಸಿಕೊಂಡಿದ್ದವನು ಸಹಾಯಕ ಇಂಜಿನಿಯರ್ ಮನೋಜ್ ಕುಮಾರ್. ಈತನ ಕಮಿಟ್‌ಮೆಂಟ್ ಹೇಗಿತ್ತೆಂದರೆ ಬೇರೆಡೆಗೆ ವರ್ಗಾವಣೆಯಾಗಿದ್ದರೂ ಅದನ್ನು ತಡೆಹಿಡಿದು ಈ ಕೆಲಸ ಮುಗಿಸಿಹೋಗಿದ್ದ!

ಇದ್ದಕ್ಕಿದ್ದಂತೆ ಎದುರಾದ ಇಂತಹುದೊಂದು ಸನ್ನಿವೇಶದಿಂದ ಸಹಜವಾಗಿಯೇ ಅಣ್ಣಾಮಲೈ ಕುಟುಂಬಿಕರು ತಬ್ಬಿಬ್ಬಾಗುವಂತಾಯಿತು. ಆದರೆ ಮುತ್ತು ಆನಂದ್ ಕುಟುಂಬದ ಪರವಾಗಿ ಸಾಕಮ್ಮನವರ ವಿರುದ್ಧ ಬಿಬಿಎಂಪಿಗೆ ದೂರು ದಾಖಲಿಸಿದರು. ಯಾಕೆಂದರೆ ಆಕೆ ಕೂಡಾ ಪಾಲಿಕೆಯ ಷರತ್ತುಗಳನ್ನು ಉಲ್ಲಂಘಿಸಿಯೇ ಕಟ್ಟಡ ಎಬ್ಬಿಸಿದ್ದರು. ಮುತ್ತುವಿನ ದೂರಿನನ್ವಯ ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿಗಳು ಅಕ್ರಮ ನಡೆದಿರುವುದು ಹೌದೆಂದು ರಿಪೋರ್ಟು ಕೊಟ್ಟಿದ್ದಾರೆ. ಆದರೆ ಅದಾಗಿ ದಿನ ಕಳೆಯುವಷ್ಟರಲ್ಲೇ ಏನೂ ಅಕ್ರಮ ನಡೆದಿಲ್ಲ ಎಂಬರ್ಥದ ಇನ್ನೊಂದು ರಿಪೋರ್ಟು ಬಂದಿದೆ.



ಈ ಹಿಂದೆ ಇದೇ ಸಾಕಮ್ಮ ಅಣ್ಣಾಮಲೈ ವಿರುದ್ಧ ದೂರಿತ್ತಿದ್ದಾಗ ಇದೇ ಅಧಿಕಾರಿಗಳು 'ಮಿಂಚಿನ' ಕಾರ್ಯಾಚರಣೆ ನಡೆಸಿದ್ದರಲ್ಲಾ? ಆದರೆ ಸಾಕಮ್ಮನ ವಿರುದ್ಧದ ಪ್ರಕರಣದಲ್ಲಿ ಎಲ್ಲವೂ ಉಲ್ಟಾ ಹೊಡೆಯಿತು. ಪವಾಡ ಸದೃಶವಾಗಿ ಸಾಕಮ್ಮನ ಪರ ದಾಖಲೆಗಳು ಸೃಷ್ಟಿಯಾದರೆ, ದಿನ ದೊಪ್ಪೊತ್ತಲೇ ಬೇಕಾದ ನಕ್ಷೆಗಳೂ ಪ್ರತ್ಯಕ್ಷವಾದವು. ಸಾಕಮ್ಮನವರ ಅಕ್ರಮ ಕಟ್ಟಡ ಕೆಡಹುವುದಿರಲಿ, ಪರಿಶೀಲನೆಯನ್ನೂ ಮಾಡದ ಮಟ್ಟಕ್ಕೆ ಬಿಬಿಎಂಪಿ ಅಧಿಕಾರಿಗಳು ನಡೆದುಕೊಂಡರು. ಈ ಕ್ಷಣಕ್ಕೂ ಪರಿಸ್ಥಿತಿ ಹಾಗೆಯೇ ಮುಂದುವರೆದಿದೆ.

ಈ ರೀತಿಯದ್ದೊಂದು ಪಕ್ಷಪಾತ ನಡೆಯಲು ಏನು ಕಾರಣ? ಹಣಕಾಸಿನ ವ್ಯವಹಾರವೇನಾದರೂ ಜೋರಾಗಿ ನಡೆದಿದೆಯಾ ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕಿದರೆ ಮಹತ್ವದ ವಿಚಾರಗಳು ಹೊರಬರಲಾರಂಭಿಸುತ್ತವೆ. ಪ್ಯಾರಲಲ್ ರಸ್ತೆಯನ್ನು ಒಳಗೊಳ್ಳುವ ವಾರ್ಡ್ ನಂ. 37ರ ಕಾರ್ಪೊರೇಟರ್ ಬಿ.ಆರ್. ನಂಜುಂಡಪ್ಪನ ಕಾರು ಚಾಲಕ ಸಾಕಮ್ಮನ ಬಿಲ್ಡಿಂಗ್‌ನಲ್ಲಿ ಬಾಡಿಗೆಗಿದ್ದಾನೆ! ಈ ಕಾರ್ಪೊರೇಟರ್ ನಂಜುಂಡಪ್ಪನಿಗೂ ರಾಜರಾಜೇಶ್ವರಿ ನಗರ ಎಮ್ಮೆಲ್ಲೆ ಎಂ. ಶ್ರೀನಿವಾಸ್‌ಗೂ ಗಳಸ್ಯಕಂಠಸ್ಯ ವ್ಯವಹಾರವಿದೆ. ಇದೆಲ್ಲವೂ ಸಾಕಮ್ಮನವರ ಕಡೆಗೆ ಬಲವಾಗಿ ಪರಿಣಮಿಸಿ ಅಣ್ಣಾಮಲೈ ಕಡೆಯವರು ವಿನಾಕಾರಣ ತೊಂದರೆ ಅನುಭವಿಸುವಂತಾಗಿದೆ.


ಇಂಥಾ ಪ್ರಭಾವಕ್ಕೆಲ್ಲಾ ಬಿಬಿಎಂಪಿ ಮಂದಿ ಸಂಪೂರ್ಣವಾಗಿ ಬಲಿ ಬಿದ್ದಿದ್ದಾರೆ. ಅಣ್ಣಾಮಲೈ ಕುಟುಂಬಿಕರು 'ನಾವು ತಪ್ಪು ಮಾಡಿದ್ರೆ ಶಿಕ್ಷೆಯಾಗಲಿ. ಆದರೆ ತಪ್ಪು ಮಾಡಿದ ಅವ್ರಿಗೆ ಬಿಬಿಎಂಪಿಯವರು ರಕ್ಷಣೆ ಕೊಡ್ತಿದ್ದಾರೆಂದರೆ ಏನರ್ಥ' ಅಂತ ಪ್ರಶ್ನಿಸುತ್ತಿದ್ದಾರೆ. ಉತ್ತರಿಸುವ ನೈತಿಕತೆ ಬಿಬಿಎಂಪಿ ಅಧಿಕಾರಿಗಳಿಗೆ ಬೇಕಷ್ಟೆ.

ಆದರೆ ಸದ್ಯದಲ್ಲಿ ಅಂಥ ಲಕ್ಷಣಗಳು ಕಾಣಿಸುತ್ತಿಲ್ಲ. ಯಾಕೆಂದರೆ ಸಾಕಮ್ಮನ ಕಡೆಯವರು ಕೋರ್ಟ್ ಆದೇಶಗಳಿಗೇ ಬೆಲೆ ಕೊಡುತ್ತಿಲ್ಲ. ಇದೆಲ್ಲ ಏನಾದರೂ ಆಗಲಿ, ಬಿಬಿಎಂಪಿ ಕಡೆಯಿಂದ ಒಂದು ಸಲ ಸರ್ವೆ ಮಾಡಿಸಲಿ. ಆಗ ಯಾರ್ಯಾರ ಜಮೀನು ಎಷ್ಟೆಷ್ಟು, ಯಾರು ನಿಯಮ ಉಲ್ಲಂಘಿಸಿದ್ದಾರೆಂಬುದು ಗೊತ್ತಾಗುತ್ತೆ ಎಂಬರ್ಥದಲ್ಲಿ ಅಣ್ಣಾಮಲೈ ಕುಟುಂಬಿಕರು ಪದೇಪದೇ ಬಿಬಿಎಂಪಿ ಅಧಿಕಾರಿಗಳಿಗೆ ದುಂಬಾಲು ಬಿದ್ದಿದ್ದಾರೆ. ಅಧಿಕಾರಗಳದ್ದು ಯಾರದ್ದೋ ಎಂಜಲು ಗಂಟಲಲ್ಲಿ ಸಿಕ್ಕಿಕೊಂಡಂಥಾ ಸ್ಥಿತಿ.

ಪ್ರಭಾವವಿರುವವರು ಈ ಪರಿ ಹಾರಾಡಿದರೆ ಬಡಪಾಯಿಗಳ ಗತಿಯೇನಾಗಬೇಕ್ಪು? ಈ ಬಗ್ಗೆ ಸಂಬಂಧಿಸಿದವರು ತಕ್ಷಣ ಕ್ರಮ ಕೈಗೊಳ್ಳಬೇಕಿದೆ.

ಕೊಪ್ಪಳ: ಪಕ್ಷಾಂತರ ಪೀಡೆ ಕರಡಿ ಕ'ಮಲ'ಕ್ಕೆ ನೆಗೆಯಿತು ನೋಡಿ!

ಜನ ಓಟು ಹಾಕಿರೋದೆ ನೋಟು ನುಂಗೋಕೆ ಎಂಬರ್ಥದಲ್ಲಿ ತನ್ನ ಶಾಸಕಾವಧಿಯನ್ನು ಕಳೆದಿರುವ ಕರಡಿ ಸಂಗಣ್ಣ ಉರ್ಫ್ ಮಂಗಣ್ಣ ಈಗ ಬಿಜೆಪಿಯ ಆಪರೇಷನ್ ಕಮಲದಲ್ಲಿ ಬಿದ್ದಿದ್ದಾನೆ. ಎಂಎಲ್‌ಎಗಿರಿಗೆ ರಾಜೀನಾಮೆ ಕೊಟ್ಟು, ತನ್ನನ್ನು ಚುನಾಯಿಸಿ ಕಳುಹಿಸಿದ್ದ ಕ್ಷೇತ್ರದ ಮತದಾರರನ್ನು ವಂಚಿಸಿದ್ದಾನೆ. ಪಕ್ಷದಿಂದ ಪಕ್ಷಕ್ಕೆ ಹಾರುವ ಕರಡಿಗೆ ಈಗ ಗೂಟದ ಕಾರಿನ ಜೊಯಾಲಿ ಅಂಟಿಕೊಂಡಿದೆ. ಈ ಗೀಳೇ ಇವನನ್ನು ಮನೆ ಸೇರಿಸಲಿದೆ ಎಂಬುದು ಸತ್ಯ. ಕಳೆದೇಳು ತಿಂಗಳಿಂದ ಒಂದು ಕಾಲನ್ನು ಜೆಡಿಎಸ್‌ನಿಂದ ಹೊರಗಿಟ್ಟು ಚೆಡ್ಡಿಗಳೊಂದಿಗೆ ರಾಜಕೀಯದಾಟ ನಡೆಸಿದ್ದ ಕರಡಿ ಇಂದಲ್ಲ ನಾಳೆ ಬಿಜೆಪಿಗೆ ಹೋಗ್ತಾನೆ ಎಂದು 'ಲಂಕೇಶ್' ಈ ಹಿಂದೆಯೇ ಬರೆದಿತ್ತು. ಅದೀಗ ನಿಜವಾಗಿದೆ.


ಕರಡಿ


ಕಳೆದ ವಿಧಾನಸಭೆ ಚುನಾವಣೆಯಲ್ಲಿ ಆಯ್ಕೆಯಾಗಿ ಕೆಲ ತಿಂಗಳಲ್ಲೆ ಬಿಜೆಪಿ ಪರ ಕೆಲಸ ಮಾಡಲು ಶುರು ಹಚ್ಚಿಕೊಂಡಿದ್ದ ಸಂಗಣ್ಣ ಕರಡಿ, ಆನಂತರ ಜರುಗಿದ ಪ್ರತಿ ಚುನಾವಣೆಯಲ್ಲೂ ಚೆಡ್ಡಿಗಳ ಗೆಲುವಿಗೆ ಬೆವರು ಹರಿಸಿದ್ದಾನೆ. ಯಡ್ಡಿ ಸಿ.ಎಂ. ಆಗಿದ್ದೆ ತಡ ಉತ್ತರ ಕರ್ನಾಟಕ ಭಾಗದಲ್ಲಿ ಅಲೆ ಎದ್ದ ಲಿಂಗಾಯತ ಲಾಬಿಯಲ್ಲಿ ತೇಲುತ್ತಾ ಬಂದಿರುವ ಶಾಸಕರಲ್ಲಿ ಈ ಸಂಗಣ್ಣ ಕೂಡಾ ಒಬ್ಬ. ಮಂತ್ರಿಗಳಾದ ಬಸು ಬೊಮ್ಮಾಯಿ ಮತ್ತು ಲಕ್ಷ್ಮಣ ಸವದಿಗಳ ಬಗಲಲ್ಲಿ ಸದಾ ಕಾಣಿಸುತ್ತಿದ್ದ ಇವನು ತಾನು ಜೆಡಿಎಸ್‌ನಿಂದ ಆಯ್ಕೆಯಾಗಿದ್ದನ್ನೆ ಮರೆತಂತಿತ್ತು. ಇತ್ತೀಚಿಗೆ ನಡೆದ ಪಕ್ಷೇತರ ಶಾಸಕರ ರಾಜಕೀಯ ವಿದ್ಯಮಾನ ಹಾಗೂ ವಿಶ್ವಾಸ ಮತದ ಗೊಂದಲದಿಂದ ಜಾತಿ ಲಾಬಿಗೆ ಮುಂದಾಗಿರುವ ಯಡ್ಡಿ, ಲಿಂಗಾಯತ ಶಾಸಕರುಗಳನ್ನು ಕಟ್ಟಿಕೊಂಡು ಅದರ ಮುಖ್ಯಸ್ಥನಾಗುವ ಹುನ್ನಾರದ ಮೊದಲ ಅಧ್ಯಾಯವೇ ಸಂಗಣ್ಣನ ಬಿಜೆಪಿ ಸೇರ್ಪಡೆ.


ಕೊಪ್ಪಳ ಕ್ಷೇತ್ರದ ಇತಿಹಾಸದಲ್ಲಿ ಸತತ ಎರಡು ಬಾರಿ ಗೆದ್ದ ಪ್ರಥಮ ಶಾಸಕನಾಗಿರುವ ಸಂಗಣ್ಣ ಕರಡಿ ರಾಜಕೀಯ ಜೀವನ ಪ್ರಾರಂಭಿಸಿದ್ದು ಅಲ್ಪಸಂಖ್ಯಾತರ ಬೆಂಬಲದಿಂದ. ಯಾವ ಪಕ್ಷದಲ್ಲಿಯೂ ಗುರುತಿಸಿಕೊಂಡಿರದ ಇವನನ್ನು ತಾಲ್ಲೂಕು ಬೋರ್ಡ್ ನಂತರ ಜಿಲ್ಲಾ ಪಂಚಾಯ್ತಿ ಅಲ್ಲದೆ ಪಿ.ಎಲ್.ಡಿ ಬ್ಯಾಂಕಿಗೂ ಜನ ಆರಿಸಿ ಕಳುಹಿಸಿದ್ದರು. ನಂತರ 1994ರಲ್ಲಿ ಪಕ್ಷೇತರನಾಗಿ ಕೊಪ್ಪಳದಿಂದ ಶಾಸಕನಾದ ಸಂಗಣ್ಣ ಆಗಿನ ದಳದ ಸರ್ಕಾರಕ್ಕೆ ಬೆಂಬಲಿಸಿದ್ದ ಸಹ ಸದಸ್ಯ ಕೂಡಾ ಆಗಿದ್ದ. ಜನತಾದಳ ಒಡೆದು ಹೋಳಾದಾಗ ದೇವೇಗೌಡರ ಬಣಕ್ಕೆ ಜಿಗಿದಿದ್ದ ಸಂಗಣ್ಣ ನಂತರ ಪಟೇಲರ ಬಾಲ ಬಡಿಯಲು ಶುರು ಹಚ್ಚಿದ್ದ. 1999ರ ವಿಧಾನಸಭೆಗೆ ಜೆಡಿಎಸ್‌ದಿಂದ ಸ್ಪರ್ಧೆಗಿಳಿದ ಸಂಗಣ್ಣನನ್ನೆ ಇಲ್ಲಿಯ ಮುಸ್ಲಿಮರು ಮತ್ತು ಹಿಂದುಳಿದ ದಲಿತ ಸಮುದಾಯದ ಜನ ಭಾರಿ ಬಹುಮತದಿಂದ ಗೆಲ್ಲಿಸಿ ಕಳುಹಿಸಿದರು. ಆ ಸಮಯದಲ್ಲಿ ಕಾಂಗ್ರೆಸ್ಸಿನಿಂದ ಇವನಿಗೆ ಬುಲಾವು ಕೂಡಾ ಬಂದಿತ್ತು, ಸ್ವತಃ ಎಸ್.ಎಂ.ಕೃಷ್ಣ ಕಾಂಗ್ರೆಸ್ಸಿನಿಂದ ಸ್ಪರ್ಧಿಸುವಂತೆ ಕರಡಿಗೆ ಒತ್ತಾಯಿಸಿದ್ದರು. ಆದರೆ ಅಲ್ಲಿಗೆ ಹೋಗದೆ, ದಳದಿಂದ ನಿಂತು ಗೆದ್ದು ಬಂದು ತನ್ನ ಸ್ವಂತ ಕಮಾಯಿಗೆ ಗಂಟೆಕೆ ಹೊರತು ತನ್ನನ್ನು ಗೆಲ್ಲಿಸಿದ್ದ ಜನರತ್ತ ತಿರುಗಿಯೂ ನೋಡಲಿಲ್ಲ.


ಮೂರನೇ ಅವಧಿ ಶಾಸಕತ್ವದಲ್ಲಿರುವ ಸಂಗಣ್ಣ ಕರಡಿ ಸಾಕಷ್ಟು ತಿಂದು ತೇಗಿದ್ದಾನೆ. ಜಮೀನುಗಳನ್ನು ಸರಕಾರಿ ಯೋಜನೆಗಾಗಿ ಜನರಿಂದ ದಾನವಾಗಿ ಪಡೆದು, ಸರಕಾರಿ ಹಣದಲ್ಲೆ ಅವುಗಳನ್ನು ಅಭಿವೃದ್ಧಿಪಡಿಸಿ ನಂತರ ಇಂತಿಷ್ಟು ಅಂತಾ ಹಣ ನಿಗದಿಪಡಿಸಿ ಮಾರಿದ್ದಾನೆ. ಅವುಗಳಲ್ಲಿ ಆಶ್ರಯ ಮನೆ ಹಗರಣ ಸಿ.ಓ.ಡಿ. ತನಿಖೆವರೆಗೂ ಸಾಗಿದೆ. ಸುಮಾರು 120 ಎಕರೆ ಜಮೀನನ್ನು ರೈತರಿಂದ ದಾನ ಎಂದು ಪತ್ರ ಬರೆಯಿಸಿ ಕೊಂಡು ನಂತರ ಅಲ್ಲಿ ನಗರಸಭೆಯಿಂದ ಅಭಿವೃದ್ಧಿ ಮಾಡಿ ಮನೆ ನಿರ್ಮಿಸಿ ಮನೆಯೊಂದಕ್ಕೆ 15-20 ಸಾವಿರದಂತೆ ಮಾರಿಕೊಂಡಿದ್ದಾನೆ. ಸುಮಾರು ಎರಡು ಸಾವಿರ ಮನೆಗಳು ಸಂಗಣ್ಣನಿಂದ ಬಿಕರಿಯಾಗಿವೆ. ಈ ಬಗ್ಗೆ ಅಸೆಂಬ್ಲಿಯಲ್ಲೂ ಚರ್ಚೆಯಾಗಿ ನಂತರ ಸಿ.ಓ.ಡಿ.ಗೆ ತನಿಖೆ ಮಾಡಲು ಸೂಚಿಸಲಾಗಿದೆ. ಈ ಪ್ರಕರಣ ಮುಚ್ಚಿಹಾಕಲು ಯಡ್ಡಿ ಸರ್ಕಾರ ಸಖ್ಯ ಬೆಳೆಸಿಕೊಂಡಿದ್ದ ಸಂಗಣ್ಣ, ಕೊಪ್ಪಳದಲ್ಲೊಂದು ಪೆಟ್ರೋಲ್ ಬಂಕ್ ಪರವಾನಗಿ ಪಡೆಯಲು ಎಲ್ಲಿಲ್ಲದ ಪ್ರಯತ್ನ ಪಟ್ಟಿದ್ದ. ಅನಂತರದ ಒಪ್ಪಂದದ ಪ್ರಕಾರ 10 ಕೋಟಿ ಡೀಲ್‌ಗೆ ಒಪ್ಪಿಕೊಂಡು ಬಿಜೆಪಿ ಸೇರಿ ಚುನಾವಣೆಗೆ ನಿಂತ ಸಂಗಣ್ಣನನ್ನು ಜನ ತಿರಸ್ಕರಿಸಿದ್ದರು. ಆಗ ಸೋತ ಸಂಗಣ್ಣ ಸ್ವಲ್ಪ ದಿನದಲ್ಲಿ ಜೆಡಿಎಸ್ ಸೇರಿದ. ನಂತರ 2008ರಲ್ಲಿ ಜೆಡಿಎಸ್‌ನಿಂದ ವಿಧಾನಸಭೆಗೆ ಮೂರನೇ ಬಾರಿಗೆ ಆಯ್ಕೆಯಾಗಿ ತನ್ನ ದುಷ್ಟ ಬುದ್ಧಿಯನ್ನು ಮತ್ತೆ ಪ್ರದರ್ಶಿಸಿದ.


ಸಂಗಣ್ಣ ಜೆಡಿಎಸ್ ಶಾಸಕನಾಗಿ ಆಯ್ಕೆಯಾಗಿದ್ದರೂ ಮಾನಸಿಕವಾಗಿ ಬಿಜೆಪಿಯೊಂದಿಗೆ ಗುರುತಿಸಿಕೊಂಡಿದ್ದ. ತಾನು ಜೆಡಿಎಸ್‌ನಿಂದ ವಿಧಾನಸಭೆಗೆ ಕೊಪ್ಪಳದಿಂದ ಸ್ಪರ್ಧಿಸಿದ್ದರೂ ಪಕ್ಕದ ಗಂಗಾವತಿಯಲ್ಲಿ ಇವನ ಗೆಲುವಿಗೆ ಶ್ರಮ ಹಾಕುತ್ತಿದ್ದ ಮಾಜಿ ಸಚಿವ ಇಕ್ಬಾಲ್ ಅನ್ಸಾರಿಯ ಸೋಲಿಗೆ ಕಾರಣನಾದ. ನಂತರದಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ತನ್ನ ಪಕ್ಷದ ಕ್ಯಾಂಡಿಡೇಟು ಅನ್ಸಾರಿಯ ವಿರುದ್ಧ ಪ್ರಚಾರ ಮಾಡಿ ಸ್ವಜಾತಿಯ ಅದರಲ್ಲೂ ಬಿಜೆಪಿಯ ಶಿವರಾಮೇಗೌಡನ ಗೆಲುವಿಗೆ ಬೆವರು ಹರಿಸಿದ. ವಿಧಾನಪರಿಷತ್ತಿನಲ್ಲೂ ಬಿಜೆಪಿ ಗೆಲುವಿಗೆ ಇವನೆ ಕಾರಣನಾಗಿದ್ದ. ಇತ್ತೀಚಿಗಿನ ತಾ.ಪಂ. ಹಾಗೂ ಜಿ.ಪಂ. ಚುನಾವಣೆಯಲ್ಲಿ ಅದೇ ಕೆಲಸ ಮಾಡಿ ಬಿಜೆಪಿಗಳನ್ನು ಅಧಿಕಾರಕ್ಕೆ ತಂದ ಕೀರ್ತಿ ಸಂಗಣ್ಣ ಕರಡಿಯದು.


ಅಸಲಿಗೆ ಸಂಗಣ್ಣ ಐದು ತಿಂಗಳ ಹಿಂದೆಯೇ ಬಿಜೆಪಿ ಸೇರಬೇಕಿತ್ತು. ಯಡಿಯೂರಪ್ಪ ವಿಶ್ವಾಸಮತ ಯಾಚಿಸುವ ಸಂದರ್ಭದಲ್ಲಿ ಜೆಡಿಎಸ್ ಶಾಸಕರನ್ನು ಖರೀದಿಸಿ ಅವರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ ಮತದಾನದಿಂದ ದೂರ ಉಳಿಸುವ ತಂತ್ರ ರೂಪಿಸಲಾಗಿತ್ತು. ಆ ಪಟ್ಟಿಯಲ್ಲಿದ್ದ ಮೊದಲ ಹೆಸರೇ ಈ ಸಂಗಣ್ಣ ಕರಡಿಯದು. ಆದರೆ ಅದು ಸಾಧ್ಯವಾಗಲಿಲ್ಲ. ಸದ್ಯ ಕುಮಾರಸ್ವಾಮಿ ಯಡ್ಡಿ ಮತ್ತವರ ಪಟಾಲಂನ ಅಕ್ರಮ ದಂಧೆಗಳು ಮತ್ತು ಭೂಹಗರಣಗಳನ್ನು ಒಂದೊಂದಾಗಿ ಹೊರಹಾಕಿದ್ದೆ ತಡ, ಇದರಿಂದ ಎಚ್ಚೆತ್ತು ಚೆಡ್ಡಿಗಳು ಮತ್ತೆ ಶಾಸಕರ ಖರೀದಿಗೆ ಮುಂದಾಗಿದ್ದಾರೆ. ಆರ್‌ಎಸ್‌ಎಸ್ ಕಚೇರಿಯಿಂದ ಹೊರಬಿದ್ದ ಆದೇಶದಂತೆ ಜೆಡಿಎಸ್ ಪ್ರಾಬಲ್ಯ ಕುಗ್ಗಿಸಲು ಈ ತಂತ್ರ ರೂಪಿಸಲಾಗಿದೆ. ಬಿಜೆಪಿಗೆ ಅನಿವಾರ್ಯತೆ ಇಲ್ಲದಿದ್ದರೂ ತನ್ನ ಹೊಲಸುತನವನ್ನು ಮತ್ತೊಮ್ಮೆ ಬೀದಿಗೆ ತಂದಿದೆ.


ಅನ್ಸಾರಿ


ಬೊಮ್ಮಾಯಿ




ಸವದಿ


ತಂಗಡಗಿ

ಸಂಗಣ್ಣನ ಬಿಜೆಪಿ ಪ್ರವೇಶಕ್ಕೆ ... ಮುಂದಾಗಿರುವುದೆ ಸಂಗಣ್ಣನ ಬಿಜೆಪಿ ಪ್ರವೇಶಕ್ಕೆ ಹೂವಿನ ಹಾರ ಹಾಕಿದಂತಾಗಿದೆ ಅಷ್ಟೆ.

ಕಳ್ಳನ ಸ್ವಾಗತಕ್ಕೆ ಖದೀಮರ ಸಿದ್ಧತೆ ಎಂಬಂತೆ ಚೆಡ್ಡಿಗಳು ಕರಡಿ ಮಂಗಣ್ಣನ ಎಲ್ಲಾ ಕಳ್ಳಾಟಗಳಿಗೆ ತಿಪ್ಪೆ ಸಾರಿಸಲು ಸಜ್ಜಾಗಿದ್ದಾರೆ. ಸದ್ಯ 20 ಕೋಟಿ ಹಣದ ಜೊತೆಗೆ ಮಂತ್ರಿಗಿರಿ ಅಥವಾ ನಿಗಮ ಮಂಡಳಿ ಅಧ್ಯಕ್ಷತೆಯ ಒಪ್ಪಂದಕ್ಕೆ ಎಸ್ ಎಂದಿರುವ ಸಂಗಣ್ಣ ಅದೆಷ್ಟು ದಿನ ಗೂಟದ ಕಾರಿನಲ್ಲಿ ಓಡಾಡುತ್ತಾನೋ ನೋಡತೇವಿ ಎಂದು ಅವನನ್ನು ಬೆಂಬಲಿಸುತ್ತಾ ಬಂದಿರುವ ಕೊಪ್ಪಳದ ಅಲ್ಪಸಂಖ್ಯಾತ ಹಾಗೂ ಹಿಂದುಳಿದವರು ಹಾಸ್ಯ ಮಾಡುತ್ತಿದ್ದಾರೆ. ಇದು ಸದ್ಯ ಗೇಲಿ ಮಾತಾದರೂ ಮುಂದೆ ಅದು ಸೇಡಿನ ರೂಪ ತಾಳುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಅಧಿಕಾರಿಗಳಿಂದ ತಿಂಗಳಿಗಿಷ್ಟು ಅಂತ ಹಣ ಫಿಕ್ಸ್ ಮಾಡಿಕೊಳ್ಳುವುದರಿಂದ ಹಿಡಿದು ಟ್ರಾನ್ಸ್‌ಫರ್ ಗುತ್ತಿಗೆದಾರರೊಂದಿಗೆ ಮಿಲಾಪಿ, ಪೊಲೀಸರಿಂದ ವಸೂಲಿ ಸೇರಿದಂತೆ ಅನೇಕ ಹಣ ಎತ್ತುವ ದಾರಿಗಳನ್ನು ಕಂಡುಕೊಂಡು ಜಿಲ್ಲೆಯ ಗಡಿಭಾಗದ ಹಳ್ಳಿಗಳಲ್ಲಿ ನೂರಾರು ಎಕರೆ ಜಮೀನುಗಳ ಮಾಲೀಕನಾದ ಸಂಗಣ್ಣನಿಗೆ 2004ರ ಚುನಾವಣೆಯಲ್ಲಿ ಜನ ತಕ್ಕ ಪಾಠ ಕಲಿಸಿದ್ದರು. ತನ್ನ ಸ್ವಂತ ಹಿತಾಸಕ್ತಿಗೆ ಬಿಜೆಪಿಯ ಕೇಂದ್ರ ಮಂತ್ರಿಯಾಗಿದ್ದ ಅನಂತಕುಮಾರನ

ಇದಕ್ಕೆ ಕೊಪ್ಪಳದ ಜನತೆಯಂತೂ ತಕ್ಕ ಉತ್ತರ ನೀಡೇ ನೀಡುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಅಧಿಕಾರದ ಆಸೆಗೆ ಕೋಡು ಬಂದಂತೆ ವರ್ತಿಸುತ್ತಿರುವ ಕರಡಿ ಸಂಗಣ್ಣ ಮತ್ತೊಮ್ಮೆ ಸೋಲಿನ ರುಚಿ ನೋಡುವುದರಲ್ಲಿ ಸಂಶಯವಿಲ್ಲ.

• ಹುರಳಿಕುಪ್ಪಿ ವಿನಯ್



ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಕ್ಯಾಂಡಿಡೇಟ್?

ಶಾಸಕ ಸ್ಥಾನಕ್ಕೆ ಸಂಗಣ್ಣ ಕರಡಿ ರಾಜಿನಾಮೆ ಕೊಟ್ಟು ಬಿಜೆಪಿಗೆ ಕಾಲಿಟ್ಟ ಕ್ಷಣದಿಂದ ಚುನಾವಣಾ ಬಿರುಗಾಳಿ ಕೊಪ್ಪಳದಾದ್ಯಂತ ಬಲು ಜೋರಾಗಿ ಬೀಸಹತ್ತಿದೆ. ಅಲ್ಲದೆ ಈ ಕ್ಷೇತ್ರದಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರ ಪುತ್ರ ನಿಖಿಲ್‌ನನ್ನು ಕಣಕ್ಕಿಳಿಸಲು ಕಾರ್ಯತಂತ್ರ ರೂಪಿಸಲಾಗುತ್ತಿದೆ ಎಂಬ ವದಂತಿಗಳು ಕೇಳಿಬರುತ್ತಿವೆ.

ಕೊಪ್ಪಳ ಜಿಲ್ಲೆಯಲ್ಲಿ ಜೆಡಿಎಸ್‌ಗೆ ಇರುವ ಪ್ರಭಾವವನ್ನು ಲೆಕ್ಕಹಾಕಿ ಇಂತಹ ನಿರ್ಣಯವನ್ನು ಗೌಡರ ಕುಟುಂಬ ತೆಗೆದುಕೊಂಡರೂ ಆಶ್ಚರ್ಯಪಡಬೇಕಿಲ್ಲ. ಯಾಕೆಂದರೆ ಈ ಹಿಂದೆ ಸಂಗಣ್ಣನ ಗೆಲುವಿನ ಹಿಂದೆ ಅವನ ವೈಯಕ್ತಿಕ ವರ್ಚಸ್ಸಿಗಿಂತ ಪಕ್ಷದ ವರ್ಚಸ್ಸು ಕೆಲಸ ಮಾಡಿತ್ತು ಎಂಬುದು ಸುಳ್ಳಲ್ಲ. ಒಂದು ವೇಳೆ ನಿಖಿಲ್ ಸ್ಪರ್ಧೆಗಿಳಿದಿದ್ದೆ ಆದರೆ ದೇವೇಗೌಡರ ಕುಟುಂಬದ ಮೂರನೇ ತಲೆಮಾರು ರಾಜಕೀಯ ಪ್ರವೇಶ ಪಡೆದಂತಾಗುತ್ತಿದೆ. ಗೌಡರ ಕುಟುಂಬ ಕಾಳಜಿಗಳೂ ಜಾಹೀರಾಗುತ್ತವೆ.

ಬಿಜೆಪಿಯಿಂದ ಅತೃಪ್ತನಾಗಿ ಹೊರಬಂದು ಶಾಸಕತ್ವ ಕಳೆದುಕೊಂಡಿರುವ ಮಾಜಿ ಮಂತ್ರಿ ಶಿವರಾಜ ತಂಗಡಗಿ ಕೂಡಾ ಜೆಡಿಎಸ್ ಸೇರುವ ಇರಾದೆ ಹೊಂದಿದ್ದಾನೆ. ಇವನಿಂದ ತೆರವಾಗಿರುವ ಕನಕಗಿರಿ ಕ್ಷೇತ್ರದ ಉಪ ಚುನಾವಣೆಯ ಜೊತೆಗೆ ಕೊಪ್ಪಳಕ್ಕೂ ಆವಾಗಲೇ ಚುನಾವಣೆ ಜರುಗಬಹುದು ಎಂಬ ಲೆಕ್ಕಾಚಾರ ಈಗ ಪ್ರಾರಂಭವಾಗಿದೆ. ಈ ಚುನಾವಣೆಯಲ್ಲಿ ಈ ಎರಡೂ ಕ್ಷೇತ್ರಗಳ ರಾಜಕೀಯ ಲೆಕ್ಕಾಚಾರವೇ ಬದಲಾಗುವ ಸಾಧ್ಯತೆ ಹೆಚ್ಚಿದ್ದು ಈಗಾಗಲೇ ಗುಪ್ತ ಸಭೆಗಳು, ರಾಜಕೀಯ ಚರ್ಚೆಗಳು ಗರಿಗೆದರಿವೆ. ಕಳೆದ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಡಾ. ಎಮ್.ಬಿ. ರಾಂಪೂರ ಟಿಕೆಟ್ ಸಿಗದೆ ಅತೃಪ್ತನಾಗಿ ಪಕ್ಷದಿಂದ ದೂರವುಳಿದು ಈಗ ಈ ಉಪ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧೆಗಿಳಿಯುವ ತಯಾರಿ ನಡೆಸಿದ್ದಾನೆ. ಅವನ ಬೆಂಬಲಿಗರು ಈಗಾಗಲೇ ಪ್ರಚಾರ ಶುರುಹಚ್ಚಿದ್ದಾರೆ.

ಕಾಂಗ್ರೆಸ್ ಪಾಳೆಯದಲ್ಲೂ ಬಿರುಸಿನ ಚಟುವಟಿಕೆ ನಡೆದಿವೆ. ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಮತ್ತು ಕಾಂಗ್ರೆ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಬಸವರಾಜ ಹಿಟ್ನಾಳ ಸ್ಪರ್ಧೆಯ ಸೂಚನೆ ನೀಡಿದ್ದಾರೆ. ಒಟ್ಟಿನಲ್ಲಿ ಪಕ್ಷ ತೊರೆದು ಆಪರೇಷನ್ ಮಾಡಿಸಿಕೊಂಡಿರುವ ಸಂಗಣ್ಣನಿಗೆ ಬುದ್ಧಿಕಲಿಸಲು ಎಲ್ಲ ಪಕ್ಷಗಳು ಸಜ್ಜಾಗುತ್ತಿವೆ. ●

ಜೆಡಿಎಸ್‌ನಿಂದ 'ಆಪರೇಷನ್ ಅತೃಪ್ತ'?

ಬಿಜೆಪಿ ಮತ್ತೊಂದು ಸುತ್ತಿನ ಆಪರೇಷನ್ ಕಮಲಕ್ಕೆ ಕೈ ಹಾಕುತ್ತಿದ್ದಂತೆ ಜೆಡಿಎಸ್ ಕೂಡಾ 'ಆಪರೇಷನ್ ಅತೃಪ್ತ'ಕ್ಕೆ ಚಾಲನೆ ನೀಡಲು ಸಿದ್ಧತೆ ನಡೆಸಿದೆ. ಇದಕ್ಕೆ ಉತ್ತರ ಕರ್ನಾಟಕದ ಪ್ರಬಲ ಲಿಂಗಾಯತ ಸಮುದಾಯದ 10 ಜನ ಶಾಸಕರು ಸಮ್ಮತಿ ಸೂಚಿಸಿದ್ದಾರೆ ಎಂದು ಹೇಳಲಾಗಿದ್ದು ಅವರಲ್ಲಿ ಅರ್ಧ ಜನ ಕಾದುನೋಡುವ ತಂತ್ರ ನಡೆಸಿದ್ದಾರಂತೆ. ಜೆಡಿಎಸ್‌ನ 27 ಜನ ಸದಸ್ಯಬಲದಲ್ಲಿ ಒಂದನ್ನು ಕಡಿಮೆಗೊಳಿಸಿರುವ ಬಿಜೆಪಿ ಅದನ್ನು 22ಕ್ಕಿಂತ ಕಡಿಮೆ ಮಾಡಿ ಪ್ರತಿಪಕ್ಷದ ಸ್ಥಾನಮಾನವನ್ನು ಕಿತ್ತುಕೊಳ್ಳುವ ಹುನ್ನಾರ ನಡೆಸಿದೆ. ಹೀಗಾಗಿ ಜೆಡಿಎಸ್‌ನ ಸುಭಾಷ್ ಗುತ್ತೇದಾರ, ಎಸ್.ಕೆ. ಬಸವರಾಜನ್, ನಾಡಗೌಡ ಸೇರಿದಂತೆ ಇನ್ನೂ ಎರಡು ಜನ ಶಾಸಕರಿಗೆ ಮಂತ್ರಿಗಿರಿಯ ಆಮಿಷ ತೋರಿಸಿ ಅವರನ್ನು ಖರೀದಿಸುವ ತಂತ್ರ ಬಯಲಿಗೆ ಬಿದ್ದಿದೆ. ಅದರ ಮೊದಲ ಪ್ರಯೋಗ ಕೊಪ್ಪಳದ ಸಂಗಣ್ಣ ಕರಡಿ ಮೇಲೆ ಯಶಸ್ವಿಯಾಗಿ ನಡೆದಿದೆ. ಅವರ ಉಳಿದ ಜೆಡಿಎಸ್ ಶಾಸಕರು ಬಿಜೆಪಿಯ ಸಂಪರ್ಕವನ್ನು ತಳ್ಳಿ ಹಾಕಿದ್ದಾರಷ್ಟೆ.

ಸದ್ಯ ಬಿಜೆಪಿಯ ಖರೀದಿ ರಾಜಕಾರಣದಿಂದ ರೋಸಿಹೋಗಿರುವ ಉತ್ತರ ಕರ್ನಾಟಕ ಅದರಲ್ಲೂ ಎರಡೆರಡು ಬಾರಿ ಚುನಾಯಿತರಾದ ಲಿಂಗಾಯತ ಶಾಸಕರುಗಳು ಯಡ್ಡಿಗೆ ಗುಡ್‌ಬೈ ಹೇಳಿ ಕುಮಾರಸ್ವಾಮಿ ಅಂಗಳದಲ್ಲಿ ಕಾಣಿಸಿಕೊಳ್ಳಲು ತುದಿಗಾಲ ಮೇಲೆ ನಿಂತಿದ್ದಾರೆ. ಅಧಿವೇಶನ ಮುಗಿದು ಸಂಪುಟ ವಿಸ್ತರಣೆ ಆಗುವವರೆಗೆ ಕಾಯ್ದು ನೋಡುವ ತಂತ್ರ ಅವರದ್ದಾಗಿದೆ.

ಜೆಡಿಎಸ್ ಕೂಡಾ ಇದನ್ನೇ ಬಯಸಿ ಹಾಳೆ ಅನುಸರಿಸುತ್ತಿದೆ ಎಂಬುದು ಸುಳ್ಳಲ್ಲ. ಇಲ್ಲಿಯವರೆಗೆ 16 ಜನ ಶಾಸಕರನ್ನು ಹೊರತಂದು ಯಡ್ಡಿಯ ತಳಕ್ಕೆ ಬತ್ತಿ ಇಟ್ಟಿರುವ ಕುಮಾರಸ್ವಾಮಿ ಬರುವ ದಿನಗಳಲ್ಲಿ ಮತ್ತೊಂದು ದೊಡ್ಡ ತಂಡವನ್ನೆ ಹೈಜಾಕ್ ಮಾಡಿದರೂ ಆಶ್ಚರ್ಯ ಪಡಬೇಕಿಲ್ಲ.

ಉಡುಪಿ: ಎಡಬಿಡಂಗಿ ಪೇಜಾವರರೂ ಹಾರುಬೂದಿ ಕರೆಂಟ್ ಪೀಡೆಯೂ!

ವಿಶ್ವಾಸಘಾತುಕ ಪೇಜಾವರರನ್ನು ಉಡುಪಿ-ಮಂಗಳೂರು-ಪಡುಬಿದ್ರಿ-ನಂದಿಕೂರು ಭಾಗದ ಜನ ನಂಬುವ ಸ್ಥಿತಿಯಲ್ಲಿಲ್ಲ. ಹಿಂದೆ ಮಂಗಳೂರಲ್ಲೂ ಸೆಜ್ ವಿರುದ್ಧದ ಹೋರಾಟದ ಹೊತ್ತಲ್ಲೂ ಪೇಜಾವರರು ಹೀಗೆ ಕೈಕೊಟ್ಟಿದ್ದರು. ಈಗ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರ ಪೀಡೆಯ ವಿರುದ್ಧ ಸಿಡಿದೆದ್ದಿರುವ ಸಂತ್ರಸ್ತರ ಹೋರಾಟವನ್ನು ದುರ್ಬಲಗೊಳಿಸಲು ಸಂಚು ಮಾಡುತ್ತಿದ್ದಾರಷ್ಟೇ. ಹಾಗಂತ ನಾಗಾರ್ಜುನ ಹಿಂಸೆಯಿಂದ ಹೈರಾಣಾಗಿರುವ ಜನ ಬಾಯ್ಬಾಯಿ ಬಡಿದುಕೊಳ್ಳುತ್ತಿದ್ದಾರೆ.



ಪೇಜಾವರರ ವಿರುದ್ಧ ಪ್ರತಿಭಟನೆ....

ಕಾವಿ-ಚಡ್ಡಿ ಆಸ್ಥಾನದ ಪವರ್‌ಫುಲ್ ರಾಜ ಪುರೋಹಿತ ಪೇಜಾವರ ಸ್ವಾಮೀಜಿ ಸಮಾಜ ಸುಧಾರಣೆಯ ಪೋಸು ಕೊಟ್ಟಾಗೆಲ್ಲಾ ಆಗಬಾರದ ಅವಾಂತರವೇ ಆಗುತ್ತಿದೆ. ಪೇಜಾವರರು ಅಸಲಿ ಧಾರ್ಮಿಕ ದಾರಿ ಬಿಟ್ಟು ಬರಿಕೆ ರಾಜಕೀಯ-ಸಾಮಾಜಿಕ 'ಚಟುವಟಿಕೆ' ಶುರುಹಚ್ಚಿಕೊಂಡಾಗಂತೂ ಕರಾವಳಿಯಲ್ಲಿ ಸರಣಿ ಸಂಕಷ್ಟಗಳೇ ಎದುರಾಗಿದೆ. ಪ್ರಳಯಾಂತಕ ಸರ್ಕಾರಿ ಯೋಜನೆಗಳ ವಿರುದ್ಧ ಈ ಸ್ವಾಮಿ ಹೋರಾಟ-ಪ್ರತಿಭಟನೆಗೆ 'ಧುಮುಕಿದಾ' ಪೇಜಾವರ ಮಠದ ಹೆಡ್‌ಕ್ವಾಟರ್ಸ್ ಉಡುಪಿಯ ಸುತ್ತಲಿನ ಜನರಿಗೆ ಒಳ್ಳೆಯದಾಗುವುದಿರಲಿ, ಕೆಟ್ಟದ್ದೇ ಹೆಚ್ಚಾಗಿವೆ.

ಜನಪರ ಧಾರ್ಮಿಕ ಮುಖಂಡನ ಗೆಟಪ್ಪಿನಲ್ಲಿ ಪೇಜಾವರರು 'ಧರ್ಮದಂಡ' ಎತ್ತಿಕೊಂಡು ಹೊರಟರೆಂದರೆ ಉಡುಪಿ-ಮಂಗಳೂರಿನ ಮಂದಿಗೆ ಗಂಡಾಂತರ ಗ್ಯಾರಂಟಿ! ಬದ್ಧತೆ-ಶುದ್ಧತೆ-ಸ್ಪಷ್ಟತೆ-ಪ್ರಾಮಾಣಿಕತೆಯಿಲ್ಲದ ಪೇಜಾವರರ ದ್ವಂದ್ವ-ಧಾರ್ಮಿಕ ದಂಧೆಗಳೇ ಅವರ ಚಳವಳಿ-ಸತ್ಯಾಗ್ರಹಗಳು ಯಾತನಾಮಯ ಪ್ರಹಸನಗಳಾಗಿ ಜನರನ್ನು ಕಾಡಲು ಪ್ರಮುಖ ಕಾರಣ! ನಂದಿಕೂರು-ಪಡುಬಿದ್ರಿ ಪ್ರದೇಶವನ್ನು ಸಾಕ್ಷಾತ್ ನರಕವಾಗಿಸಿರುವ ಆಂಧ್ರವಾಳ್ಳುಗಳ ನಾಗಾರ್ಜುನ ಥರ್ಮಲ್ ಕರೆಂಟ್ ಪ್ರಾಜೆಕ್ಟ್ ವಿರುದ್ಧದ ಜನಾಂದೋಲನದಲ್ಲಿ ನುಸುಳಿಕೊಂಡಿರುವ ಪೇಜಾವರ ಸ್ವಾಮಿಯ ಎಡಬಿಡಂಗಿತನದಿಂದಾಗಿ ಮೊನ್ನೆ ಉಡುಪಿಯಲ್ಲೊಂದು ರಂಪ-ರಾದ್ಧಾಂತವೇ ಆಗಿಹೋಯ್ತು; ಪೇಜಾವರರ ಸಂಶಯಾಸ್ಪದ ನಡವಳಿಕೆ ಕಂಡ ಪ್ರತಿಭಟನಾಕಾರರು ಅವರೇ ಹೋರಾಟದ ಹಾದಿ ತಪ್ಪಿಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿ ತಿರುಗಿಬಿದ್ದರು.

ನರಕ! ನರಕ!!


ಉಡುಪಿ ಸಮೀಪದ ನಂದಿಕೂರು ಎಂಬಲ್ಲಿ ಜೀವವಿರೋಧಿ ಹಾರುಬೂದಿ (ಕಲ್ಲಿದ್ದಲು) ವಿದ್ಯುತ್ ಘಟಕ ಸ್ಥಾಪಿಸಿದ 'ಸಾಧನೆ' ಜಿಲ್ಲಾ ಉಸ್ತುವಾರಿ ಮಂತ್ರಿ ಡಾ.ವಿ.ಎಸ್. ಆಚಾರ್ಯನೆಂಬ ಮನೆಹಾಳ ಹಿಂಬಾಗಿಲ ಪುಢಾರಿಗೆ ಸಲ್ಲಬೇಕು. ಕುಮಾರಸ್ವಾಮಿ ಕ್ಯಾಬಿನೆಟ್‌ನಲ್ಲಿರುವಾಗಲೇ ತುಂಬ ಮುತುವರ್ಜಿ ವಹಿಸಿ ಆಚಾರ್ಯ ಈ ಪ್ರಾಜೆಕ್ಟ್ ತಂದಿದ್ದಾರೆ. ಜನಸಾಮಾನ್ಯರ ಬದುಕು ಬವಣೆ ಮಾಡುವ, ಅವರ ಜೀವನಾಧಾರ ಕಸುಬುಗಳಲ್ಲನ್ನೆಲ್ಲ ನಾಶ ಮಾಡುವ ಈ ಹಾರುಬೂದಿ ಸ್ಥಾವರದ ವಿರುದ್ಧ ಮೀನುಗಾರರು-ರೈತರು-ಪರಿಸರಪ್ರಿಯರು ಮಾಡಿದ ಹೋರಾಟವನ್ನೆಲ್ಲ ಬುಲ್ಡೋಜ್ ಮಾಡಿದ್ದು ಇದೇ ಜನದ್ರೋಹಿ ಆಚಾರ್ಯ.



ನಾಗಾರ್ಜುನ ಕಂಪೆನಿಗೆ ಹರಾಜಾಗಿ ಹೋಗಿದ್ದ ಆಚಾರ್ಯ ಅದೆಷ್ಟು ನಾಜೂಕಾಗಿ ಡಬ್ಬಲ್ ಗೇಮ್ ಆಡಿದ್ದರೆಂದರೆ 'ಆ ಮೂರ್ಖ ದೇವೇಗೌಡ-ಕುಮಾರಸ್ವಾಮಿಗೆ ಎಷ್ಟು ಹೇಳಿದರೂ ಅರ್ಥವೇ ಆಗೋದಿಲ್ಲಾ... ಅವರಿಗೆ ನಾಗಾರ್ಜುನ ಕರೆಂಟ್ ಸ್ಥಾವರ ಸ್ಥಾಪಿಸೋ ಹಠ... ನಂದೇನೂ ಕ್ಯಾಬಿನೆಟ್‌ನಲ್ಲಿ ನಡೆಯೋದಿಲ್ಲ ಮಾರಾಯ್ರೆ... ' ಎಂದು ಸ್ಥಾವರ ವಿರೋಧಿಗಳ ತಲೆಗೆ ಎಣ್ಣೆ ಮಸಾಜ್ ಮಾಡುತ್ತಾ ಬಂದರು. ಆದರೆ ಒಳಗೊಳಗೆ ನಾಗಾರ್ಜುನ ಕಂಪೆನಿಗೆ ಬೇಕಾದ ಎಲ್ಲ ಸಹಾಯ-ಸಹಕಾರ ಕೊಡುತ್ತ ಬಂದರು.

ಕ್ಯಾಬಿನೆಟ್ ಸಭೆಯಲ್ಲಿ ಅಥವಾ ಆಂದಿನ ಸಿಎಂ ಮುಂದೆ ಆಚಾರ್ಯ ಎಂದೂ ನಂದಿಕೂರು ಹಾರುಬೂದಿ ಪ್ಲಾಂಟ್ ವಿರುದ್ಧ ಮಾತಾಡಿದ್ದೇ ಇಲ್ಲ. ಹಾಗಂತ ಸ್ವತಃ ಕುಮಾರಸ್ವಾಮಿಯೇ ಸ್ಥಾವರ ವಿರೋಧಿಗಳೆದುರು ಹೇಳಿದ್ದಿದೆ. ಆಚಾರ್ಯನ ಈ ದ್ರೋಹ-ಮೋಸ ಕಂಡೂ ಕಾಂಗ್ರೆಸ್‌ನ ಸರದಾರ ಆಸ್ಕರ್ ಫರ್ನಾಂಡಿಸರೂ ಅಂದು ಬಾಯಲ್ಲಿ ಅವಲಕ್ಕಿ ಹಾಕಿಕೊಂಡು ಕೂತಿದ್ದರು.

ಉಡುಪಿ ಜಿಲ್ಲೆಗೆ ಈ ಆಚಾರ್ಯ-ಆಸ್ಕರ್‌ಗಳೇ ದೊಡ್ಡ ಶಾಪ! ಈ ಆಚಾರ್ಯ-ಆಸ್ಕರ್‌ಗಳ ಕುಮ್ಮಕ್ಕಿನಿಂದಲೇ ಇವತ್ತು ನಂದಿಕೂರಲ್ಲಿ ಪ್ರಳಯಾಂತಕ ಥರ್ಮಲ್ ಪ್ರಾಜೆಕ್ಟ್ ಪ್ರಾರಂಭವಾಗಿದೆ. ಸ್ಥಳೀಯ ಗ್ರಾಮ ಪಂಚಾಯತ್‌ನಿಂದ ಕೇಂದ್ರ ಪರಿಸರ ಇಲಾಖೆವರೆಗಿನ ಅದೆಷ್ಟೋ ನಿರಾಕ್ಷೇಪಣಾ ಪತ್ರಗಳೇ ಇದಕ್ಕಿಲ್ಲ. ಆಂಧ್ರದ ವಿಜಯವಾಡದ ಕಾಂಗ್ರೆಸ್ ಸಂಸದ ರಾಜಗೋಪಾಲ್ ಒಡೆತನದ ನಾಗಾರ್ಜುನ್






ಥರ್ಮಲ್ ಪ್ರಾಜೆಕ್ಟ್ ಸ್ಥಳೀಯರಿಗೆ ಮಾಡಿದ ಕಷ್ಟ-ನಷ್ಟ-ಅನ್ಯಾಯ-ಅನಾಹುತ ಒಂದೆರಡಲ್ಲ. ದಾದಾಗಿರಿಯಿಂದ ಜನರನ್ನು ಒಕ್ಕಲೆಬ್ಬಿಸಿ ಬೀದಿ ಪಾಲಾಗಿಸಿದೆ; ಮನೆ-ಮಠಗಳನ್ನು ಅಮಾನುಷವಾಗಿ ಮುರಿದು ಎಸೆದು, ಸಂತ್ರಸ್ತರಿಗೆ ಹಿಂಸೆ ನೀಡಲಾಗಿದೆ. ಇದೆಲ್ಲ ಜಿಲ್ಲಾ ಮಂತ್ರಿ ಅಡ್ನಾಡಿ ಆಚಾರ್ಯನ ಕಣ್ಣೆದುರೇ ನಡೆದಿದೆ.

ಜನರ ವಿರೋಧ-ಹೋರಾಟಗಳ ನಡುವೆಯೇ ತಲೆ ಎತ್ತಿರುವ ನಾಗಾರ್ಜುನ ಹಾರುಬೂದಿ ಸ್ಥಾವರ ಪರೀಕ್ಷಾ ಹಂತದಲ್ಲೇ ರೌರವ ನರಕ ಸೃಷ್ಟಿಸಿಬಿಟ್ಟಿದೆ! ನಾಗಾರ್ಜುನ ಸೈಟ್‌ನಿಂದ ಐದಾರು ಕಿ.ಮೀ. ವ್ಯಾಪ್ತಿಯ ಬಾವಿಯ ನೀರು ಕಲ್ಲಿದ್ದಲು ಮತ್ತು ಹಾರುಬೂದಿಯಿಂದ ವಿಷಮಯವಾಗಿದೆ! ಗದ್ದೆ-ತೋಟಗಳು ಬಂಜರಾಗುತ್ತಿದೆ!! ಮೀನುಗಾರರು ಸಮುದ್ರಕ್ಕೆ ವಿಷ ಬೆರೆಯುವ ಭಯದಿಂದ ಕಂಗಾಲಾಗಿದ್ದಾರೆ. ಸ್ಥಾವರದ ವಿನ್ಯಾಸವೇ ಅಸಮರ್ಪಕ! ಸಮುದ್ರಮಟ್ಟದಿಂದ ಸುಮಾರು 40 ಅಡಿ ತಗ್ಗಲ್ಲಿ ಸ್ಥಾವರ ಕಟ್ಟಲಾಗಿದೆ. ಕಲುಷಿತ ತ್ಯಾಜ್ಯ ಸಮುದ್ರಕ್ಕೆ ಸೇರುವುದಾದರೂ ಹೇಗೆ? ಪಂಪ್ ಮಾಡಿ ಈ ತ್ಯಾಜ್ಯ ಸಮುದ್ರಕ್ಕೆ ಬಿಡುತ್ತಿರುವುದರಿಂದ ಒತ್ತಡ ಏರ್ಪಟ್ಟು ಸಮುದ್ರದ ಉಪ್ಪು ನೀರು ಗದ್ದೆ-ತೋಟ-ಬಾವಿಗಳಿಗೆ ನುಗ್ಗುತ್ತಿದೆ. ತ್ಯಾಜ್ಯ ಹರಿಸುವ ಪೈಪ್‌ಗಳು ಒಡೆದು ಇಡೀ ಪರಿಸರ ಕಲುಷಿತವಾಗಿದೆ.

ಹಾರುಬೂದಿಯ ವಿಲೇವಾರಿಯೂ ಅಸಮರ್ಪಕವಾಗಿದೆ. ನಂದಿಕೂರಿನ ಆಚೀಚೆಯ ನಾಲ್ಕೈದು ಹಳ್ಳಿಗಳಿಗೆ ನೀರುಣಿಸುತ್ತಿದ್ದ ಸ್ವಜಲಧಾರಾ ಯೋಜನೆಯ ಕೆರೆಯಲ್ಲಿ ಈ ಹಾರುಬೂದಿ ತುಂಬಲಾಗುತ್ತಿದೆ. ಟೆಸ್ಟಿಂಗ್ ಹಂತದಲ್ಲೇ ಇಷ್ಟೊಂದು ಅನಾಹುತ ಮಾಡುತ್ತಿರುವ ನಾಗಾರ್ಜುನ ಪೂರ್ಣ ಕಾರ್ಯಾಚರಣೆ ನಡೆಸಿದರೆ ಉಡುಪಿ-ಮಂಗಳೂರಿನ ಲಕ್ಷಾಂತರ ಜನ ಊರುಬಿಟ್ಟು ಘಟ್ಟ ಹತ್ತಬೇಕಾಗುತ್ತದೆಂಬುದು ಈಗ ಖಾತ್ರಿಯಾಗಿ ಹೋಗಿದೆ. ಹಾಗಾಗಿ ಜನ ಮತ್ತೆ ಈ ಜೀವ ವಿರೋಧಿ ಪ್ರಾಜೆಕ್ಟ್ ವಿರುದ್ಧ ತಿರುಗಿಬಿದ್ದಿದ್ದಾರೆ. ಸ್ಥಾವರ ಬಂದ್ ಮಾಡುವಂತೆ ಆಗ್ರಹಿಸಿ ಜನ ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ.

ಪೇಜಾವರ ಪ್ರವೇಶಂ!

ಸಂತ್ರಸ್ಥ ಜನರ ಹೋರಾಟ ಜೋರಾಗುತ್ತಿದ್ದಂತೆಯೇ ಪೇಜಾವರ ಸ್ವಾಮಿ ಅನಿವಾರ್ಯವಾಗಿ ಎಚ್ಚೆತ್ತುಕೊಳ್ಳಬೇಕಾಗಿ ಬಂತು, ಪಾಪ! ನಾಗಾರ್ಜುನ



ಮತ್ತು ಸರ್ಕಾರಿ ಗೂಂಡಾಗಳು ಜನರಿಗೆ ಹೊಡೆದು-ಬಡಿದು, ಅವರ ಆಸ್ತಿಪಾಸ್ತಿ ಧ್ವಂಸ ಮಾಡಿ ಸ್ಥಾವರ ಸ್ಥಾಪಿಸುತ್ತಿದ್ದಾಗ ತಮ್ಮ ಪಟ್ಟದ ಶಿಷ್ಯ ಡಾ.ಆಚಾರ್ಯನ ಹಿತಾಸಕ್ತಿಗೆ ಧಕ್ಕೆ ಬರುತ್ತದೆಂಬ ಏಕೈಕ ಕಾರಣಕ್ಕೆ 'ತಟಸ್ಥ'ರಾಗಿದ್ದ ಪೇಜಾವರ ಸ್ವಾಮಿ ಈಗ ಸಂಭಾವಿತನ ಸೋಗು ಹಾಕುತ್ತಾ ಯೋಜನಾ ವಿರೋಧಿಯೆಂದು ತೋರಿಸಿಕೊಳ್ಳಲು ತಿಪ್ಪರಲಾಗ ಹಾಕುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಸ್ಥಾವರದಿಂದ ತೊಂದರೆಗೊಳಗಾದ ಏರಿಯಾಕ್ಕೆ ಹೋಗಿದ್ದ ಸ್ವಾಮಿ ಅಲ್ಲಿನವರ ಸಮಸ್ಯೆ ಆಲಿಸಿ ತಾನೂ ನಾಗಾರ್ಜುನ ವಿರುದ್ಧ ಬೀದಿಗಿಳಿದು ಹೋರಾಡುವ ಮಾತಾಡಿ ಬಂದಿದ್ದರು.

ಅಷ್ಟೇ ಅಲ್ಲ, ಮಾರ್ಚ್ 3ರ ಒಳಗೆ ಕಂಪೆನಿಯವರು ಸ್ಥಾವರ ಸ್ಥಗಿತಗೊಳಿಸಬೇಕು, ಬಂದ್‌ಮಾಡದೇ ಕಂಪೆನಿಯವರ ಜೊತೆ ಮಾತುಕತೆಯೇ ಇಲ್ಲ, ಸಂತ್ರಸ್ತರ ಹೋರಾಟಕ್ಕೆ ತಾನು ಬೆಂಬಲ ಕೊಡುತ್ತೇನೆಂದು ಪೇಜಾವರರು ಘಂಟಾಘೋಷವಾಗಿ ಹೇಳಿದ್ದರು. ಆದರೆ ಗಡುವು ಮುಗಿದರೂ ನಾಗಾರ್ಜುನ ಕಂಪೆನಿಯವರು ಅಕ್ರಮ ಸ್ಥಾವರ ಬಂದ್ ಮಾಡಲೇ ಇಲ್ಲ. ಇದರಿಂದ ರೊಚ್ಚಿಗೆದ್ದ ಸ್ಥಾವರ ವಿರೋಧಿ ಹೋರಾಟಗಾರರು, ರೈತಸಂಘದವರು ಪೇಜಾವರರಿಗೆ ಹೋರಾಟಕ್ಕೆ ಬರುವಂತೆ ದುಂಬಾಲು ಬಿದ್ದರು. ಆಗ ವಿರೋಧಾಭಾಸಗಳ ಪೇಜಾವರರು ಪೇಚಿಗೆ ಬಿದ್ದರು.

ಬೂಟಾಟಿಕೆ ಬಯಲು

ಹೋರಾಟಕ್ಕೇನೋ ರೆಡಿ. ಆದರೆ ಅದರಿಂದ ತನ್ನವರಿಗೆ (ಆಚಾರ್ಯ-ಕಾವಿ ಚಡ್ಡಿ ಬಳಗ) ಗಾಯವಾದೀತೆಂಬ ಭೀತಿಯ ಧೋರಣೆ ಸ್ವಾಮೀಜಿಯದಾಗಿತ್ತು! ಹೀಗಾಗಿ ಹೋರಾಟಕ್ಕೂ ಮೊದಲೊಂದು ವಿಚಾರವಿನಿಮಯ ಸಭೆ ತನ್ನ ನೇತೃತ್ವದಲ್ಲಿ ನಡೆಸಲು ಆತ ಸ್ಕೆಚ್ ಹಾಕಿದರು. ಆ ಸಭೆಗೆ ನಾಗಾರ್ಜುನ ಕಂಪೆನಿಯ ಅಧಿಕಾರಿಗಳು, ಯೋಜನಾ ವಿರೋಧಿ ಹೋರಾಟಗಾರರು, ರೈತಸಂಘದವರು ಮತ್ತು ಪರಿಸರ ತಜ್ಞರು ಬಂದು ಸಾಧಕ-ಬಾಧಕದ ಬಗ್ಗೆ ಮಾತಾಡಲಿ ಎಂಬುದು ಪೇಜಾವರರ ಯೋಜನೆಯಾಗಿತ್ತು, ಅದಕ್ಕೆ ಸ್ಥಾವರ ವಿರೋಧಿ ಸಂತ್ರಸ್ತರು ಒಪ್ಪಿದ್ದರು.

ಅಂತೆಯೇ ಕಳೆದ 4-3-11ರ ಶುಕ್ರವಾರ ರಥಬೀದಿಯ ಯಕ್ಷಗಾನ ಕಲಾರಂಗದಲ್ಲಿ 'ವಿಚಾರ-ವಿನಿಮಯ' ಸಭೆಯನ್ನು ಪೇಜಾವರರು ಕರೆದರು. ಪೂರ್ವ ನಿರ್ಧಾರದಂತೆ ಈ ಸಭೆ ಅಂದೇ ಸಂಜೆ 4-30ಕ್ಕೆ ಪಡುಬಿದ್ರಿಯಲ್ಲಿ ನಡೆಯಬೇಕಿತ್ತು. ಆದರೆ ಪೇಜಾವರರು ತನಗೆ ಮಂತ್ರಾಲಯಕ್ಕೆ ಹೋಗಬೇಕಾಗಿರುವುದರಿಂದ ಉಡುಪಿಯಲ್ಲಿ ಬೆಳಗ್ಗೆಯೇ ಇಂಥದೊಂದು ಸಭೆ ನಡೆಸೋಣ ಎಂದಿದ್ದರು.

ಆರಂಭದಲ್ಲೇ ಸ್ವಾಮೀಜಿ ಎಡವಟ್ಟು ಮಾಡಿಕೊಂಡಿದ್ದರು. ಅವಸರವಸರವಾಗಿ ಸಭೆ ಆಯೋಜಿಸಿದ್ದೇ ಅನುಮಾನಕ್ಕೆ ಎಡೆಮಾಡಿಕೊಟ್ಟಿತ್ತು. ಸಭೆಯ ಆರಂಭವ್ರಾ ಪೇಜಾವರರು ಹಾರುಬೂದಿ ಕರೆಂಟ್ ಕಂಪೆನಿಯ ಏಜೆಂಟರೋ ಎಂಬ ಭಾವನೆ ಮೂಡುವಂತಿತ್ತು. ವೇದಿಕೆಯಲ್ಲಿ ಸ್ವಾಮೀಜಿ ತನ್ನ ಎಡ-ಬಲ-ಹಿಂದೆ-ಮುಂದೆ ಕಂಪೆನಿಯ ಕ್ರೂರ-ಖದೀಮ- ಕಳ್ಳ ಅಧಿಕಾರಿಗಳು ಮತ್ತು ತನಗೆ ಬೇಕಾದ ಪರಿಸರ ಪಂಡಿತರನ್ನಷ್ಟೇ ಪ್ರತಿಷ್ಠಾಪಿಸಿಕೊಂಡಿದ್ದರು. ಅಪ್ಪಿತಪ್ಪಿಯೂ ವೇದಿಕೆಯಲ್ಲಿ ಸಂತ್ರಸ್ತರಿಗಾಗಲಿ, ವಿರೋಧಿ ಹೋರಾಟಗಾರರಿಗಾಗಲಿ ಅಥವಾ ರೈತ ಸಂಘದ ನೇತಾರ ವಿಜಯಕುಮಾರ್ ಹೆಗ್ಡೆಯಂಥ ಪ್ರಾಮಾಣಿಕ ಹೋರಾಟಗಾರನಿಗೂ ಜಾಗ ಕೊಟ್ಟಿರಲಿಲ್ಲ. ಇದು ಸಹಜವಾಗೇ ಅಲ್ಲಿ ಸೇರಿದ್ದ ಸಂತ್ರಸ್ತರನ್ನು ಕೆರಳಿಸಿತ್ತು.

ಸ್ಥಾವರದ ಬಳಿ ಮಠ ಕಟ್ತೀರಾ?

ನಾಗಾರ್ಜುನ ಹಾರುಬೂದಿ ಸ್ಥಾವರ ವಿರೋಧಿ ಹೋರಾಟದಲ್ಲಿ ಆಗಾಗ ನುಸುಳಿ ಗೊಂದಲ ಮೂಡಿಸಿ ಪರಾರಿಯಾಗುವ ಪೇಜಾವರ ಸ್ವಾಮೀಜಿ ವಿರುದ್ಧ ಈಗ ನಂದಿಕೂರು-ಪಡುಬಿದ್ರಿ-ಉಡುಪಿ ಮಂದಿ ತಿರುಗಿ ಬಿದ್ದಿದ್ದಾರೆ. ಚಾಂಡಾಲ ಮಂತ್ರಿ ಆಚಾರ್ಯ ಮತ್ತು ನಾಗಾರ್ಜುನಾ ಕಂಪನಿಯ ಏಜೆಂಟರಂತೆ ಕಿತಾಪತಿ ಮಾಡುತ್ತಿರುವ ಪೇಜಾವರರ ಬಗ್ಗೆ ಒಂಚೂರೂ ವಿಶ್ವಾಸವೀಗ ಜನರಲ್ಲಿ ಇಲ್ಲದಾಗಿದೆ. ನಾಗಾರ್ಜುನ ಬ್ರಹ್ಮರಾಕ್ಷಸ ಎನ್ನುತ್ತಿದ್ದ ಪೇಜಾವರರೀಗ ಆಂಧ್ರದ ಬಂಡವಾಳಶಾಹಿಗಳ ಥೈಲಿಗೆ ಮರುಳಾಗಿ ಸ್ಥಾವರದಿಂದಾಗುವ ಪರಿಸರ ಹಾನಿ ಕಡಿಮೆ ಮಾಡುವ ಮಾತಾಡುತ್ತಿದ್ದಾರಂತೆ. ಸ್ಥಾವರ ತೆಗೆಸುವ ಯೋಚನೆ ಅವರಲ್ಲಿಲ್ಲ.

ಇದು ಹೋರಾಟಗಾರರು-ಸಂತ್ರಸ್ತರನ್ನೆಲ್ಲ ಕಡೆಗಣಿಸಿ ಕಂಪನಿ ಅಧಿಕಾರಿಗಳ ಜೊತೆ ಪೇಜಾವರರು ಚಕ್ಕಂದ ಆಡುತ್ತಿರುವಾಗಲೇ ಜನರಿಗೆ ಖಾತ್ರಿಯಾಗಿದೆ. ಹಾಗಾಗಿ ಜನರೀಗ ಪೇಜಾವರರಿಗೆ ಒಂದೇ ಪ್ರಶ್ನೆ ಕೇಳುತ್ತಿದ್ದಾರೆ. "ನಾಗಾರ್ಜುನಾ ಸ್ಥಾವರದ ಹಾರುಬೂದಿ-ತ್ಯಾಜ್ಯದ ಬಳಿ ನಿಮ್ಮ ಅಧೋಕ್ಷಜ ಪೇಜಾವರ ಮಠ ಸ್ಥಳಾಂತರಿಸುತ್ತೀರಾ?" ಎಂದು ಕೇಳುತ್ತಿದ್ದಾರೆ. ಇನ್ನಾದರೂ ಪೇಜಾವರರು ಜನರ ಬದುಕಿನೊಂದಿಗೆ ಚೆಲ್ಲಾಟವಾಡುವ ಜನಪರ ಹೋರಾಟ ಹಾಳು ಮಾಡುವ ಧರ್ಮಬಾಹಿರ (ಕರ್ಮ) ಮಾಡುವುದು ಬಿಡಬಹುದಾ?!


ಮಾರ್ಚ್ 3ರ ಒಳಗೆ ಅನಾಹುತಕಾರಿ ಸ್ಥಾವರ ...ಗಿತಗೊಳಿಸದಿದ್ದರೆ ಹೋರಾಟ ಗ್ಯಾರಂಟಿ ಎಂದಿದ್ದ ...ೕಜಾವರರು ಪರತ್ತನ್ನು ಬುದ್ಧಿಪೂರ್ವಕವಾಗೇ ...ಉಲ್ಲಂಘಿಸಿದ್ದ ನಾಗಾರ್ಜುನ ಕಂಪೆನಿಯ ಪಾಪಿಗಳ ಜತೆ ...ಾತುಕತೆಗೆ ಮುಂದಾಗಿದ್ದೇ ಆತ ಸೋಗಲಾಡಿ ...ಸ್ವಾಮಿ ಎಂಬುದನ್ನು ಸಾಬೀತುಪಡಿಸಿತ್ತು. ಸ್ವಾಮಿ ...ುತ್ತಲೂ ವೇದಿಕೆಯಲ್ಲಿ ಮೇಳೈಸಿದವರಲ್ಲಿ ಸುದರ್ಶನ ...ನ್ನ ಎಂಬುವವನೂ ಇದ್ದ. ಈತ ಸ್ಥಳೀಯನಾದರೂ ...ಂಪೆನಿ ಅಧಿಕಾರಿಯಾಗಿರುವ ಈ ಘಂಡನ ಕಂಡರೆ ...ಂತ್ರಸ್ತರಿಗೆ ರೋಷ ಉಕ್ಕುತ್ತದೆ. ...ತ ಜನರ ತಲೆ ಒಡೆದಿದ್ದಾನೆ. ...ವರ ಆಸ್ತಿ-ಮನೆ-ಮಠ ...ೂರು ಮಾಡಿದ್ದಾನೆ. ಊಟ ...ಾಡುತ್ತಿದ್ದವರನ್ನೂ ಬಿಡದೇ ...ೕದಿಗೆ ಎಳೆದು ಹಾಕಿದ್ದಾನೆ. ...ಾವುಡ ಎಂಬ ಮತ್ತೊಬ್ಬನೂ ...ುದರ್ಶನನಂತೆ ಪಾತಕಿಯೇ. ...ಂಥವರನ್ನು ಸ್ವಾಮಿ ಅವರ ...ಚಿತ್ರ ಗೊತ್ತಿದ್ದೂ ಹತ್ತಿರ ಇಟ್ಟುಕೊಂಡು ಸಭೆ ...ಡೆಸಿದ್ದು ಕಂಡು ಜನ ಕುದ್ದುಹೋಗಿದ್ದರು.



ಆದರೂ ಸಂತ್ರಸ್ತರ್‍ಯಾರೂ ತಾಳ್ಮೆಗೆಟ್ಟಿರಲಿಲ್ಲ. ಯಾವಾಗ ...ಸ್ಥಾವರದಿಂದ ಸ್ಥಳೀಯವಾಗಿ ಸೃಷ್ಟಿಯಾಗಿರುವ ಸಮಸ್ಯೆಗಳನ್ನು ...ಸ್ತಾಪಿಸದೇ ಬೇಕಂತಲೇ ಸ್ಥಾವರದ ಗುಣಗಾನ-ಅಂತರ ...ಷ್ಟ್ರೀಯವಾಗಿ ಥರ್ಮಲ್ ಸ್ಥಾವರ ಎಷ್ಟು ಸುರಕ್ಷಿತವೆಂದು ...ರಿಗಣಿಸಲಾಗಿದೆ ಎಂಬಿತ್ಯಾದಿ ಹಸಿಹಸಿ ಸುಳ್ಳನ್ನು ಕಂಪೆನಿ ...ಧಿಕಾರಿಗಳು ಹೇಳುತ್ತಿದ್ದಾಗ ಜನರ ಸಹನೆಯ ಕಟ್ಟೆ ...ಡೆದುಹೋಯ್ತು. ಸುದರ್ಶನ ಇನ್ನ ಮಾಡಿದ ಪಾತಕ ...ರೆಯಲ್ಲಿದ್ದ ಸಂತ್ರಸ್ತರ ಕಣ್ಣಿನ ಮುಂದೆ ಒಂದೊಂದಾಗಿ ...ೂಡತೊಡಗಿತು. ಇಂಥ ಪಡಪೋಸಿಗಳು, ಮನೆ ...ುರುಕರನ್ನು ಇಟ್ಟುಕೊಂಡು ಸಭೆ ನಡೆಸುತ್ತಿರುವ ನಿಮ್ಮ ...ದ್ದೇಶವಾದರೂ ಏನೆಂದು ಜನ ಸ್ವಾಮೀಜಿಯನ್ನು ...ೇಳತೊಡಗಿದರು. ಒಂಚೂರು ಗಲಾಟೆ-ಬೊಬ್ಬೆ ನಡೆಯಿತು.

ತಾಳ್ಮೆಗೆಟ್ಟ ಸ್ವಾಮಿ

ಜನರ ಸಾತ್ವಿಕ ಸಿಟ್ಟು-ನ್ಯಾಯೋಚಿತ ಪ್ರಶ್ನೆಗಳಿಂದ ...ಧಿಕಾರಿಗಳಿಗಿಂತ ಹೆಚ್ಚು ಹತಾಶರಾಗಿ ತಾಳ್ಮೆಗೆಟ್ಟಿದ್ದು



...ಜಾವರ ಸ್ವಾಮಿ! ಜನರು ಅಧಿಕಪ್ರಸಂಗಿ ಕಂಪೆನಿ ...ಧಿಕಾರಿಗಳ ವಿರುದ್ಧ ಮಾತಾಡಿದ್ದಾರೆ, ತನಗೇನೂ ಅಂದಿಲ್ಲ ...ಂಬುದನ್ನೂ ಗ್ರಹಿಸುವಷ್ಟು ವಿವೇಚನೆ ಅವರಲ್ಲಿಲ್ಲದಾಗಿದ್ದು ...ಪರ್ಯಾಸ. ತನ್ನ 'ಹಿಡನ್ ಉದ್ದೇಶ' ವಿಫಲವಾಗಿದ್ದು ... ಸರ್ವಸಂಘ ಪರಿತ್ಯಾಗಿಯನ್ನು ಕೆರಳಿಸಿಬಿಟ್ಟಿತ್ತು. ಸಿಟ್ಟಿನ ...ದ್ರಿಯ ನಿಗ್ರಹಿಸಲಾಗದೇ ಪೇಜಾವರರು ಸಭೆಯಿಂದ ...ದರಾಡುತ್ತಾ ಹೊರಹೋದರು. ಹದಿನೈದೇ ನಿಮಿಷದಲ್ಲಿ ...ಧಕ-ಬಾಧಕ ಸಭೆ ರಣರಂಗವಾಗಿ ಮಾರ್ಪಟ್ಟಿತು.

...ಒಂದು ತಾಸಿನ ಬಳಿಕ ಮತ್ತೆ ಸಭಾ ಸ್ಥಳಕ್ಕೆ ಪೇಜಾವರರು ...ದರು. ಆಗ ಕಂಪೆನಿ ಅಧಿಕಾರಿಗಳನ್ನು ದಿಗ್ಬಂಧನದಲ್ಲಿಟ್ಟು ...ಡಿದ್ದ ಜನ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ...ಮೀಜಿ-ಸಂತ್ರಸ್ತರು-ರೈತ ಸಂಘದವರ ನಡುವೆ ಮಾತಿಗೆ ...ತು ಬೆಳೆಯಿತು. ಇನ್ನು ಮುಂದೆ ರೈತ ಸಂಘದವರ ...ವರ ವಿರೋಧಿ ಹೋರಾಟಕ್ಕೂ ತನಗೂ ಸಂಬಂಧವಿಲ್ಲ ...ದು ಹೇಳಿ ಸ್ವಾಮಿ ದುರ್ದಾನ ತೆಗೆದುಕೊಂಡವರಂತೆ ...ರಟುಹೋದರು. ಸಭೆಯಲ್ಲಿ ಸಣ್ಣ ಗಲಾಟೆಯಾದಾಗಲೇ ...ಜಾವರರು ಅದನ್ನು ನಿಯಂತ್ರಿಸಬಹುದಿತ್ತು. ಸಂತ್ರಸ್ತರು ...ಭವಿಸಿದ ನೋವು-ನಷ್ಟ ಅವರನ್ನು ಭಾವಾವೇಶರ ...ಿಸಿದೆ ಎಂಬುದನ್ನು ದೈವಾಂಶ ಸಂಭೂತರಾದ ಸ್ವಾಮಿ ...ಮಾಡಿಕೊಂಡು ಶಾಂತಿ ನೆಲೆಸುವಂತೆ ಮಾಡಬೇಕಿತ್ತು. ...ನ್ನು ಬಿಟ್ಟು ದೇವರೇ ನಾಚುವಂತೆ ಹಾರಾಡಿದ್ದು ಇಡೀ ...ಅಸಹ್ಯವಾಗಿ ರಂಪ-ರಗಳೆಯಾಗುವಂತೆ ಮಾಡಿತು!!

ಜೇಪಿಯೊಂದಿಗೆ ಚೆಲ್ಲಾಟ

...ಜೊತೆ, ನಾಗಾರ್ಜುನ ಕರೆಂಟ್ ಕಂಪೆನಿ ಕುಳಗಳ ...ಂತರಂತೆ ವರ್ತಿಸಿದ ಪೇಜಾವರ ಸ್ವಾಮಿ ಸಂತ್ರಸ್ತರಿಗೆ ...ಮಾಡುತ್ತಿರುವುದು ಇದೇ ಮೊದಲೇನೂ ಅಲ್ಲ. ಎರಡು

ವರ್ಷದ ಹಿಂದೆ ಅನ್ನ-ನೀರು ಬಿಟ್ಟು ಸಂತ್ರಸ್ತರ ಪರ ಹೋರಾಡುತ್ತೇನೆಂದು ಹೇಳಿದ್ದ ಸ್ವಾಮಿ ಆ ನಂತರ ಕಂಪೆನಿ ಕಳ್ಳರೊಂದಿಗೆ ಶಾಮೀಲಾಗಿ ಹೋರಾಟಗಾರರಿಗೆ ಮೋಸ ಮಾಡಿದ್ದರು. 2009 ಡಿಸೆಂಬರ್ 8ರಂದು ಹೋರಾಟ ನಡೆಯುತ್ತಿದ್ದ ಹೊತ್ತಲ್ಲಿ ಕಂಪೆನಿಯವರ ಕೈಯಲ್ಲಿ ಯಾವ ಲೈಸೆನ್ಸ್-ಅನುಮತಿ-ಎನ್‌ಓಸಿ ಇರಲಿಲ್ಲ. ಆಗ ಪೇಜಾವರರೇ ಪರವಾನಗಿ ತರುವವರೆಗೆ ಭೂಸ್ವಾಧೀನ ಮಾಡಬೇಡಿ ಎಂದು ಹೇಳಿದ್ದರು. ಆದರೆ ಕಂಪೆನಿ ಪೊಲೀಸರನ್ನು ಮತ್ತು ರೌಡಿಗಳನ್ನು ಛೂಬಿಟ್ಟು, ಬಲಾತ್ಕಾರದಿಂದ ಜನರನ್ನು ಒಕ್ಕಲೆಬ್ಬಿಸುತ್ತಿದ್ದಾಗ ಅವರ ರೋದನ ಕೇಳಿಯೂ ಕೇಳದಂತಿ ದ್ದರು!!

ಆವಾಗಲೇ ಸ್ವಾಮಿ ಸ್ಥಿರವಾಗಿ ನಿಂತು ಪ್ರಾಮಾಣಿಕವಾಗಿ ಹೋರಾಟ ಮುಂದುವರೆಸಿದ್ದರೆ ನಾಗಾರ್ಜುನ ಕಂಪೆನಿ ಅಂದೇ ಟೆಂಟ್ ಕಿತ್ತುಕೊಂಡು ಹೋಗುತ್ತಿತ್ತು. ಪಡುಬಿದ್ರಿ ಭಾಗದ ಜನರಿಗೆ ಈ ಗೋಳು ಬರುತ್ತಲೇ ಇರಲಿಲ್ಲ. ಪೇಜಾವರರು ಅನಾಚಾರಿ ಆಚಾರ್ಯನ ಮಾತುಕೇಳಿ ಹೋರಾಟಗಾರರಿಗೆ ಅನ್ಯಾಯ-ವಂಚನೆ ಮಾಡಿದರು. ಪಡಬಿದ್ರಿ-ನಂದಿಕೂರು ನರಕವಾಗಲು ಕಾರಣ ಸ್ವಾಮೀಜಿಯ ಸೋಗಲಾಡಿತನವೇ!!

ಎರಡು ವರ್ಷದ ಹಿಂದೆ ಇದೇ ಪೇಜಾವರರು ಹಾರುಬೂದಿ ಸ್ಥಾವರದ ಬಗೆಗಿನ ತನ್ನ ನಿರ್ಧಾರಕ್ಕೆ ಸಮಯ ಕೇಳಿದ್ದರು. ಎರಡು ವರ್ಷವಾದರೂ ಸ್ಪಷ್ಟ ನಿರ್ಧಾರಕ್ಕೆ ಆತ ಬರದೇ ಜನರಿಗೆ ವಂಚಿಸುತ್ತಲೇ ಬಂದರು. ಈಗ ಮತ್ತದೇ ಹಾಡು ಹೇಳುತ್ತಿದ್ದಾರೆ. ತನಗೆ ನಾಗಾರ್ಜುನ ಪ್ರಾಜೆಕ್ಟ್ ಬಗ್ಗೆ ನಿರ್ಧಾರಕ್ಕೆ ಬರಲು ಸಮಯ ಬೇಕೆನ್ನುತ್ತಿದ್ದಾರೆ. ಎರಡು ವರ್ಷದ ಹಿಂದೆ ನಡೆದ ಸಾಧಕ-ಬಾಧಕ ಸಭೆಯಲ್ಲೂ ಕಂಪೆನಿ ಖೂಳರು ಕಾಗಕ್ಕ-ಗುಬ್ಬಕ್ಕನ ಕತೆ ಹೇಳಿಹೋಗಿದ್ದರು. ಸಿಂಗಾಪುರದ ಪ್ರಧಾನಿ ಮನೆ ಮುಂದೆಯೇ ಇಂಥದೊಂದು ಉಷ್ಣ ವಿದ್ಯುತ್ ಸ್ಥಾವರವಿದೆಯೆಂದು ಮಂತ್ರಿ ಆಚಾರ್ಯ ಭೋಂಗು ಬಿಟ್ಟಿದ್ದರು. ಆಗಲೂ ಸ್ವಾಮಿ ನಿರ್ವಿಕಾರಭಾವದಿಂದ ಸಮಾಧಿ ಸ್ಥಿತಿ ತಲುಪಿದ್ದರು.

ಸ್ವಾಮೀಜಿಯ ಈ ಎಡಬಿಡಂಗಿತನಕ್ಕೆ ಕಾರಣ ಅರ್ಥವಾಗದಂಥದ್ದೇನೂ ಅಲ್ಲ. ನಾಗಾ ರ್ಜುನಾ ಕಂಪೆನಿಯ ಅನಾಚಾರ-ಅಕ್ರಮ -ಅನ್ಯಾಯದ ವಿರುದ್ಧ ಹೋರಾಟಕ್ಕೆ ಸಿದ್ದರಾಗಿದ್ದ ಸ್ವಾಮಿ ಬಣ್ಣಬದಲಿಸಿದ್ದು ಯಾಕೆಂಬುದು ಈಗ ಇಡೀ ಕರಾವಳಿ ಯಲ್ಲಿ ಚರ್ಚೆಯಾಗುತ್ತಿದೆ. ಆಗಿದ್ದು ಇಷ್ಟೇ! ಮಂತ್ರಿ-ನಾಗಾರ್ಜುನ ಕಂಪೆ ನಿಯ ಹಿತರಕ್ಷಕ ಡಾ.ವಿ.ಎಸ್.ಆಚಾರ್ಯ ಪೇಜಾವರರಿಗೆ ಸ್ಥಾವರ ವಿರೋಧಿ ಹೋರಾಟದಲ್ಲಿ ಭಾಗವಹಿಸದಂತೆ ಛೂಮಂತ್ರ ಮಾಡಿದ್ದಾರೆಂಬುದು ಬಹಿ ರಂಗ ರಹಸ್ಯ. ಆಂಧ್ರವಾಳ್ಳುಗಳಿಂದ ಮಠಕ್ಕೆ ಸೂಟ್‌ಕೇಸ್‌ಗಟ್ಟಲೇ ಕಾಣಿಕೆ ಕೊಡಿಸುವ ಭರವಸೆಯೇನಾದರೂ ಸ್ವಾಮಿಗೆ ಮಂತ್ರಿ ಆಚಾರ್ಯ ಕೊಟ್ಟಿದ್ದರಾ?

'ಧರ್ಮೋ ರಕ್ಷತಿಃ ಧರ್ಮ' ಎಂಬುದು ಅಷ್ಟಮಠದ ಬೀಜಮಂತ್ರವಲ್ಲವಾ? ಹೀಗಾಗಿ ಪೇಜಾವರರೇನಾದರೂ ಮಂತ್ರಿ ಮಾತಿಗೆ ಮರುಳಾದರಾ? ಅಥವಾ ತಾನು ಹೋರಾಟಕ್ಕೆ ಇಳಿದರೆ ಬಿಜೆಪಿ ಸರ್ಕಾರಕ್ಕೆ ಇರಿಸುಮುರಿಸಾಗುತ್ತದೆ. ಕೃಷ್ಣಮಠವನ್ನು ತನ್ನ ಜೋಳಿಗೆಗೆ ಹಾಕಿದ ಸಿಎಂ ಯಡ್ಡಿಗೆ ಸಿಟ್ಟು ಬರುತ್ತದೆ ಎಂದೇನಾದರೂ ಪೇಜಾವರರು ಬೇಕಂತಲೇ ವಿಚಾರ ವಿನಿಮಯ ಸಭೆಯಲ್ಲಿ ಗೊಂದಲ-ಗಲಾಟೆ ಏಳುವಂತೆ ಮಾಡಿ ಹೋರಾಟದಿಂದ ಪಲಾಯನ ಮಾಡಿದರಾ? ಈ ಜಿಜ್ಞಾಸೆ ಈಗ ಕರಾವಳಿಯಲ್ಲಿ ನಡೆಯುತ್ತಿದೆ.


ಒಂದಂತೂ ಖಾತ್ರಿ, ವಿಶ್ವಾಸಘಾತುಕ ಪೇಜಾವರರನ್ನು ಉಡುಪಿ-ಮಂಗಳೂರು-ಪಡುಬಿದ್ರಿ-ನಂದಿಕೂರು ಭಾಗದ ಜನ ನಂಬುವ ಸ್ಥಿತಿಯಲ್ಲಿಲ್ಲ. ಹಿಂದೆ ಮಂಗಳೂರಲ್ಲೂ ಸೆಜ್ ವಿರುದ್ಧದ ಹೋರಾಟದ ಹೊತ್ತಲ್ಲೂ ಪೇಜಾವರರು ಹೀಗೆ ಕೈಕೊಟ್ಟಿದ್ದರು. ಈಗ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರ ಪೀಡೆಯ ವಿರುದ್ಧ ಸಿಡಿದೆದ್ದಿರುವ ಸಂತ್ರಸ್ತರ ಹೋರಾಟವನ್ನು ದುರ್ಬಲಗೊಳಿಸಲು ಸಂಚು ಮಾಡುತ್ತಿದ್ದಾರಷ್ಟೇ. ಹಾಗಂತ ನಾಗಾರ್ಜುನ ಹಿಂಸೆಯಿಂದ ಹೈರಾಣಾಗಿರುವ ಜನ ಬಾಯ್ಬಾಯಿ ಬಡಿದುಕೊಳ್ಳುತ್ತಿದ್ದಾರೆ.

ಒಟ್ಟಿನಲ್ಲಿ ದೇಶಭಕ್ತರ ಬಿಜೆಪಿಯ ದಗಲ್ಬಾಜಿ ಮಂತ್ರಿ-ಢೋಂಗಿ ಸ್ವಾಮಿ ಕರಾವಳಿಯನ್ನು ಸುಡುಗಾಡು ಮಾಡುತ್ತಿರುವುದು ಭಯಾನಕವಾಗಿದೆ. ಕೊಡುವಿಗೊಡೆಯ ಪಿಳ್ಳಂಗೋವಿ ಕೃಷ್ಣ ಪೇಜಾವರ ಸ್ವಾಮಿಗೆ ಸದ್ಬುದ್ಧಿ ಕೊಟ್ಯಾನಾ? ಮಂತ್ರಿ ಆಚಾರ್ಯನ ಅನಾಚಾರಕ್ಕೆ ಕಡಿವಾಣ ಹಾಕಿಯಾನಾ?

• ನಹುಶ

ಎಂಜಲೆಲೆ ಪ್ರಿಯರು ನೀಲಗಿರಿ ಮರಕ್ಕೆ ನೇತುಬಿದ್ದರಂತಲ್ಲಾ

ನಮ್ಮ ಹಗ್ಗೋಡಿನ ಎಂಜಲೆಲೆ ಪ್ರಿಯರು ಹಾದಿಬೀದಿಯವರ ಕೈಲೆಲ್ಲಾ ಸಮಾ ಚಚ್ಚಿಸಿಕೊಂಡರೂ ಕಡೆಗೂ ತಮ್ಮ ವಾದಕ್ಕೆ ಜೋತುಬಿದ್ದಿದ್ದಾರಂತಲ್ಲಾ. "ಹರಕೆ ಅಂತ ಸಮಸ್ಯೆಯಲ್ಲ, ಅದು ಸೆಕ್ಯುಲರ್ ಜನಗಳ ಗ್ರಹಿಕೆಯ ಸಮಸ್ಯೆ, ನಮ್ಮಪ್ಪನೂ ಪೂಜೆ ಮಾಡುತ್ತಿದ್ದ, ನನ್ನಜ್ಜಿ ಹರಕೆ ಹೊರುತ್ತಿದ್ದಳು" ಎಂದು ಹೇಳುತ್ತ ಅಷ್ಟು ಆಲದ ಮರಕ್ಕೆ ಜೋತು ಬೀಳುವುದು ಬಿಟ್ಟು, ಬೆಲ್ಜಿಯಂ ಬಾಲ ನೆಟ್ಟ ನೀಲಗಿರಿ ಮರಕ್ಕೆ ನೇತು ಬಿದ್ದಿದ್ದಾರಂತಲ್ಲಾ. ಈ ನಡುವೆ ಕೆಲವು ಸೆಕ್ಯುಲರ್ ಶನಿಗಳು "ಗಿಂಡಿಮಾಣಿಯವರು ಅಜ್ಜಿ ಎಂದಿರುವುದು ನಿಜವಾಗಿಯೂ ಅವರ ಅಜ್ಜಿಯೋ ಇಲ್ಲ ವೈದೇಹಿಯವರೋ" ಎಂದು ಚರ್ಚಿಸುತ್ತಿದ್ದಾರಂತಲ್ಲಾ. ವೈದೇಹಿಯವರ ಲೌಕಿಕ ಸಂಕಟಗಳು ಹಾಗಿರಲಿ; ಕವಿಗೆ ಕಾವ್ಯದ ಸಾಲು ಹೊಳೆದಂತೆ ಆಕೆಗೆ ಎಂದಾದರೂ ಸತ್ಯ ಹೊಳೆಯಬಹುದು. ಆದರೆ ಕಂಡವರ ಮಕ್ಕಳಿಗೆ ಕೈತುಂಬ ಹೊಡೆಯಬೇಕೆಂಬ ಗಾದೆ ಮಾತು ನೆನಪಿಸುವಂತೆ ಧಾರಾಳವಾಗಿ ಗೂಸಕೊಟ್ಟ ಗೂಸಣ್ಣರಿಗೆ ಅಚ್ಚರಿಯಾಗುವಂತೆ, ಅಕ್ಷರ ತಾನು ಹೊಸೆದ ಹಗ್ಗಕ್ಕೆ ತಾನೇ ನೇತುಬೀಳುವುದೇ. ಆದರೂ "ದೇಶಕಾಲದ ಮೌನಿಗಳಿಗೆ ಹೋಲಿಸಿದರೆ ನಮ್ಮ ಅಕ್ಷರನೇ ಪರವಾಗಿಲ್ಲ, ಕಡೆಗೂ ಬಾಯಿಬಿಟ್ಟ" ಎಂದು ಗೂಸಣ್ಣರ ಗುಜುಗುಜು ಜೋರಾಗಿದೆಯಂತಲ್ಲಾ ಥೂತ್ತೇರಿ!



* * * *

ಇಂತೆಲ್ಲಾ ಅನಿವಾರ್ಯ ಘಟನೆಗಳು ಸಂಭವಿಸುತ್ತಿರುವ ಕಾಲದಲ್ಲೇ ನಮ್ಮ ಪ್ರೀತಿಯ ಭಟ್ಟ ಗಜ್ಜಡದ ಗುಡಿಯ ಕರಪತ್ರದಂತಹ ಪತ್ರಿಕೆ ಬಿಟ್ಟು, ಕನ್ನಡಪ್ರಭ ಪತ್ರಿಕೆಗೆ ತಗುಲಿಕೊಂಡು, ಅದಕ್ಕೊಂದು ವಿನೂತನ ರೂಪ ಕೊಡಲೋಸ್ಕರ ಸೈಟಿನ ಸಿಮ್ಮನಿಂದ ತನಗಾಗದವರಿಗೆಲ್ಲಾ ಉತ್ತರಕೊಡಿಸಲು ಮುಖಪುಟವನ್ನೇ ಮೀಸಲಿಟ್ಟಿದ್ದಾನಂತಲ್ಲಾ. ಇದ್ಯಾವುದೂ ಸಾಲದೆಂಬಂತೆ ನಮ್ಮ ಸಂತೆ ಶಿವರದ ಚೆಡ್ಡಿ ಭೈರಣ್ಣನನ್ನು ಬೇಡಿಕೊಂಡು "ನಿಮ್ಮ ವಿಪುಲವಾದ ವಿಪ್ರ ಸಾಹಿತ್ಯದಿಂದ ಹೊರಗುಳಿದ ಇಂದಿನ ಸಂಗತಿಗಳೇನಾದರೂ ಇದ್ದರೆ ಅವನ್ನೂ ಕೆರೆಯಿರಿ" ಎಂದು ಕೇಳಿದನಂತಲ್ಲಾ. ಭಟ್ಟ ಕೇಳಿದ್ದೇ ತಡ, ಭೈರಣ್ಣ ಮಸಿಕುಡಿಕೆಯನ್ನು ಮಗ್ಗುಲಲ್ಲೇ ಮಡಗಿಕೊಂಡು, ಶ್ಯಾನುಭೋಗರು ಖಾತೆ ತಿದ್ದುವ ಶೈಲಿಯಲ್ಲಿ, ಸುರುಹಚ್ಚಿಕೊಂಡೇ ಬಿಟ್ಟರಂತಲ್ಲಾ. ಇದೂ ಸಾಲದೆಂಬಂತೆ, ಲಂಕೇಶರಿಂದ ಈತ ಯಾರಿಗೆ ಬೇಕಾದರೂ ಪ್ರೇಮಪತ್ರ ಬರೆದುಕೊಡಬಲ್ಲ ಎಂಬ ಬಿರುದು ಗಳಿಸಿದ್ದ ಜಯಂತ ಕಾಯ್ಕಿಣಿಯೂ ಭಟ್ಟನ ಪತ್ರಿಕೆಗೆ ಪತ್ರ ಬರೆದುಕೊಡಲಿದ್ದಾರಂತಲ್ಲಾ. ಇದಲ್ಲವೇ ಭಟ್ಟನ ಮಹಿಮೆ ಎಂದು ಭಟ್ಟನ ಬಂಡಾಯ ಬಳಗ ಆಡಿಕೊಳ್ಳುತ್ತಿದೆಯಂತಲ್ಲಾ. ಥೂತ್ತೇರಿ!!

ಥೂತ್ತೇರಿ

ಯಾಹೂ

* * * *


ವಿವಿಯೊಂದು ಚಿಮೂಗೆ ಗೌರವ ಡಾಕ್ಟರೇಟ್ ಕೊಟ್ಟಿದ್ದೇ ಖುಷಿಯಿಂದ ಯಡ್ಡಿ ಸರ್ಕಾರ ನಾರಾಯಣ ಮೂರ್ತಿ ಎಂಬ ಕುಬೇರನಿಂದ ವಿಶ್ವ ಕನ್ನಡ ಮೇಳ ಉದ್ಘಾಟಿಸಲು ಹೊರಟಿದ್ದೆ ತಡ, ಚಿಮೂ ವಿಷಯದಲ್ಲಿ ಚೆಡ್ಡಿಗಳಂತೆ ಒಂದಾಗಿದ್ದ ಸಾಯಿತಿಗಳು ಈಗ ಬಾಯೇ ಬಿಡುತ್ತಿಲ್ಲವಂತಲ್ಲಾ. ಇದನ್ನ ಕಂಡ ನಿಜವಾದ ಕನ್ನಡದ ಮನಸ್ಸುಗಳು "ಅಷ್ಟಕ್ಕೂ ನೀವು ಈ ಸಾಯಿತಿಗಳಿಂದ ಇಂತದ್ದನ್ನೆಲ್ಲಾ ಏಕೆ ನಿರೀಕ್ಷಿಸುತ್ತೀರಿ. ಪಾಪ ಕತೆಪತೆ ಬರದುಕೊಂಡು, ಬರೆದ ತಪ್ಪಿಗೆ ತಾವೇ ಓದಿಕೊಂಡು, ಹೆಂಡತಿ ಮಕ್ಕಳನ್ನ ವಿಭಿನ್ನವಾಗಿ ಪ್ರೀತಿಸುತ್ತಾ ಹೇಗೋ ಹಾಗೆ ಕಾಲಹಾಕುತ್ತಿರುವ ಆ ಕ್ಷಯರೋಗಿಗಳನ್ನು ಎಲ್ಲಾ ಬಲ್ಲ ಎಲ್ಲಪ್ಪರೆಂದು ತಿಳಿಯುವುದೇ ಮೂರ್ಖತನ. ಕರ್ನಾಟಕದ ಹುಲುಮಾನವರಷ್ಟೇ ಗೊಂದಲದಿಂದ ಬದುಕುತ್ತಿರುವ ಅವುಗಳಿಂದ ಸ್ವಾಭಿಮಾನ, ನಿಷ್ಠುರತೆ, ಖಚಿತತೆಯನ್ನು ನಿರೀಕ್ಷಿಸುವುದು ಸಲ್ಲದು. ಸದ್ಯದ ಸಾಹಿತಿಗಳ ಮನಸ್ಥಿತಿಯ ಪ್ರತೀಕದಂತೆ ವರ್ತಿಸುತ್ತಿರುವ ನಲ್ಲೂರು ಪ್ರಸಾದ್ ಸಾಹಿತ್ಯಲೋಕದ ಈಶ್ವರಪ್ಪನಂತೆ ಮಾತಾಡುತ್ತಿದ್ದವನು ಈಗ ಮೌನ ವಹಿಸುವುದು ಸಹಜ. ಜುಜುಬಿ ಡಾಕ್ಟರೇಟ್ ಪರ ವಕಾಲತ್ತು ವಹಿಸಿದ್ದ ಅನಂತಮೂರ್ತಿಯವರು ನಾರಾಯಣ ಮೂರ್ತಿ ವಿಷಯದಲ್ಲಿ ಮೌನ ವಹಿಸಿರುವುದೇಕೆ?" ಎಂದು ಚಿಂತಿಸಿದರಂತಲ್ಲಾ...!!

* * * *

ಬೆಂಗಳೂರಲ್ಲಿ ಸಾಹಿತ್ಯ ಸಮ್ಮೇಳನವಾಯ್ತು, ಬೆಳಗಾಂನಲ್ಲಿ ವಿಶ್ವ ಕನ್ನಡ ಸಮ್ಮೇಳನ... ಹೀಗೆ-ಉತ್ಸವಗಳಲ್ಲಿ ಮುಳುಗಿರುವ ಯಡ್ಡಿಯ ಯಡವಟ್ಟು ಸರ್ಕಾರದ ಭಂಡತನದ ಎದುರು ಏಗಲಾಗದೆ ಕಾಂಗ್ರೆಸ್ಸು ಏದುಸಿರು ಬಿಡುತ್ತಿದೆಯಂತಲ್ಲಾ. ಅತ್ತ ಹರದನಹಳ್ಳಿ ಗೌಡರು, ಪುರಾತನಕಾಲದ ಮಾವನ ಮನೆ ಹುಡುಕಿಕೊಂಡು ಹೋಗಿದ್ದರಂತಲ್ಲಾ. ಗೌಡರ ಮಾವ ದಿಪ್ಪಾರ ಕುಳವಾಗಿದ್ದು, ಜುಜುಬಿ ಡಿಪ್ಲೋಮಾ ಮುಗಿಸಿಕೊಂಡು ಸಬ್ಓವರ್ಸಿಯರ್ ಕೆಲಸಮಾಡುತ್ತಿದ್ದ ದೇವೇಗೌಡರಿಗೆ ಹೆಣ್ಣುಕೊಡಲು ಹಿಂಜರಿದರಂತಲ್ಲಾ. ಆಗ ಮಾವನಿಗೆ ಸೆಡ್ಡು ಹೊಡೆದ ಗೌಡರು ಚೆನ್ನಮ್ಮನ ಕೈಗೆ ಆರೇಳು ಮಕ್ಕಳು ಕೊಟ್ಟು, ಅಸಂಖ್ಯಾತ ಮೊಮ್ಮಕ್ಕಳಿಗೆ ಕಾರಣವಾಗಿ, ಇಂತಹ ಸಾಧನೆ ನೋಡಲು ಹೆಣ್ಣು ಕೊಟ್ಟವನೇ ಇಲ್ಲವೆಂದು ಮರುಗಿ ಕಡೆಗೆ ಅತ್ತೆ ಕಾಲಿಗೆ ಅಡ್ಡಬಿದ್ದರಂತಲ್ಲಾ. ಇತ್ತ ಕುಮಾರಣ್ಣ "ಜೆಡಿಎಸ್‌ನಿಂದ ಯಾವನೋ ಶಾಸಕ ತೊಲಗಿದರೂ ಹೆದರುವುದಿಲ್ಲ, ಹತ್ತದಿನೈದು ಶಾಸಕರನ್ನು ಗೆಲ್ಲಿಸುವ ಶಕ್ತಿ ನಮಗಿದೆ. ಕ್ಯಾಂಡಿಡೇಟ್‌ಗಳು ನಮ್ಮ ಮನೆಯಲ್ಲೇ ಇದ್ದಾರೆ. ಆದರೆ ನಿಖಿಲ್‌ಗೌಡ ಸದ್ಯಕ್ಕಿಲ್ಲ" ಎಂದು ಮಾರ್ಮಿಕವಾಗಿ ನುಡಿದರಂತಲ್ಲಾ, ಥೂತ್ತೇರಿ!!

* * * *

ಮಾನ್ಯ ದೇವೇಗೌಡರು ಲೋಕಸಭೆಯಲ್ಲಿ ಸೂಕ್ತ ಸಮಯ ನೋಡಿ ಎದ್ದು ನಿಂತು "ಕರ್ನಾಟಕದ ಎಡೂರಪ್ಪನ ಕಾರ್ಯವೈಖರಿ ನೋಡಿದರೆ ದುರ್ಯೋಧನನಿಂದ ಇಡೀ ಕುರುವಂಶ ನಾಶವಾದಂತೆ ಬಿಜೆಪಿಗಳು ಅವಸಾನ ಹೊಂದುವುದು ಗ್ಯಾರಂಟಿ" ಎಂದರಂತಲ್ಲಾ. ಇದರಿಂದ ಕುಪಿತಗೊಂಡ ಚೆಡ್ಡಿಗಳು ತಮ್ಮನ್ನ ಕುರುವಂಶಕ್ಕೆ ಹೋಲಿಸಿದ್ದಕ್ಕೆ ಶಾನೆ ಸಿಟ್ಟಾಗಿ ಎಗರಾಡುತ್ತಿದ್ದಾಗಲೇ ತಿಡಿಗೇಡಿ ವಿಶ್ವನಾಥ್ "ದೇವೇಗೌಡರ ಅನುಭವದ ಮಾತನ್ನ ಗೌರವಿಸಬೇಕು. ಅವರ ದೆಸೆಯಿಂದ ಇಡೀ ಜನತಾದಳವೇ ನಾಶವಾಗಿ ಈಗ ಕೇವಲ ಅವರ ಕುಟುಂಬ ಮಾತ್ರ ಆ ಪಾರ್ಟಿಯಲ್ಲಿ ಉಳಿದಿದೆ. ಮುಂದೆ ಎಡೂರಪ್ಪನ ಬಿಜೆಪಿಗೂ ಇದೇ ಗತಿಯಾಗಬಹುದು" ಎಂದರಂತಲ್ಲಾ ಥೂತ್ತೇರಿ!!! •



ದರಿದ್ರ ಸರ್ಕಾರ ದಗಲ್ಬಾಜಿ ರವಿಶಂಕರ!

ಭ್ರಷ್ಟಾಚಾರ-ಭಂಡತನಗಳ ಒಟ್ಟು ಮೊತ್ತದಂತಿರುವ ಬಿಜೆಪಿ ಸರ್ಕಾರ ದಿನಕ್ಕೊಂದೊಂದು ಅನಾಹುತ ಸೃಷ್ಟಿಸುತ್ತಲೇ ಇದೆ. ಮುಖ್ಯಮಂತ್ರಿ ಯಡಿಯೂರಪ್ಪ ಪಕ್ಕಾ ಅವಿವೇಕಿಯೆಂಬುದು ಅಡಿಗಡಿಗೆ ಸಾಬೀತಾಗುತ್ತಲೂ ಇದೆ. ಆದರೆ ಇದುವರೆಗೆ ವಿಧಾನ ಸೌಧ, ಸರ್ಕಾರಿ ಕಚೇರಿಗಳು ಹಾಗೂ ಸರ್ಕಾರಿ ಭೂಮಿಯ ಸುತ್ತ ಸುತ್ತುತ್ತಿದ್ದ ಈ ಸರ್ಕಾರದ ಭಂಡತನಗಳೀಗ ಶಿಕ್ಷಣ ರಂಗಕ್ಕೂ ಅಟಕಾಯಿಸಿಕೊಂಡಿವೆ. ಸರ್ಕಾರದ ಕಡೆಯಿಂದ ಇತ್ತೀಚೆಗೆ ಹೊರಬಿದ್ದ ಆದೇಶವೊಂದು ಅದಕ್ಕೆ ಸಾಕ್ಷಿಯಂತಿದೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಯಡ್ಡಿ ಸರ್ಕಾರಿ ಬೊಕ್ಕಸದಿಂದ ಹಣ ಮೊಗೆದು ಕೊಟ್ಟ ಕೋಡಂಗಿಯಾದರೆ, ಸ್ವಯಂಘೋಷಿತ ಆಧ್ಯಾತ್ಮ ಪಂಡಿತ ರವಿಶಂಕರ ಗುರೂಜಿ ಕೈಯೊಡ್ಡಿ ತಿಜೋರಿ ತುಂಬಿಸಿಕೊಂಡ ಭಟ್ಟಂಗಿ!

ಈ ರೀತಿಯ ಪಕ್ಕಾ ದರೋಡೆಗೆ ರಾಜ್ಯ ಸರ್ಕಾರಿ ಕಾಲೇಜುಗಳ ಎರಡನೇ ವರ್ಷದ ಪದವಿ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಅದಕ್ಕೆ 'ಮಾನವತೆ' ಅಂತ ಹೆಸರಿಡಲಾಗಿದೆ. ಫೆಬ್ರವರಿ ಎರಡನೇ ತಾರೀಕಿನಂದೇ ಕಾಲೇಜು ಶಿಕ್ಷಣ ಆಯುಕ್ತ ತುಷಾರ್ ಗಿರಿನಾಥ್ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೂ ಈ ಬಗ್ಗೆ ಸುತ್ತೋಲೆ ಹೊರಡಿಸಿದ್ದಾರೆ. ಈ ಬಗ್ಗೆ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು WAYE ಎಂಬ ಸಂಸ್ಥೆ ವಹಿಸಿಕೊಂಡಿದೆ.



ಈ ಶೈಕ್ಷಣಿಕ ವರ್ಷದಿಂದ ಶಿಕ್ಷಣದ ಸಮಗ್ರ ಗುಣಮಟ್ಟ ಹೆಚ್ಚಿಸುವುದು, ಮೌಲಿಕ ಶಿಕ್ಷಣ ಕಲ್ಪಿಸುವ ಸಲುವಾಗಿ ಈ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಪೌಢಶಿಕ್ಷಣ ಇಲಾಖೆ ಹೇಳಿಕೊಂಡಿದೆ. ಈ ಕಾರ್ಯಕ್ರಮದಡಿಯಲ್ಲಿ ಒಂದು ವಾರಗಳ ಕಾಲ ನಾಲ್ಕು ಗಂಟೆ ಯೋಗ, ಪ್ರಾಣಾಯಾಮಗಳನ್ನು ಕಲಿಸಿಕೊಡಲಾಗುತ್ತದೆ. ಸರಿ, ಯೋಗ ಕಲಿಸುವುದರಿಂದ ಅಪಾಯವೇನಿಲ್ಲ, ಆದರೆ ಅದರಿಂದಲೇ ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚುತ್ತದೆ, ಮಾನವತೆ ಮೈಗೂಡುತ್ತದೆಂಬುದೆಲ್ಲಾ ಪಕ್ಕಾ ಉತ್ಪ್ರೇಕ್ಷೆ. ಅಷ್ಟಕ್ಕೂ ಈ ಕಾರ್ಯಕ್ರಮವನ್ನು ಉಚಿತವಾಗಿ ನಡೆಸಿದ್ದರೆ ತಕರಾರುಗಳಿರುತ್ತಿರಲಿಲ್ಲ. ಆದರಿದು ಹಣ ದೋಚುವ ದಂಧೆಯ ಎಲ್ಲಾ ಗುಣಗಳನ್ನೂ ಹೊಂದಿದೆ.

ಈ 'ಮಾನವತೆ' ಕಾರ್ಯಕ್ರಮಕ್ಕೆ ಇಡೀ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ದ್ವಿತೀಯ ಪದವಿ ವಿದ್ಯಾರ್ಥಿಗಳನ್ನು ಆಯ್ದುಕೊಳ್ಳಲಾಗಿದೆಯಲ್ಲಾ? ಇದಕ್ಕೆ ಒಳಪಡುವ ವಿದ್ಯಾರ್ಥಿಗಳ ಸಂಖ್ಯೆ ಅಖಂಡ ನಲ್ವತ್ತು ಸಾವಿರ! ಜೊತೆಗೆ ಎಲ್ಲಾ ವಿದ್ಯಾರ್ಥಿಗಳೂ ತಲಾ 600 ರೂ.ಗಳನ್ನು 6 ದಿನದ ಯೋಗದ ಕಲಿಕೆಗೆ ಪಾವತಿಸಬೇಕಾಗುತ್ತದೆ. ಅಂದರೆ ಸುಮಾರು ಎರಡೂವರೆ ಲಕ್ಷ ರೂಪಾಯಿ WAYE ಸಂಸ್ಥೆಯ ಪಾಲಾಗಿದೆ.

ಇದರ ರೂಪುರೇಷೆಗಳನ್ನು ಗಮನಿಸಿದರೆ ಇದೊಂದು ಬಲವಂತದ ಹೇರಿಕೆಯೆಂಬುದು ಸ್ಪಷ್ಟವಾಗುತ್ತದೆ. ಯಾಕೆಂದರೆ ಯಾವೊಬ್ಬ ವಿದ್ಯಾರ್ಥಿಯೂ ಯೋಗ ತರಬೇತಿ ತಪ್ಪಿಸಿಕೊಳ್ಳುವಂತಿಲ್ಲ. ಇದರಲ್ಲಿ ಯೋಗ ಮಾತ್ರವಲ್ಲದೇ ಮಂತ್ರ-ತಂತ್ರ ಅಂತೆಲ್ಲವೂ ಇವೆ. ಇದು ಅನ್ಯಧರ್ಮದ ವಿದ್ಯಾರ್ಥಿಗಳಿಗೆ ಸಹಜವಾಗಿಯೇ ಇರಿಸುಮುರಿಸು ತರಿಸುತ್ತದೆ. ಇದಲ್ಲದೆ ಪ್ರತಿ ಕಾಲೇಜಿನ ಇಬ್ಬರು ಉಪನ್ಯಾಸಕರು ಈ ಕಾರ್ಯಕ್ರಮದ ಕೋ-ಆರ್ಡಿನೇಟರ್ ಆಗಿ ದುಡಿಯಲೇ ಬೇಕಿದೆ.

ಈ ಕಾರ್ಯಕ್ರಮದ ವಿರುದ್ಧ ಬಹುತೇಕ ಪ್ರಾಧ್ಯಾಪಕರು, ವಿದ್ಯಾರ್ಥಿಗಳಿಗೆ ಅಸಹನೆಯಿದ್ದರೂ ಅವುಡುಗಚ್ಚಿ ಸಹಿಸಿಕೊಳ್ಳುತ್ತಿದ್ದಾರೆ. ಅಷ್ಟಕ್ಕೂ ಈ ಕಾರ್ಯಕ್ರಮದ ಅಗತ್ಯ ಖಂಡಿತಾ ಇಲ್ಲ, ಯಾಕೆಂದರೆ ವಿದ್ಯಾರ್ಥಿಗಳಲ್ಲಿ ಮಾನವೀಯತೆ ಬೆಳೆಸಿ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವ ಕೆಲಸವನ್ನು ಪ್ರತಿಯೊಬ್ಬ ಉಪನ್ಯಾಸಕರೂ ಮಾಡುತ್ತಿದ್ದಾರೆ. ಇದು ಬರೀ ಯೋಗ ಕಲಿಸುವ ಕಾರ್ಯಕ್ರಮವೆಂದುಕೊಂಡರೂ ಕೇವಲ 6 ದಿನಗಳಲ್ಲಿ ಏನನ್ನೂ ಕಲಿಸಲಾಗುವುದಿಲ್ಲ. ಆದುದರಿಂದಲೇ ಇದು ಶಿಕ್ಷಣರಂಗದಲ್ಲಿ ಏನೋ ಕ್ರಾಂತಿ ನಡೆಯುತ್ತಿದೆಯೆಂಬ ಭ್ರಮೆ ಭಿತ್ತಿ ಕಾಸು ಹೊಡೆಯುವ ತಂತ್ರವೆಂಬ ಆರೋಪಗಳು ಕೇಳಿಬರುತ್ತಿವೆ.

ಇಂಥಾ 'ಮಾನವತೆ' ಕಾರ್ಯಕ್ರಮ ಇದೀಗಲೇ ಬೆಂಗಳೂರಿನ ಮಹಾರಾಣಿ ಕಾಲೇಜು ಮತ್ತು ರಾಮನಗರದಲ್ಲಿ ನಡೆದಿದೆ. 'ಕಾರ್ಯಕ್ರಮ ಸಿಕ್ಕಾಪಟ್ಟೆ ಯಶಸ್ವಿಯಾಯಿತು' ಅಂತೆಲ್ಲ ಪತ್ರಿಕೆಗಳಲ್ಲಿ ಬರೆಸಿಕೊಳ್ಳಾಗುತ್ತಿದೆ. ಹಾಗಾದರೆ ಈ ಕಾರ್ಯಕ್ರಮದಲ್ಲಿ ಏನು ಪವಾಡ ಅಡಗಿದೆ ಅಂತ ನೋಡಿದರೆ, ವಿದ್ಯಾರ್ಥಿಗಳೆದುರಿಗೊಂದು ಟಿವಿ ಇಟ್ಟು ನಿಮಿಷಗಟ್ಟಲೇ ಭಟ್ಟಂಗಿ ಗುರು ರವಿಶಂಕರನ 'ಸಾಧನೆ'ಗಳನ್ನು ತೋರಿಸಲಾಗುತ್ತಿದೆ. ಆರ್ಟ್ ಆಫ್ ಲಿವಿಂಗ್‌ನ ಸಿಲ್ವರ್ ಜ್ಯೂಬಿಲಿ ಕ್ಲಿಪಿಂಗ್‌ಗಳನ್ನು ಪದೇಪದೇ ತೋರಿಸಿ ಭೂಗಳ್ಳ ರವಿಶಂಕರನನ್ನ ಮಾನವತೆ ಸಾರುವ ವಿಶ್ವ ಆಧ್ಯಾತ್ಮ ಗುರು ಅಂತೆಲ್ಲಾ ಬಿಂಬಿಸಲಾಗುತ್ತಿದೆ.


ಎಲ್ಲಿಯ ಮಾನವತೆ, ಎಲ್ಲಿಯ ರವಿಶಂಕರ್ ಗುರೂಜಿ ಮತ್ತು WAYE ಸಂಸ್ಥೆ... ಎತ್ತಣಿಂದೆತ್ತಣ ಸಂಬಂಧವಯ್ಯ ಅಂತ ಎಂಥವರಿಗಾದರೂ ಆಯೋಮಯ ಸ್ಥಿತಿ ಎದುರಾಗುತ್ತದೆ. ಈ ಬಗ್ಗೆ ತಲಾಶಿಗಿಳಿದರೆ, ಇಡೀ ಕಾರ್ಯಕ್ರಮದ ಅಸಲಿಯತ್ತು ಬಿಚ್ಚಿಕೊಳ್ಳುತ್ತದೆ. 'ಮಾನವತೆ' ಕಾರ್ಯಕ್ರಮ ವಹಿಸಿಕೊಂಡಿರುವ World Aliance for Youth Empowerment (WAYE) ಸಂಸ್ಥೆ ರವಿಶಂಕರನ ಆರ್ಟ್ ಆಫ್ ಲಿವಿಂಗ್ ಕೂಸು. ಬೃಹನ್ನಳೆಯರಂತೆ ಕಾಣುವ ಖುರ್ಶಿದ್ ಬಾಟ್ಲಿವಾಲಾ ಹಾಗೂ ದಿನೇಶ್ ಘೋಡ್ಕೆ WAYE ಸಂಸ್ಥೆಯ ಡೈರೆಕ್ಟರ್‌ಗಳು. ಈ ಇಬ್ಬರೂ ಆರ್ಟ್ ಆಫ್ ಲಿವಿಂಗ್‌ನಲ್ಲಿ ತರಬೇತಿದಾರರಾಗಿದ್ದಾರೆ. ಹೈಟೆಕ್ ದರೋಡೆಗೆಂದೇ ಹುಟ್ಟಿಕೊಂಡಂತಿರುವ WAYE ಸಂಸ್ಥೆಯನ್ನು ಮುನ್ನಡೆಸುತ್ತಿರುವ ಈ ಇಬ್ಬರೂ ಇದೀಗಲೇ ಗುಜರಾತ್ ಮೊದಲಾದ ರಾಜ್ಯಗಳಲ್ಲಿ ಇದೇ ರೀತಿಯ ಕಣ್ಕಟ್ಟು ನಡೆಸಿ ಸರ್ಕಾರದ ಹಣ ಬಾಚಿಕೊಂಡಿದ್ದಾರೆ. ಕರ್ನಾಟಕದ ಮಟ್ಟಿಗೆ 'ಮಾನವತೆ' ಪ್ರೋಗ್ರಾಮಿಗೆಂದು ವಿದ್ಯಾರ್ಥಿಗಳಿಂದಲೇ ಎರಡೂವರೆ ಲಕ್ಷ ದೋಚಲಾಗಿದೆಯಲ್ಲಾ? ಆದರೆ ಹೆಚ್ಚುಕಡಿಮೆ 3 ಕೋಟಿಯಷ್ಟು ಹಣ WAYE ಸಂಸ್ಥೆಯ ತಿಜೋರಿ ಸೇರಿದೆಯೆಂಬ ಗುಮಾನಿಗಳಿವೆ.

ಅಲ್ಲಿಗೆ ಇದು ಕಳ್ಳ ಗುರು ರವಿಶಂಕರನ ಎತ್ತುವಳಿ ಸ್ಕೀಮೆಂಬುದು ಸ್ಪಷ್ಟವಾಗುತ್ತದೆ. ಅಷ್ಟಕ್ಕೂ 'ಮಾನವತೆ' ಎಂಬ ಟಾಪಿಕ್ಕು ರವಿಶಂಕರನ ವ್ಯಕ್ತಿತ್ವಕ್ಕೆ ವಿರುದ್ಧವಾದುದು. ಇಂತಹದೊಂದು ಟಾಪಿಕ್ಕನಡಿ ತಲೆಕೊರೆಸಿಕೊಳ್ಳುವಷ್ಟು ರಾಜ್ಯದ ಯಾವ ವಿದ್ಯಾರ್ಥಿಗಳೂ ಬರಗೆಟ್ಟಿಲ್ಲ. ರವಿಶಂಕರನಿಗೆ ಮತ್ತವನ ಭೂಗಳ್ಳ ಪಡೆಗೆ ತುರ್ತಾಗಿ 'ಮಾನವೀಯತೆ'ಯ ಬಗ್ಗೆ ತಿಳಿ ಹೇಳುವ ಅಗತ್ಯವಿದೆಯಷ್ಟೇ.

ರವಿಶಂಕರ ಆಧ್ಯಾತ್ಮದ ಹೆಸರಲ್ಲಿ ಜನರನ್ನ ಯಾಮಾರಿಸುತ್ತಾ ಬಂದಿರುವ ಪಕ್ಕಾ ದಗಲ್ಬಾಜಿ. ಆದರೆ ಈ ಸರ್ಕಾರಕ್ಕೇನಾಗಿದೆ? ಆರೋಗ್ಯ ಇಲಾಖೆ, ಪ್ರಾಥಮಿಕ ಶಾಲೆಗಳಲ್ಲೆಲ್ಲಾ ಇಂಥ ತಲೆಕೆಟ್ಟ ಕಾರ್ಯಕ್ರಮಗಳನ್ನು ಒಂದರಹಿಂದೊಂದರಂತೆ ನಡೆಸುತ್ತಾ ಬರಲಾಗುತ್ತಿದೆ. ಇದರಿಂದ ನಿಜಕ್ಕೂ ಸರ್ಕಾರಿ ಅಧಿಕಾರಿಗಳು, ವಹಿಸಿಕೊಂಡ ಸಂಸ್ಥೆಗಳ ಹೊರತಾಗಿ ಬೇರ್‍ಯಾವ ಉಪಯೋಗವೂ ಆಗಿಲ್ಲ.

ಯಡಿಯೂರಪ್ಪನಿಗೆ ರವಿಶಂಕರನಂಥ ಖದೀಮರನ್ನ ಮೆರೆಸುವ ಉದ್ದೇಶವಿದ್ದರೆ ಅದಕ್ಕೆ ತನ್ನ ಸ್ವಂತದ ಕಾಸು ಖರ್ಚು ಮಾಡಲಿ. ಅದು ಬಿಟ್ಟು ತನ್ನ ತೆವಲಿಗೆ ಸರ್ಕಾರದ ಬೊಕ್ಕಸ, ಶೈಕ್ಷಣಿಕ ಧರ್ಮ ಹಾಗೂ ಸಮಯ ಹಾಳು ಮಾಡುವುದು ಮುಖ್ಯಮಂತ್ರಿ ಸ್ಥಾನಕ್ಕೆ ತಕ್ಕುದಾದ ನಡವಳಿಕೆಯಲ್ಲ. ಅಷ್ಟಕ್ಕೂ ಸರ್ಕಾರದ ಬೊಕ್ಕಸ ಯಡಿಯೂರಪ್ಪನ ಪೂರ್ವಜರ ಉಂಬಳಿಯಲ್ಲ! ●

BBMP ನೆರೆಯ ನೆಪದಲ್ಲಿ ಭರ್ತಿ ಉಂಡ ಉಮೇಶ್ ಶೆಟ್ಟಿ!



ಉತ್ತರ ಕರ್ನಾಟಕದ ಜನರ ಬದುಕು ನೆರೆಗೆ ಸಿಕ್ಕಿ ಬರ್ಬಾದಾದರೂ ಪಾಪಿ ಸರ್ಕಾರ ಏನೂ ಆಗಿಲ್ಲವೆಂಬಂತೆ ತೆಪ್ಪಗಿದೆ. ಆ ಜನರ ಯಾತನೆಗಳು ಕಣ್ಣೆದುರಿಗಿದ್ದರೂ ಕನಿಷ್ಠ ಸೂರನ್ನಾದರೂ ಕಲ್ಪಿಸುವಂಥ ಕೆಲಸ ಮಾಡಲೂ ಈ ಸರ್ಕಾರಕ್ಕೆ ಯೋಗ್ಯತೆಯಿಲ್ಲ. ಆದರೆ, ಇದೇ ಬಿಜೆಪಿ ಪಕ್ಷದಿಂದ ನಾಗರಬಾವಿಯಲ್ಲಿ ಗೆದ್ದು ಕಾರ್ಪೊರೇಟರನಾದ ಉಮೇಶ್ ಶೆಟ್ಟಿ ಕೊಂಚ ಡಿಫರೆಂಟ್. ಈತ ತನ್ನ ವ್ಯಾಪ್ತಿಯಲ್ಲಿ ಸಣ್ಣಗೆ ಹನಿದ ಮಳೆಯಿಂದಲೇ ಪ್ರವಾಹವೆಬ್ಬಿಸಿ, ಜನರ ಬದುಕನ್ನು ಸುಳ್ಳೇ ಕಂಗಾಲಾಗಿಸಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಲಕ್ಷಾಂತರ ರೂಪಾಯಿ ಪರಿಹಾರ ಪಡೆದಿದ್ದಾನೆ. ಅದನ್ನೆಲ್ಲ ನಕಲಿ ಸಹಿಗಳ ಮೂಲಕ ತಾನೇ ನುಂಗಿ ನೊಣೆದಿದ್ದಾನೆ!

ಬಹುಶಃ ಚುನಾವಣಾ ಆಯ್ಕೆಯ ಸಂದರ್ಭದಲ್ಲಿ ಎಡವಿದರೆ ಏನಾಗುತ್ತದೆಂಬುದು ನಾಗರಬಾವಿಯ ವಾರ್ಡ್ ನಂ. 128 ರ ಜನರಿಗೀಗ ಸರಿಯಾಗಿ ಅರ್ಥವಾಗಿರಬಹುದು. ಪಕ್ಕಾ ಪುಢಾರಿಯಾಗಿ ಅಂಡಲೆಯುತ್ತಿದ್ದ ಉಮೇಶ್ ಶೆಟ್ಟಿಗೆ ಬಿಜೆಪಿಯಿಂದ ಟಿಕೆಟ್ ಸಿಕ್ಕು ಕಾರ್ಪೊರೇಟರ್ ಅಂತ ಆಯ್ಕೆಯೂ ಆದ. ಹಿಂದಿನ ಪುಂಡಾಟ ಏನೇ ಇರಲಿ, ನಂಬಿಕೆಯಿಟ್ಟು ಗೆಲ್ಲಿಸಿದ ಜನರಿಗೆ ಮೋಸವಾಗದಂತೆ ಮುಂದುವರಿದಿದ್ದರೆ ಈ ಆಸಾಮಿಯನ್ನು ಸ್ವಲ್ಪವಾದರೂ ಒಪ್ಪಿಕೊಳ್ಳಬಹುದಿತ್ತು. ಆದರೀತ ಮಾಡಿದ್ದು ಗೆಲ್ಲಿಸಿದ ಜನರಿಗೆ ಸಾಮೂಹಿಕ ನಾಮ ತೀಡುವ ಕೆಲಸ!

ಉಮೇಶ್ ಶೆಟ್ಟಿ ಇಂತಹುದೊಂದು ಸಂಚು ಹೆಣೆದದ್ದು ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ. ಬಿಬಿಎಂಪಿಯ ತುಂಬಾ ಶೆಟ್ಟಿಯಂಥ ಗಲೀಜುಗಳೇ ತುಂಬಿಕೊಂಡಿರುವುದರಿಂದ ಬೆಂಗಳೂರಿನ ಒಳಚರಂಡಿ ವ್ಯವಸ್ಥೆ ಸಂಪೂರ್ಣ ಹಾಳಾಗಿರುವುದು ಕಣ್ಣಾಮುಂದಿನ ಸತ್ಯ. ಇದರಿಂದಾಗಿ ಸಣ್ಣದೊಂದು ಮಳೆ ಹನಿದರೂ ಸಾಕು ಹಲವಾರು ಮನೆಗಳು ಜಲಾವೃತವಾಗುತ್ತವೆ. ಮಳೆ ಬಿದ್ದಾಗಲೆಲ್ಲಾ ಇದೇ ಪರಿಸ್ಥಿತಿಯಿರುವುದರಿಂದ ಅದಕ್ಕೆ ಶಾಶ್ವತ ಪರಿಹಾರ ಹುಡುಕಬೇಕೇ ಹೊರತು ಪರಿಹಾರ ವಿತರಣೆಯನ್ನಲ್ಲ. ಆದರೆ ಶೆಟ್ಟಿಯ ತಲೆ ಇಂಥ ಆಲೋಚನೆಗಳಿಗೆಲ್ಲಾ ಆಸ್ಪದ ಕೊಡುವುದಿಲ್ಲ. ಆದುದರಿಂದಲೇ ಪಕ್ಕಾ ವಸೂಲಿಯ ಸ್ಕೆಚ್ ಹಾಕಿದ.

ನಾಗರಬಾವಿ ವ್ಯಾಪ್ತಿಯಲ್ಲಿ ಮಳೆ ಬಿದ್ದಿದ್ದು ಸೆಪ್ಟೆಂಬರ್ 24 ರ ರಾತ್ರಿ. ಉಮೇಶ್ ಶೆಟ್ಟಿ ಡೀಲುಗಳಲ್ಲೇ ಬ್ಯುಸಿಯಾಗಿರುವ ಪರಿಣಾಮ ಚರಂಡಿ ವ್ಯವಸ್ಥೆಯಿಲ್ಲದೆ ಕೆಲ ಮನೆಗಳಿಗೆ ನೀರು ನುಗ್ಗಿತ್ತು. ಆದರೆ ಮಹಾನ್ ನೇತಾರನಂತೆ ಪೋಜು ಕೊಡಲು ಶುರುವಿಟ್ಟ ಶೆಟ್ಟಿ ಅದೇ ತಿಂಗಳ 24 ನೇ ತಾರೀಖಿನಂದು ನೆರೆ ಪರಿಹಾರ ನಿಧಿಯಿಂದ ಹಣ ಕೊಡಲು ಕೋರಿ ದಕ್ಷಿಣ ವಲಯ ಅಪರ ಆಯುಕ್ತರಿಗೊಂದು ಅರ್ಜಿ ಗುಜರಾಯಿಸಿದ. ಅರುಂಧತಿ ನಗರದ ಕೊಳಚೆ ಪ್ರದೇಶದ ಮನೆಗಳು ಸಿದ್ದಗಂಗಾ ಶಾಲೆಯ ಹಿಂಭಾಗ, ಗಂಗೊಂಡನಹಳ್ಳಿ ಸ್ಲಂ ಮತ್ತಿತರೆ ಭಾಗಗಳ ಮನೆಗಳಿಗೆ ನೆರೆ ನುಗ್ಗಿ ಅಪಾರ ಹಾನಿಯಾಗಿದೆಯಂತೆಲ್ಲಾ ಪಟ್ಟಿಯನ್ನೂ ರವಾನಿಸಿದ.

ಇದನ್ನು ಪರಿಶೀಲಿಸಿದ ಅಪರ ಆಯುಕ್ತರು ಹಾನಿಯ ಸತ್ಯಾಸತ್ಯತೆ ಅರಿಯಲು ಸ್ಥಳ ಪರಿಶೀಲನೆ ನಡೆಸುವಂತೆ ಕಂದಾಯ ಪರಿವೀಕ್ಷಕ ರಾಮೇಗೌಡರಿಗೆ ಆದೇಶಿಸಿದರು. ತದನಂತರ ರಾಮೇಗೌಡ ಗೋವಿಂದರಾಜನಗರ ಕ್ಷೇತ್ರಾದ್ಯಂತ ಪರಿಶೀಲನೆ ನಡೆಸಿ ಆದ ಹಾನಿಯ ಬಗ್ಗೆ ವರದಿ ಒಪ್ಪಿಸಿದರು. ರಾಮೇಗೌಡರನ್ನು ಕಳ್ಳ ಕಾರ್ಪೊರೇಟರ್ ಉಮೇಶ್ ಶೆಟ್ಟಿ ಪಳಗಿಸಿಕೊಂಡಿದ್ದರ ಪರಿಣಾಮವೆಂಬಂತೆ 'ಭಾರೀ ಹಾನಿ' ಎಂಬರ್ಥದಲ್ಲೇ ವರದಿ ಗೀಚಿದ್ದರು. ಇದರನ್ವಯ 24 ಲಕ್ಷದಷ್ಟು ಬೃಹತ್ ಮೊತ್ತದ ಪರಿಹಾರ ಹಣ ಬಿಡುಗಡೆಗೆ ರೆಡಿಯಾಯ್ತು.

ಆದರಿದು ಭಾರೀ ವಂಚನೆಯೆಂಬುದು ಫಲಾನುಭವಿಗಳ ಪಟ್ಟಿ ಮತ್ತು ಖುದ್ದು ವಾರ್ಡ್ ನಂ. 128 ರ ನಾಗರಿಕರನ್ನು ವಿಚಾರಿಸಿದಾಗ ಸ್ಪಷ್ಟವಾಗುತ್ತದೆ. ಉಮೇಶ್ ಶೆಟ್ಟಿ ಒಟ್ಟು 13 ಪ್ರದೇಶಗಳ 26 ಮಂದಿ ಫಲಾನುಭವಿಗಳ ಪಟ್ಟಿ ತಯಾರಿಸಿ ಅದರೆದುರು ಸಹಿ ಮಾಡಿಸಿಕೊಂಡಿದ್ದಾನೆ. ಇದು ಅಪರ ಆಯುಕ್ತರಿಗೆ ತಲುಪಿ ಹಣವೂ ಬಿಡುಗಡೆಯಾಗಿದೆ. ಆದರೆ ಬಹುತೇಕರಿಗೆ ಪರಿಹಾರ ಹಣ ತಲುಪೇ ಇಲ್ಲ!

ಯಾಕೆಂದರೆ....... ಉಮೇಶ್ ಶೆಟ್ಟಿ ತಯಾರಿಸಿದ್ದೇ ಬೋಗಸ್ ಪಟ್ಟಿ. ಅದರಲ್ಲಿರುವ ಹೆಸರು, ವಿಳಾಸ ಬೋಗಸ್ ಅಲ್ಲ. ಆದರೆ ಅವರ್‍ಯಾರೂ ಪರಿಹಾರ ಹಣಕ್ಕಾಗಿ ಬೇಡಿಕೆ ಇಟ್ಟಿರಲೂ ಇಲ್ಲ, ಸಹಿ ಹಾಕಿರಲೂ ಇಲ್ಲ. ಈತ ಪರಿಹಾರ ಫಲಾನುಭವಿಗಳ ಪಟ್ಟಿಯಲ್ಲಿ ನಮೂದಿಸಿದ ಹೆಸರು ವಿಳಾಸ ಹುಡುಕಿಕೊಂಡು ಹೊರಟರೆ ಕೆಲವು ಎರಡನೇ ಮಹಡಿ, ಮೂರನೇ ಮಹಡಿಗಳಿಗೆ ಕರಕೊಂಡು ಹೋಗುತ್ತವೆ! ಮತ್ತೆ ಕೆಲ ವಿಳಾಸಗಳ ಮಂದಿ ಮಳೆಯಿಂದ ಏನೇನೂ ತೊಂದರೆ ಅನುಭವಿಸಿದರು.

ಆದರೆ, ನೆರೆ ಪರಿಹಾರ ನಿಧಿಯಿಂದ ಬಿಡುಗಡೆಯಾಗಿದೆಯಲ್ಲಾ ಅಖಂಡ ಇಪ್ಪತ್ನಾಲ್ಕು ಲಕ್ಷ? ಅದೆಲ್ಲ ಖಾಲಿಯಾಗಿದೆ. ಇಷ್ಟನ್ನೂ ಉಮೇಶ್ ಶೆಟ್ಟಿಯೇ ತನ್ನ ತಿಜೋರಿಗೆ ತುಂಬಿಸಿಕೊಂಡಿದ್ದಾನೆ. ಇತ್ತೀಚೆಗೆ ಈ ವಂಚನೆಯ ಸುಳಿವು ಹಿಡಿದು ಕೆಲ ಮಂದಿ ನಾಗರಿಕರು ಉಮೇಶ್ ಶೆಟ್ಟಿ ಹಾಗೂ ಕಂದಾಯ ಇಲಾಖೆ ಪರಿವೀಕ್ಷಕ ರಾಮೇಗೌಡರ ವಿರುದ್ಧ ಪ್ರತಿಭಟಿಸಿದ್ದರು.

ದುರಂತವೆಂದರೆ ಬಿಬಿಎಂಪಿಯ ಮೇಯರ್ ನಟರಾಜ್ ಆಗಲಿ, ಇತರೇ ಅಧಿಕಾರಿಗಳಾಗಲಿ ಈ ಬಗ್ಗೆ ತಲೆ ಕೆಡಿಸಿಕೊಂಡಂತಿಲ್ಲ.

ಇದು ಸಣ್ಣ ಪ್ರಮಾಣದ ಅವ್ಯವಹಾರವಲ್ಲ. ಇದರಲ್ಲಿ ಕಂದಾಯ ಇಲಾಖೆ ಪರಿವೀಕ್ಷಕ ರಾಮೇಗೌಡರೂ ಶಾಮೀಲಾಗಿರುವ ಲಕ್ಷಣಗಳು ಢಾಳಾಗಿವೆ. ಈ ವಾರ್ಡ್‌ನಲ್ಲಿ ಸ್ಲಂ ಏರಿಯಾಗಳು ಅಧಿಕವಿದ್ದರೂ, ಚಿಕ್ಕಪುಟ್ಟ ಮಳೆಗೂ ಜೋಪಡಿಗಳು ಕೊಚ್ಚಿ ಹೋಗಿ ಜನರು ಕಂಗಾಲಾಗಿದ್ದರೂ ಉಮೇಶ್ ಶೆಟ್ಟಿ ಅವರ ಹೆಸರಲ್ಲೇ ಹಣ ನುಂಗುತ್ತಾನೆಂದರೆ ಏನನ್ನಬೇಕು? ●


ಉಮಾ ಎಂಬುದು ಹೊಸ ಬ್ಲೇಡು ಬೋಳಿಸಿಕೊಂಡರೆ ಗತಿಗೇಡು



ವಿನಿವಿಂಕ್ ಶಾಸ್ತ್ರಿ ಅಕ್ಷಯ ಫೌಂಡೇಷನ್, ಅನಿತಾ ಡಬ್ಲಿಂಗ್ ರಾಣಿ ಪದ್ಮಾಭಟ್; ಇತ್ಯಾದಿ ದುಬಾಕೋರರೆಲ್ಲ ಹೇಳ ಹೆಸರಿಲ್ಲದೆ ನಾಪತ್ತೆಯಾಗಿರುವಾಗ ಹೊಸ ಬ್ಲೇಡ್ ಒಂದು ಮಾರುಕಟ್ಟೆಗೆ ಬಂದಿದೆ. ಆಕೆಯ ಹೆಸರು ಉಮಾ ಅಲಿಯಾಸ್ ಆರ್. ಉಮಾದೇವಿ ಉರ್ಫ್ ಉಮಾ ಬಲರಾಮ್!

ಸದ್ಯ ಕೆಂಗೇರಿಯ ಕೋಟೆ ಆವರಣದಲ್ಲಿ ಎಸ್.ಎಸ್. ಎಂಟರ್‌ಪ್ರೈಸಸ್ ಎಂಬ ಬೋರ್ಡಿನ ಮುಂದೆ ನಿಂತು ಎದೆ ಬಡಿದುಕೊಳ್ಳುತ್ತಿರುವ ನೂರಾರು ಮಂದಿ ಕಂಪ್ಯೂಟರ್ ತಜ್ಞರನ್ನೂ, ಕುಂಬಳಗೋಡು ಕೈಗಾರಿಕಾ ಪ್ರದೇಶದಲ್ಲಿ ಇದೇ ಹೆಸರಿನ ಮತ್ತೊಂದು ಕಚೇರಿಯೆದುರು ಕಲಿತು ಬೊಬ್ಬೆ ಹಾಕುತ್ತಿರುವ ಸುಶಿಕ್ಷಿತರ ಕಣ್ಣೀರನ್ನೂ ನೋಡಿಬಿಟ್ಟರೆ ಈಕೆಯ ಮುಂದೆ ವಿನಿವಿಂಕ್ ಶಾಸ್ತ್ರಿ ಏನೇನೂ ಅಲ್ಲ.

ಹೆಚ್ಚೂಕಮ್ಮಿ ಮುನ್ನೂರು ಕೋಟಿಯ ಮೊತ್ತವನ್ನು ಮುಂಡಾಯಿಸಿ ಮರೆಯಾಗಿದ್ದಾಳೆ ಕೆಂಗೇರಿಯ ಉಮಾದೇವಿ. ಈಕೆಯದು ಹೊಸ ಟೈಪಿನ ವಂಚನೆ. ಮೋಸ ಹೋದವರಿಗೆ



ಉಮಾಳ್ ಅಡ್ಡೆಯೆದುರು ವಂಚಿತರು...

ತಮ್ಮ ತಲೆ ಬೋಳಿಸಿದ್ದೇ ಗೊತ್ತಾಗುವುದಿಲ್ಲ. ನೀವು ಮನೆಯಲ್ಲೇ ಕುಳಿತು ದುಡಿಯಬೇಕೆ? ತಿಂಗಳಿಗೆ ಕುಳಿತಲ್ಲೇ 30 ರಿಂದ 40 ಸಾವಿರದಷ್ಟು ಖಮಾಯಿಸಬೇಕೆ? ಹಾಗಿದ್ದರೆ ಇಂತಿಂಥಾ ನಂಬರನ್ನು ಸಂಪರ್ಕಿಸಿ–ಇತ್ಯಾದಿ ಜಾಹೀರಾತು ಪ್ರತಿನಿತ್ಯ ನಿಮ್ಮ ಮೊಬೈಲಿಗೆ ಬರುತ್ತಲೇ ಇರುತ್ತದೆ. ಇತ್ತೀಚೆಗೆ ಕೆಲ ಪತ್ರಿಕೆಗಳಲ್ಲೂ ಇಂಥ ಜಾಹೀರಾತಿರುತ್ತದೆ. ಬೆಂಗಳೂರಿನ ಇನ್ನೂ ಅಭಿವೃದ್ಧಿ ಹೊಂದದ ಬಡಾವಣೆಗಳ ಲೈಟ್ ಕಂಬಕ್ಕೋ, ಬಸ್ ಸ್ಟಾಪಿನಲ್ಲೋ ಈ ತರದ ಜಾಹೀರಾತುಳ್ಳ ಭಿತ್ತಿಪತ್ರವನ್ನೂ ನೋಡಿರುತ್ತೀರಿ. ನಿಸ್ಸಂಶಯವಾಗಿ ಇದು ಮೋಸದ ಜಾಲವೊಂದಕ್ಕೆ ನಿಮ್ಮನ್ನು ಸೆಳೆದೊಯ್ಯುವ ತಂತ್ರವೇ.

ಕೆಂಗೇರಿಯ ಉಮಾದೇವಿ ಬಳಸಿದ್ದೂ ಇದೇ ತಂತ್ರವನ್ನು. ಇಲ್ಲಿಗೆ ಮೂರು ವರ್ಷದ ಹಿಂದೆ ಏಕಾಏಕಿ ಕೆಂಗೇರಿಯಲ್ಲಿ ಪ್ರತ್ಯಕ್ಷಳಾದ ಉಮಾದೇವಿ ಮೂಲತಃ ಶಿವಮೊಗ್ಗದವಳು. ಈಕೆಯ ಗಂಡ ಬಲರಾಮ್ ಟೀವಿ–ಫ್ರಿಡ್ಜು ರಿಪೇರಿ ಮಾಡಿಕೊಂಡಿದ್ದ. ಶುರುವಿನಲ್ಲಿ ಚೀಟಿ ನಡೆಸಿಕೊಂಡಿದ್ದ ಉಮಾದೇವಿ ಕ್ರಮೇಣ ಎಸ್.ಎಸ್. ಎಂಟರ್‌ಪ್ರೈಸಸ್ ಎಂಬ ಕಚೇರಿಯೊಂದನ್ನು ತೆರೆದಳು. ಯಾರೋ ಮಾರ್ವಾಡಿಯೊಬ್ಬನಿಂದ ಸಾಲ ಪಡೆದು ಅಲ್ಲೊಂದು ಕಂಪ್ಯೂಟರಿಟ್ಟಳು.

'ತಿಂಗಳಿಗೆ ಕುಂತಲ್ಲೇ 30 ರಿಂದ 40 ಸಾವಿರ ಸಂಪಾದಿಸಬೇಕೆ?' ಎಂಬ ಈಕೆಯ ಮೆಸೇಜುಗಳು ಬೆಂಗಳೂರಿನ ಲಕ್ಷಾಂತರ ಜನರ ಮೊಬೈಲುಗಳಿಗೆ ರವಾನೆಯಾದವು.

ಮನೆಯಲ್ಲೇ ಕುಳಿತು ಮಾಸಿಕ 30 ರಿಂದ 40 ಸಾವಿರ ಸಂಪಾದಿಸುವುದಾದರೂ ಹೇಗೆ?

ತಲೆ ಕೆಡಿಸಿಕೊಂಡ ಸಾವಿರಾರು ನಿರುದ್ಯೋಗಿಗಳು ಉಮಾದೇವಿಯ ಕೆಂಗೇರಿ ಅಡ್ಡೆಯೆದುರು ಜಮಾಯಿಸಿದ್ದಂತೆ "ನೀವೇನೂ ಮಾಡಬೇಕಿಲ್ಲ. ನಾನೊಂದು ಐಡಿಯಾ ಕೊಡ್ತೀನಿ. ಅದನ್ನು ಬಳಸಿ ನಿಮ್ಮ ಕಂಪ್ಯೂಟರ್ ತೆರೆದರೆ ಅಲ್ಲಿ ನಮ್ಮ ವೆಬ್ ಸೈಟಿರುತ್ತದೆ. ಅದರ ಹೆಸರು www.click thru.com. ಪ್ರಪಂಚದ ನಾನಾ ಕಂಪೆನಿಗಳ ವಿವರ ಉತ್ಪನ್ನಗಳ ಜಾಹೀರಾತುಗಳೂ ನಿಮ್ಮ ಕಂಪ್ಯೂಟರ್ ಪರದೆಯಲ್ಲಿ ಮಿಂಚಲಾರಂಭಿಸುತ್ತವೆ. ನೀವು ಮಾಡಬೇಕಾದದ್ದು ಅದನ್ನು ಸೂಕ್ಷ್ಮವಾಗಿ ಗಮನಿಸಬೇಕಷ್ಟೇ. ಹಾಗೇ ಗಮನಿಸುತ್ತಲೇ ಅಂಥ ಜಾಹೀರಾತು ಕಂಪೆನಿಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಟಿಕ್ ಮಾಡುತ್ತಾ ಹೋಗಬೇಕು. ದಿನಕ್ಕೆ ನೀವು ಈ ರೀತಿ ಎಷ್ಟು ಬಾರಿ ಕ್ಲಿಕ್ ಮಾಡುತ್ತೀರೋ ಅದಕ್ಕೆ ಇಂತಿಷ್ಟು ರೊಕ್ಕ ಗ್ಯಾರಂಟಿ. ಆದರೆ ಅದಕ್ಕಿಂತಲೇ ನಮ್ಮಿಂದ ನೀವು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬೇಕು. ಇಂಥ ಒಂದು ಐಡಿಯ ಬೆಲೆ 32 ಸಾವಿರ ರೂಪಾಯಿ. ಒಮ್ಮೆ ನೀವು 32 ಸಾವಿರ ತೆತ್ತು ಐಡಿ ಪಡೆದಿರೆಂದರೆ ಒಂದೇ ವರ್ಷಕ್ಕೆ ಅದನ್ನು ವಾಪಸ್ಸು ಪಡಕೊಳ್ಳಬಹುದು. ಅಲ್ಲಿಯತನಕ ತಿಂಗಳಿಗೆ ಕಮ್ಮಿಯೆಂದರೂ ಆರು ಸಾವಿರ ರೂಪಾಯಿ ಬಂದೇ ಬರುತ್ತದೆ. ಒಂದು ವರ್ಷ ಈ ರೀತಿ ಕ್ಲಿಕ್ ಮಾಡಿ ತಿಂಗಳಿಗೆ ಆರು ಸಾವಿರದಂತೆ ಖಮಾಯಿಸಿ ಕೊಟ್ಟ ಐಡಿ ಕಾಸು 32 ಸಾವಿರವನ್ನೂ ಸಂಪಾದಿಸಿಬಿಟ್ಟರೆ ಮುಂದಿನ ವರ್ಷದ ಹೊತ್ತಿಗೆ ಕುಂತಲ್ಲೇ ನೀವು ಮಾಸಿಕ 30 ರಿಂದ 40 ಸಾವಿರ ದುಡಿಯಬಹುದು..."

ಇದು ಎಸ್.ಎಸ್. ಎಂಟರ್‌ಪ್ರೈಸಸ್ ಒಡತಿ ಉಮಾದೇವಿ ತನ್ನ ಬುಟ್ಟಿಗೆ ಬಿದ್ದ ಮಿಕಗಳನ್ನು ಸಂಭಾಳಿಸುವ ರೀತಿ. ಒಮ್ಮೆ ಸದಸ್ಯನಾಗಿ ಅದಕ್ಕೆ 32 ಸಾವಿರ ಕೊಟ್ಟವನು ಪ್ರತಿ ತಿಂಗಳೂ 6 ಸಾವಿರವನ್ನು ಎಣಿಸಿಕೊಳ್ಳುತ್ತಾನೆ ನಿಜ. ಆದರದು ಕ್ಲಿಕ್ ಮಾಡಿದ್ದಕ್ಕಾಗಲಿ, ಯಾವುದೋ ಕಂಪೆನಿಯ ಜಾಹೀರಾತಿನ ಕುರಿತು ತನ್ನ ಅಭಿಪ್ರಾಯವನ್ನು ಟಿಕ್ ಮಾಡಿದ್ದಕ್ಕಾಗಲಿ ಅಲ್ಲ.

ಗಾಳಕ್ಕೆ ಸಣ್ಣ ಮೀನು ಹಾಕಿ ದೊಡ್ಡ ಮೀನನ್ನು ಹಿಡಿಯುವಂತೆ, ಇಲ್ಲಿ ಗಿರಾಕಿಯೊಬ್ಬನಿಗೆ ಪ್ರತಿ ತಿಂಗಳೂ ದುಡ್ಡು ಕೊಟ್ಟಷ್ಟೂ ಆತನ ಮೂಲಕ ಹೊಸ ಹೊಸ ಮಿಕಗಳು ಬಂದು ಬೀಳುತ್ತಿರುತ್ತಾರೆ. ಹೊಸಬರು ಕೊಡುವ ಐಡಿ ದುಡ್ಡಲ್ಲೇ ಇವರಿಗೆ ಮಾಸಿಕ ಭತ್ಯೆ ಸಿಗುತ್ತಿರುತ್ತದೆ. ಹೀಗೆ ಯಾರ‍್ಯಾರು ಮನೆಯಲ್ಲಿ ಕೂತು ತಮ್ಮ ಕಂಪ್ಯೂಟರ್ ತೆರೆದು ಕ್ಲಿಕ್ ಮಾಡುತ್ತಾ ತಿಂಗಳಿಗೆ ಇಂತಿಷ್ಟೆಂದು ಸಂಬಳ ಎಣಿಸಿಕೊಳ್ಳುತ್ತಿರುತ್ತಾರೋ ಅವರ ಮೂಲಕ ಹೊಸ ಹೊಸ ಗಿರಾಕಿಗಳು ಸೇರ್ಪಡೆಯಾಗುತ್ತಲೇ ಇರುತ್ತಾರೆ. ಇದು ಇನ್ನೊಂದು ರೀತಿಯ ಮನಿ ಚೈನ್ ಇದ್ದಂತೆ. ತೋರಿಕೆಗೆ ಯಾವುದೋ ಜಾಹೀರಾತು ಕಂಪೆನಿಯ ಪರವಾಗಿ ಮನೆಯಲ್ಲೇ ಕೂತು ಸಮೀಕ್ಷೆ ನಡೆಸಿದಂತಿರುತ್ತದೆ. ಅದಕ್ಕೆ ಆ ಕಂಪೆನಿಯಿಂದ ಸಂಭಾವನೆ ಸಿಕ್ಕಂತೆ ಕಾಣಿಸುತ್ತದೆ.


ವಾಸ್ತವವಾಗಿ ಇದೊಂದು ಮನಿ ಚೈನಿದ್ದಂತೆ. ಹೊಸಬರಿಂದ ಕಿತ್ತು ಹಳಬರಿಗೆ, ಹಳಬರಿಂದ ಹೊಸ ಮಿಕಗಳು ಬುಟ್ಟಿಗೆ ಬೀಳುತ್ತಿರುತ್ತವೆ. ಈ ಹಿಂದೆ ವಿನಿವಿಂಕ್ ಶಾಸ್ತ್ರಿ ಪದ್ಮಾಭಟ್, ಅಕ್ಷಯ ಫೌಂಡೇಷನ್ ಅನಿತಾ ಮಾಡಿದ ಹಾಗೆ ಮೊದಮೊದಲು ಒಂದಕ್ಕೆರಡು ಲಾಭ ದಕ್ಕಿ ಕೊನೆಕೊನೆಗೆ ಹಾಕಿದ ದುಡ್ಡು ಸೇರಿಸಿದ ಪರಿಚಿತರೂ ಪಾಲು ಒಟ್ಟಿಗೇ ನಿಕಾಲಿಯಾಗಿರುತ್ತದೆ. ತಲೆ ಬೋಳಿಸಿಕೊಂಡಿದ್ದು ಗೊತ್ತೇ ಆಗುವುದಿಲ್ಲ.

ಕೆಂಗೇರಿ ಉಮಾ ಮಾಡಿದ್ದೂ ಇದನ್ನೇ. ಶುರುವಿನಲ್ಲಿ ಕೆಂಗೇರಿಯಲ್ಲೊಂದು ಅಡ್ಡೆ ಆರಂಭಿಸಿ ನೂರಾರು ಜನಕ್ಕೆ ಕಂತೆ ಲೆಕ್ಕದಲ್ಲಿ ದುಡ್ಡೆಣಿಸಿಕೊಟ್ಟಳು. ಹೀಗೆ ದುಡ್ಡೆಣಿಸಿಕೊಂಡವರೆಲ್ಲ ತಮ್ಮ ಪರಿಚಿತರು, ಸ್ನೇಹಿತರ ಹೆಸರಲ್ಲಿ ಬೇಕಾಬಿಟ್ಟಿ ಐಡಿ ಖರೀದಿಸಿದರು. ಇಂಥವರಿಗೆಲ್ಲ ಉಮಾ ಲಕ್ಷ, ಐದು ಲಕ್ಷದ ತನಕ ಚೆಕ್ಕನ್ನೂ ಬರಕೊಟ್ಟಳು. ಕೆಂಗೇರಿಯಲ್ಲಷ್ಟೇ ಅಲ್ಲದೆ ಕುಂಬಳಗೋಡು ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಮತ್ತೊಂದು ಅಡ್ಡೆ ಆರಂಭಿಸಿದಳು. ಜೊತೆಗೆ ತಗಚಗುಪ್ಪೆಯಲ್ಲೊಂದು ವೃದ್ಧಾಶ್ರಮವನ್ನೂ ಆರಂಭಿಸಿದಳು.

ನೋಡುನೋಡುತ್ತಲೇ ಉಮಾದೇವಿಯ ಸಾಮ್ರಾಜ್ಯ ವಿಸ್ತರಿಸಿತು. ತಿಂಗಳಾಂಪ್ರತಿ ತಪ್ಪದೇ ದುಡ್ಡು ಕೊಡುತ್ತಿದ್ದನ್ನು ನಂಬಿದ ರಾಮನಗರದ ಪ್ರವೀಣ್ ಎಂಬಾತ ತನ್ನ ಪಿತ್ರಾರ್ಜಿತ ಆಸ್ತಿ ಮಾರಿ ಒಂದು ಕೋಟಿ ಇಪ್ಪತ್ತು ಲಕ್ಷ ತಂದು ಉಮಾಳ ಕೈಗಿತ್ತ. ಮಂಗಳೂರಿನ ಸುಶಾಂತ್ ಪೈ 60 ಲಕ್ಷ ಹಾಕಿದ. ನೆಲಮಂಗಲದ ಮಾದನಾಯಕನಹಳ್ಳಿಯ ಮಂಜು ಎಂಬಾತ 30 ಲಕ್ಷ ಹಾಕಿದರೆ ಕೆಂಗೇರಿ ಉಪನಗರದಲ್ಲಿ ಪ್ರೆಸ್ ನಡೆಸುತ್ತಿದ್ದ ಶ್ರೀಧರ್ ಗೌಡ ಮತ್ತಾತನ ತಮ್ಮ ಮಧು ಸೇರಿ 60 ಲಕ್ಷ ಸುರಿದರು.

ಕೆಂಗೇರಿಯ ಲೋಕಿ ಎಂಬಾತನ 25 ಲಕ್ಷ, ಕೆಂಗೇರಿಯ ಕುಮಾರ್‌ನಿಂದ 20 ಲಕ್ಷ, ಕುಂಬಳಗೋಡು ಚಂದ್ರುನಿಂದ 12 ಲಕ್ಷ, ಬಸವೇಶ್ವರ ನಗರದ ವಿಕಾಸ್ ಮತ್ತು ಗೆಳೆಯರಿಂದ 80 ಲಕ್ಷ; ಹೀಗೆ ಕೂಡಿಟ್ಟ ಕಾಸನ್ನೆಲ್ಲ ತಂದು ಉಮಾಳ ಮಡಿಲಿಗೆ ಹಾಕಿದ್ದೇ ಹಾಕಿದ್ದು!

ಮೊದಮೊದಲು ಕರಾರುವಾಕ್ಕಾಗೇ ದುಡ್ಡು ಕೊಟ್ಟ ಉಮಾಳ ತಂತ್ರ ಫಲ ನೀಡಿತ್ತು. ಯಾರ‍್ಯಾರು ಮೊದಮೊದಲು ಉಮಾಳಿಂದ ಲಾಭ ಪಡೆದುಕೊಂಡರೋ ಅವರೆಲ್ಲ ಆತನಕ ಗಳಿಸಿದ ದುಡ್ಡಿಗೆ ತಮ್ಮ ಆಸ್ತಿಯನ್ನೂ ದೂರಿ ಸೇರಿಸಿ ಉಮಾಳ ಉಡಿ ತುಂಬಿಸಿದ್ದರು. ಐದು ಲಕ್ಷ, ಮೂರು ಲಕ್ಷ, ಹತ್ತು ಲಕ್ಷವಲ್ಲದೆ ಸಾವಿರಗಳ ಲೆಕ್ಕದಲ್ಲಿ ಐಡಿ ಖರೀದಿಸಿದವರು ಅದೆಷ್ಟೋ. ಉಮಾ ಈ ರೀತಿ ನಂಬಿಸಿಯೇ 300 ಕೋಟಿಯಷ್ಟನ್ನು ಸಂಪಾದಿಸಿದ್ದಳು. ಇವತ್ತಲ್ಲ ನಾಳೆ ಹಡಗು ಮುಳುಗುವುದು ಗ್ಯಾರಂಟಿಯಾದ್ದರಿಂದ ದೋಚಿದ ದುಡ್ಡಲ್ಲಿ ಯಾರಿಗೂ ಗೊತ್ತಿಲ್ಲದಂತೆ ಆಸ್ತಿ ಖರೀದಿಸಿದಳು.


ಉಮಾಳ್ ತಮ್ಮ ಗಿರೀಶ...

ಮೊದಮೊದಲು ಸಲೀಸಾಗಿ ಪಾಸಾಗುತ್ತಿದ್ದ ಉಮಾಳ ಚೆಕ್ಕುಗಳು ಬರುಬರುತ್ತ ಗಿರಕಿ ಹೊಡೆದು ಬೀಳತೊಡಗಿದವು. ಫೆಬ್ರವರಿ ಮೊದಲ ವಾರದ ಹೊತ್ತಿಗೆಲ್ಲ ಐಡಿ ಕೊಂಡವರಿಗೆ ಬಿಸಿ ಮುಟ್ಟಲಾರಂಭಿಸಿತು. ಆಗೊಮ್ಮೆ ಈಗೊಮ್ಮೆ ಬೌನ್ಸ್ ಆಗುತ್ತಿದ್ದ ಉಮಾಳ ಚೆಕ್ಕುಗಳು ಸಾರಾಸಗಟಾಗಿ ತಿರಸ್ಕೃತಗೊಂಡವು. ಜಯನಗರದ ಸಾರಸ್ವತ ಬ್ಯಾಂಕಿನಿಂದ ವಿತರಣೆಗೊಂಡಿದ್ದ ಬಹುತೇಕ ಚೆಕ್ಕುಗಳನ್ನು ಬ್ಯಾಂಕಿನ ಸಿಬ್ಬಂದಿಯೇ ದುಡ್ಡಿಲ್ಲ ಎಂದು ಸಾಗಹಾಕುತ್ತಿದ್ದರು. ಕೇಳಲು ಬಂದವರಿಗೆ ಯಾವುದೋ ಫಂಡು ಬರಬೇಕು, ಆವತ್ತು ಕೊಡ್ತೀನಿ, ಇವತ್ತು ಕೊಡ್ತೀನಿ ಎಂದು ಕಾಲ ತಳ್ಳುತ್ತಲೇ ಬಂದ ಉಮಾ ಫೆಬ್ರವರಿ 20 ರ ಹೊತ್ತಿಗೆ ಕಣ್ಮರೆಯಾಗಿ ಬಿಟ್ಟಳು.

ಇದಕ್ಕೂ ಮುನ್ನ ದುಡ್ಡಿನ ವಸೂಲಿಗೆ ನಿಂತ ಕೆಲ ರೌಡಿ ಎಲಿಮೆಂಟುಗಳು ಆಕೆಯನ್ನು ಎತ್ತಾಕಿಕೊಂಡು ಹೋಗಿ ಹಿಂಸಿಸಿದ್ದೂ ಉಂಟು. ಒಮ್ಮೆ ಬಿಡದಿಯ ಡಾನ್ ಒಬ್ಬನ ಶಿಷ್ಯ ಆಕೆಯ ಕಾರನ್ನು ಅಡ್ಡಗಟ್ಟಿ ಇನ್ನೇನು ಹೊತ್ತೊಯ್ಯಬೇಕೆನ್ನುವಷ್ಟರಲ್ಲಿ ಬರುತ್ತಿದ್ದ ಬಸ್ಸಿಗೆ ಅಡ್ಡ ಮಲಗಿ ನನ್ನನ್ನು ಕಾಪಾಡಿ ಕಾಪಾಡಿ ಎಂದು ಕಿರುಚಿಕೊಂಡಳು. ಬಸ್ಸಿನಲ್ಲಿದ್ದ ಜನ ಆವತ್ತು ಆಕೆಯ ನೆರವಿಗೆ ಬರದೇಹೋಗಿದ್ದರೆ ಗತಿ ಏನಾಗತ್ತಿತ್ತೊ, ಯಾವತ್ತು ರೌಡಿಗಳ ಉಪಟಳ ಹೆಚ್ಚಾಯಿತೋ ಉಮಾ ನೇರವಾಗಿ ರಾಮನಗರದ ಡಿವೈಎಸ್‌ಪಿ ಕೃಷ್ಣಮೂರ್ತಿಯವರ ಕಾಲಿಗೆ ಬಿದ್ದಳು. ಕೆಂಗೇರಿಯ ಪೊಲೀಸರನ್ನೂ ಸರಿದೂಗಿಸಿಕೊಂಡಳು.

ಪೊಲೀಸರಾದರೂ ಎಷ್ಟು ದಿನ ಅಂತ ಕಾಪಾಡಲು ಸಾಧ್ಯ? ಆಕೆಯ ಕೆಂಗೇರಿ ಮತ್ತು ಕುಂಬಳಗೋಡು ಅಡ್ಡೆಯ ಮುಂದೆ ನೂರರ ಸಂಖ್ಯೆಯಲ್ಲಿದ್ದ ವಂಚಿತರ ಹಿಂಡು ಸಾವಿರಕ್ಕೇರುತ್ತಿದ್ದಂತೆ ಉಮಾ ಪರಾರಿಯಾದಳು. ವಂಚಿತರು ಚೆಕ್ಕು ಹಿಡಿದು ಅಳುತ್ತಿದ್ದಾರೆ. ಇನ್ನೂ ಕೆಲವರು ತಲೆ ಕೆಟ್ಟು ಆಕೆಯ ಮನೆಯನ್ನೇ ಚಿಂದಿಯೆಬ್ಬಿಸಿದ್ದಾರೆ.

ಕೆಂಗೇರಿ, ಬಿಡದಿ ಹೀಗೆ ಕಂಡಕಂಡ ಪೊಲೀಸ್ ಠಾಣೆಗಳಲ್ಲಿ ದೂರನ್ನೂ ದಾಖಲಿಸಿದ್ದಾರೆ. ಆದರೆ ಉಮಾ ಸಿಗಬೇಕಲ್ಲ, ಸಿಕ್ಕರೂ ದುಡ್ಡು ದಕ್ಕಬೇಕಲ್ಲ. ಕೊಟ್ಟ 32 ಸಾವಿರಕ್ಕೆ ತಿಂಗಳಾಂಪ್ರತಿ 6 ಸಾವಿರದಂತೆ ಕೊಟ್ಟು ಹಾಕಿದ ದುಡ್ಡನ್ನು ವಾಪಸ್ಸು ಕೊಟ್ಟು ಮತ್ತೆ ಪ್ರತಿ ತಿಂಗಳು ಮೂವತ್ತೋ ನಲವತ್ತೋ ಸಾವಿರವನ್ನು ಕೊಡಲು ಆ ದೇವರಿಗಾದರೂ ಹೇಗೆ ಸಾಧ್ಯ?

ಹಿಂದೆ ಫರ್ನೀಚರ್, ಟೀವಿ ಕೊಟ್ಟು ಲಕ್ಕಿ ಡಿಪ್ ಹೆಸರಲ್ಲಿ ರಾತ್ರೋರಾತ್ರಿ ಪರಾರಿಯಾದವರು ಮಾಡಿದ್ದನ್ನೇ ವಿನಿವಿಂಕ್ ಶಾಸ್ತ್ರಿ, ಪದ್ಮಾಭಟ್, ಅನಿತಾ ಡಬ್ಲಿಂಗ್ ಹೆಸರಲ್ಲಿ ದೋಚಿದ್ದನ್ನೇ ಉಮಾ ಕಂಪ್ಯೂಟರ್ ಮೂಲಕ ಮಾಡಿದ್ದಾಳೆ. ರೂಪ ಮತ್ತು ನೆಪ ಬೇರೆಯದಾದರೂ ಇಲ್ಲಿ ತಂತ್ರ ಮಾತ್ರ ಅದೇ. ಗೊತ್ತಿದ್ದೂ ಹಳ್ಳಕ್ಕೆ ಬೀಳುವವರಿಗೆ ಏನೆನ್ನಬೇಕು?

ರಾತ್ರಿ ಕಂಡ ಬಾವೀಲಿ ಹಗಲು ಬೀಳುವವರನ್ನು ಯಾರು ತಾನೇ ಕಾಪಾಡಲು ಸಾಧ್ಯ? ●

ವಾಹೂ ವೆಂಕಟೇಶ ಮತ್ತು ಮಲೆಯಾಳಿ ಉಮೇಶನು ಸೇರಿಕೊಂಡೇ ದೋಚಿದರಾ?

ಉಮಾಳ ಬಟ್ಟೀ ಕಮಾಯಿಯ ಬೊಗಳೆ ನಂಬಿ ಬೀದಿ ಪಾಲಾದವರ ನಿಖರ ಸಂಖ್ಯೆ ಎಷ್ಟು?

ಸದ್ಯ ಬಿಡದಿ ಪೊಲೀಸರಿಗೆ ಮುನ್ನೂರಕ್ಕೂ ಅಧಿಕ ದೂರುಗಳು ಬಂದಿವೆಯಾದರೂ ದೂರು ಕೊಡದೇ 'ತಮ್ಮದೇ ವಿಧಾನ'ದಲ್ಲಿ ವಸೂಲಿ ಮಾಡಲು ಹೊಂಚು ಹಾಕಿ ಕೂತವರ ಸಂಖ್ಯೆ ಇದರ ನಾಲ್ಕು ಪಟ್ಟು. ಚನ್ನಪಟ್ಟಣದ ಪ್ರವೀಣ್ ಮತ್ತು ಪವಿತ್ರಾ ಸೇರಿಕೊಂಡು ಒಂದೂಕಾಲು ಕೋಟಿಯಷ್ಟು ಸಂಗ್ರಹಿಸಿ ಉಮಾಳ ಐಡಿ ದಂಧೆಗೆ ಹಾಕಿದ್ದಾರೆ.



ಉಡುಪಿ–ಕುಂದಾಪುರದ ಕೃಷ್ಣಾನಾಯಕ್ ಎಂಬ ಆಡಿಟರ್‌ನಿಂದ 1.10 ಕೋಟಿ, ವಸಾಕಳಿ ಮಂಜುನಾಥ್‌ನಿಂದ 60 ಲಕ್ಷ, ಕಾವ್ಯಾ ಮಹೇಶ್ ಎಂಬಾಕೆಯಿಂದ 60 ಲಕ್ಷ, ಕನಕಪುರದ ಆನಂದ್‌ನಿಂದ 40 ಲಕ್ಷ, ಮಹಾಲಕ್ಷ್ಮಿ ಲೇಔಟಿನ ನವೀನ್ ಮತ್ತು ಗೆಳೆಯರಿಂದ 7.5 ಲಕ್ಷ, ಲಿಂಗರಾಜಪುರದ ವಿನಯ್‌ನಿಂದ 2.10 ಕೋಟಿ; ಹೀಗೆ ಡಬ್ಬಲ್ ಲಾಭದ ಆಸೆ ಹುಟ್ಟಿಸಿ ಉಮಾ ಗುಂಜಿಕೊಂಡ ರೊಕ್ಕದ ಕರಾರುವಾಕ್ಕಾದ ಮೊತ್ತದ ಲೆಕ್ಕ ಸಿಗುತ್ತಿಲ್ಲ.

ಇಷ್ಟೆಲ್ಲ ಬಂಡವಾಳ ಹಾಕಿದ ವಿವಿಧ ತಂಡಗಳೀಗ ನಾಪತ್ತೆಯಾದ ಉಮಾಳ ಬೇಟೆಗಿಳಿದಿವೆ. ರೊಚ್ಚಿಗೆದ್ದು ಆಕೆಯಿದ್ದ ಮನೆ ಮತ್ತು ವೃದ್ಧಾಶ್ರಮಕ್ಕೇ ನುಗ್ಗಿ ಚಿಂದಿಯೆಬ್ಬಿಸಿದ್ದೂ ಆಗಿದೆ. ಉಮಾ ಎಲ್ಲಿದ್ದಾಳೆ, ಏನು ಮಾಡುತ್ತಿದ್ದಾಳೆಂಬುದೇ ಯಾರಿಗೂ ಗೊತ್ತಿಲ್ಲ. ಸದ್ಯ ಆಕೆಯ ಪಾಲಿಗೆ ಗಾಡ್‌ಫಾದರ್ ಅಂತಿದ್ದರೆ ಅದು ರಾಮನಗರದ ಡಿವೈಎಸ್‌ಪಿ ರಾಮಕೃಷ್ಣ. ಬಿಡದಿಯ ಎಸ್.ಐ. ವಿಜಯ್‌ಕುಮಾರ್ ಕಾಟಾಚಾರಕ್ಕಷ್ಟೇ ದೂರು ಪಡೆಯುತ್ತಾರೆ. ಉಮಾಳನ್ನು ಹಿಡಿದು ಹಾಕಲು ಏನೇನು ಕ್ರಮ ಕೈಗೊಂಡ್ರಿ ಎಂದರೆ 'ನನಗೊತ್ತಿಲ್ಲ ಡಿವೈಎಸ್‌ಪಿ ಸಾಹೇಬರನ್ನೇ ಕೇಳಿ' ಎನ್ನುತ್ತಾರೆ. ವಿಕಟವೆಂದರೆ ಆಕೆ ಪರಾರಿಯಾಗುವದಕ್ಕೂ ಎರಡು ವಾರದ ಹಿಂದಷ್ಟೇ ಮೋಸ ಹೋದವರ ವಿರುದ್ಧ ಆಕೆಯ ರಕ್ಷಣೆಗೆಂದು ಅರ್ಧ ಡಜನ್ ಪೊಲೀಸರನ್ನು ಡಿವೈಎಸ್‌ಪಿ ರಾಮಕೃಷ್ಣ ನೇಮಿಸಿದ್ದರು. ಇದರರ್ಥ ತನ್ನೆಲ್ಲ ವಂಚನೆಗೆ ಉಮಾ ಆಯುಧ ಮಾಡಿಕೊಂಡಿದ್ದು ಪೊಲೀಸರನ್ನೇ.

ಪೊಲೀಸರ ಕುಮ್ಮಕ್ಕಿಲ್ಲದೆ ಆಕೆ ದಂಧೆ ನಡೆಸಲು ಹೇಗೆ ಸಾಧ್ಯ? ಎಂಬುದು ಸದ್ಯ ಬೀದಿಗೆ ಬಿದ್ದವರ ಪ್ರಶ್ನೆ. ಆಕೆಯನ್ನು ಪೊಲೀಸರೇ ಮುಚ್ಚಿಟ್ಟಿದ್ದಾರಾ? ಮೋಸ ಹೋದವರ ಪೈಕಿ ಯಾರಾದರೂ ಆಕೆಯನ್ನೊಯ್ದು ಲಾಕ್ ಮಾಡಿಕೊಂಡಿರಬಹುದಾ? ಅಥವಾ ತನ್ನ ಪ್ರಿಯಕರ ಉಮೇಶ್ ಶ್ರೀಧರ್ ಎಂಬಾತನ ಜೊತೆ ಉಮಾ ಕೇರಳಕ್ಕೆ ಪರಾರಿಯಾಗಿದ್ದಾಳಾ? ಇತ್ಯಾದಿ ಅನೇಕಾನೇಕ ಪ್ರಶ್ನೆಗಳು ಬಿಡದಿ–ಕೆಂಗೇರಿಯ ಮಧ್ಯೆ ಹೊಗೆಯಾಡುತ್ತಲೇ ಇದೆ.

ಹೆಸರಿಗಷ್ಟೇ ಉಮಾ ದಂಧೆ ನಡೆಸುತ್ತಿದ್ದಳಾದರೂ ಆಕೆಯ ಸೂತ್ರಧಾರನಂತಿದ್ದವನು ಕೇರಳ ಮೂಲದ ಫೈನಾನ್ಶಿಯರ್ ಉಮೇಶ್ ಶ್ರೀಧರ್. ತಾನು ರಕ್ಷಣಾ ವೇದಿಕೆಯ ಪದಾಧಿಕಾರಿ ಎಂದೇ ಪೋಜು ಕೊಡುತ್ತಿದ್ದ ಮಲೆಯಾಳಿ ಉಮೇಶ್ ಶ್ರೀಧರ್ ಉತ್ತರಹಳ್ಳಿಯಲ್ಲಿ ಚಂದ್ರಕಲಾ ಎಂಟರ್‌ಪ್ರೈಸಸ್ ಎಂಬ ಮೀಟರ್ ಬಡ್ಡಿ ಅಡ್ಡೆ ನಡೆಸುತ್ತಾನೆ. ಈತ ಹಾರ್ಟ್‌ಕೋರ್ ರೌಡಿ ಕೂಡ. ಕೆಲ

▶▶ 12

ಮರ್ಯಾದಾ ಹತ್ಯೆ!
ಮಗಳನ್ನೇ ಕೊಂದ ತಂದೆ ತಾಯಿ

• ಪಾರ್ವತೀಶ



ಮಗಳು ಬೇರೆ ಜಾತಿಯ ಹುಡುಗನನ್ನು ಪ್ರೀತಿಸಿ ಮದುವೆಯಾದಳೆಂದು ಸಿಟ್ಟಿಗೆದ್ದು ಮಗಳ ಕುತ್ತಿಗೆಗೆ ಹಗ್ಗ ಹಾಕಿ ಕೊಂದು ಆಕೆಯ ಹೆಣವೂ ಸಿಗದಂತೆ ಅಪ್ಪ-ಅಮ್ಮ ಸುಟ್ಟು ಹಾಕುತ್ತಾರೆಂದರೆ ನೀವು ನಂಬುತ್ತೀರಾ?

ಜಾತಿಬಿಟ್ಟು ಮದುವೆಯಾಗಿದ್ದ ಈ ನವದಂಪತಿಗಳ ನಾಲ್ಕು ತಿಂಗಳ ಹಸುಗೂಸನ್ನೂ ಬಿಡದೆ ಕೊಂದು ಶವವನ್ನು ನದಿಗೆಸೆದು ಹೊರಟುಬಿಡಬಲ್ಲ ಹಿರಿಯರ ನಡವಳಿಕೆ ವಿಶ್ಲೇಷಣೆಗೆ ಸಿಗುವಂತಿದೆಯಾ?

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಹತ್ತಿರದ ತಾಮಸಂದ್ರ ಗ್ರಾಮದಲ್ಲಿ ಈ ಭೀಭತ್ಸಕಾರಿ ಘಟನೆ ನಡೆದಿದೆ.

ಹತ್ಯೆ ನಡೆದಿರುವುದು ದೀಪಿಕಾ ಎಂಬ ಯುವತಿಯದ್ದು. ಜೊತೆಗೆ ಆಕೆಯ ನಾಲ್ಕು ತಿಂಗಳ ಹಸುಗೂಸಿನದ್ದು. ಈ ದೀಪಿಕಾ ಹಾರೋಹಳ್ಳಿ ಸಮೀಪದ ಕರಿಕಲ್‌ದೊಡ್ಡಿಯವಳು. ಜಾತಿಯಲ್ಲಿ ಒಕ್ಕಲಿಗರು. ಈಕೆ ಈಗ್ಗೆ ಹದಿನಾಲ್ಕು ತಿಂಗಳ ಹಿಂದೆ ತನ್ನ ಗ್ರಾಮದವನೇ ಆಗಿದ್ದ ಪರಿಚಿತ ವೆಂಕಟೇಶ್‌ನನ್ನು ಪ್ರೀತಿಸಿ ಮದುವೆಯಾಗಿದ್ದಳು. ಉಪ್ಪಾರ ಜನಾಂಗದ ವೆಂಕಟೇಶ್‌ನೇ ಈ ಅಂತರಜಾತಿಯ ಮದುವೆಯ ಕಾರಣದಿಂದ ಕೊಲೆಗೀಡಾಗುವ ಸಂಭವವಿತ್ತು. ಆದರೆ ತನ್ನ ಆತ್ಮರಕ್ಷಣೆಯ ಬಗ್ಗೆ ಹುಷಾರಿನಿಂದಿದ್ದ ವೆಂಕಟೇಶ್‌ಗೆ ಈ ಜಾತಿಭೂತ ತನ್ನನ್ನು ಪ್ರೀತಿಸಿ ಮದುವೆಯಾಗಿದ್ದ ದೀಪಿಕಾಳ ಪ್ರಾಣವನ್ನೇ ತೆಗೆಯುತ್ತದೆಂಬ ಸಣ್ಣ ಅನುಮಾನವೂ ಇರಲಿಲ್ಲ.



ಆದರೆ ಕರಿಕಲ್ ದೊಡ್ಡಿ ಗ್ರಾಮದ ಸಾಧಾರಣ ಸ್ಥಿತಿವಂತ ಒಕ್ಕಲಿಗ ಕುಟುಂಬದ ರಾಮಕೃಷ್ಣಯ್ಯ ಗೌರಮ್ಮ ದಂಪತಿಗಳು ತಮ್ಮ ಮಗಳು-ಮೊಮ್ಮಗಳನ್ನೇ ಕೊಲೆ ಮಾಡಿ ಈಗ ತಲೆ ಮರೆಸಿಕೊಂಡಿದ್ದಾರೆ. ಯಾವ ಪುರುಷಾರ್ಥಕ್ಕೆ ಈ ಕೊಲೆಯಾಗಬೇಕಿತ್ತೆಂದು ಕೇಳಿದರೆ ಯಾರಲ್ಲೂ ಖಚಿತ ಉತ್ತರಗಳಿಲ್ಲ.

ದೂರದ ಅಫಘಾನಿಸ್ತಾನದಲ್ಲಿ ನಡೆಯುವ, ಉತ್ತರ ಭಾರತದ ಫ್ಯೂಡಲ್ ಗ್ರಾಮಗಳಲ್ಲಿ ನಡೆಯುತ್ತಿರುವ ಮರ್ಯಾದ ಹತ್ಯೆಗಳ ಸುದ್ದಿ ನಮಗೆ ಕೇವಲ ದೂರದ ಮಿಡಿಯಾ ವರದಿಗಳಂತಿದ್ದವು. ಆದರೀಗ ಬೆಂಗಳೂರಿನಿಂದ ಕೇವಲ 40 ಕಿಲೋಮೀಟರು ದೂರದ ಊರಿನಲ್ಲೂ ಇಂತದ್ದೇ ಒಂದು ಮರ್ಯಾದ ಹತ್ಯೆ ತಣ್ಣಗೆ ಜರುಗಿ ಹೋಗಿದೆ.

ಆದರೆ ಒಕ್ಕಲಿಗ ರಾಜಕಾರಣಿಗಳು ಇದನ್ನು ಗಮನಿಸುವುದೂ ಇಲ್ಲ, ಖಂಡಿಸುವ ಮಾತಂತೂ ಇಲ್ಲವೇ ಇಲ್ಲ, ಇನ್ನು ಜಾತಿಯ ಭಾವನೆ ಕೆರಳಿಸಿ ಮಠ ಕಟ್ಟಿಕೊಂಡಿರುವ ಒಕ್ಕಲಿಗ ಜಗದ್ಗುರುಗಳು ಮನುಷ್ಯತ್ವದ ಸಂವೇದನೆಯೇ ಸತ್ತುಹೋಗಿರುವಂತೆ ತಣ್ಣಗಿದ್ದು ಬಿಡಬಲ್ಲರು.

ಒಕ್ಕಲಿಗ-ಉಪ್ಪಾರರ ಮದುವೆ

ಕರಿಕಲ್‌ದೊಡ್ಡಿಯ ದೀಪಿಕಾ ಬೆಂಗಳೂರಿನ ಎನ್‌ಎಂಕೆಆರ್‌ವಿ ಕಾಲೇಜಿಗೆ ಓದಲು ಪ್ರತಿದಿನ ಓಡಾಡುತ್ತಿದ್ದಾಗ ಅದೇ ಬಸ್‌ನಲ್ಲಿ ವೆಂಕಟೇಶನೂ ಸಿಗುತ್ತಿದ್ದ. ಕನಕಪುರ ಟೌನಿನ ರೂರಲ್ ಕಾಲೇಜ್ ವಿದ್ಯಾರ್ಥಿಯಾಗಿದ್ದ ವೆಂಕಟೇಶ್ ಸಾಧು ಸ್ವಭಾವದ ಯುವಕ. ಗ್ರಾಮದಲ್ಲಿ ನಾಲ್ಕು ಮನೆ ಆಚೀಚೆ ವಾಸವಿದ್ದ ಇವರಿಬ್ಬರಿಗೂ ಗೆಳೆತನ ಬೆಳೆದು, ಪ್ರೀತಿಯಾಗಿ ಅರಳಿತು. ಕರಿಕಲ್‌ದೊಡ್ಡಿಯಲ್ಲಿ ಉಪ್ಪಾರ ಜನಾಂಗದವರ ಮೂವತ್ತು ನಲವತ್ತು ಕುಟುಂಬಗಳಿವೆ. ಅವರ ಪಾರಂಪರಿಕ ಉಪ್ಪಿನ ಗಣಿಗಾರಿಕೆ ಹಾಗೂ ಮಾರಾಟದ ಕಸುಬಿಗೆ ಜಾಗತೀಕರಣ ಎಂದೋ ಸಮಾಧಿ ತೋಡಿದೆ. ಕೆಲವರಿಗೆ ಮಾತ್ರ ಚಿಕ್ಕ ಭೂಹಿಡುವಳಿಗಳಿದ್ದರೆ ಉಳಿದವರು ಗಾರೆ ಕೆಲಸ, ಕೂಲಿ ಇತ್ಯಾದಿ ಕೆಲಸ ಮಾಡಿ ಜೀವನ ನಡೆಸುತ್ತಿದ್ದಾರೆ. ಮತ್ತೊಂದೆಡೆ ಒಕ್ಕಲಿಗರಾಗಿರುವ ದೀಪಿಕಾಳ ತಂದೆ-ತಾಯಿಗೆ ಎಂಟು ಎಕರೆ ಜಮೀನಿದೆ. ಒಟ್ಟು ಕುಟುಂಬದ ಆಸ್ತಿ ಹದಿನೆಂಟಕರೆಯಷ್ಟಿದೆ. ಮೂಗೇಗೌಡ ಈ ಕುಟುಂಬದ ಮುಖ್ಯಸ್ಥ ಚನ್ನವೀರೇಗೌಡನೆಂಬ ಪೊಲೀಸು, ವೆಂಕಟೇಶ ನೆಂಬ ಹೈಸ್ಕೂಲು ಟೀಚರ್. ಪುರುಷೋತ್ತಮನೆಂಬ ತಾಲ್ಲೂಕು ಪಂಚಾಯತಿ ಮೆಂಬರ್... ಇವರುಗಳೇ ಈ ಕುಟುಂಬದ ಹೈಲೆವೆಲ್ ವ್ಯಕ್ತಿಗಳಾಗಿದ್ದಾರೆ.

ಆದರೆ ಜಾತಿಯಲ್ಲಿ ಒಕ್ಕಲಿಗರೆಂಬುದನ್ನು ಬಿಟ್ಟರೆ, ಹಿಂದೂ ಜಾತಿ ಶ್ರೇಣಿಯಲ್ಲಿ ಒಕ್ಕಲಿಗರು ಉಪ್ಪಾರರಿಗಿಂತ ಮೇಲಿನ ಸ್ಥಾನ ಹೊಂದಿದ್ದಾರೆಂಬುದನ್ನು ಬಿಟ್ಟರೆ ಮೂಗೇಗೌಡನ ಫ್ಯಾಮಿಲಿಗೆ ಬೇರೆ ಹೆಚ್ಚುಗಾರಿಕೆಯೇನೂ ಇರಲಿಲ್ಲ. ರಾಮನಗರ ಗೂಡಿನ ಮಾರ್ಕೆಟ್‌ನಲ್ಲಿ ರೇಷ್ಮೆಯ ಬೆಲೆ ಬಿದ್ದು ಹೋದರೆ ಎಲ್ಲಾ ರೈತರಂತೆಯೇ ರಾಮಕೃಷ್ಣ-ಗೌರಮ್ಮ ದಂಪತಿಗಳಿಗೂ ಕಣ್‌ಕಣ್ ಬಿಡಬೇಕಾದ ಸ್ಥಿತಿಯೇ ಇದೆ. ನಷ್ಟ ಗ್ಯಾರಂಟಿಯಾದ ರಾಗಿ ಬೆಳೆ, ಬಂದಷ್ಟೇ ಹಣ ಖರ್ಚಾಗುವ ಹೈನುಗಾರಿಕೆ ಇವರ ಕುಟುಂಬಕ್ಕೆ ದೊಡ್ಡ ಆದಾಯವನ್ನೇನೂ ತರುತ್ತಿರಲಿಲ್ಲ. ಜಮೀನಿನ ಬೆಲೆ ಎಕರೆಗೆ 15 ಲಕ್ಷ ತಲುಪಿರುವುದೊಂದೇ ಈ ಕುಟುಂಬಕ್ಕಿದ್ದ ದೊಡ್ಡಸ್ತಿಕೆ.

ಕೊಲೆಗೀಡಾದ ದೀಪಿಕಾಗೆ ಹೈಸ್ಕೂಲ್ ಓದುತ್ತಿರುವ ರಾಜು ಹಾಗೂ ರಶ್ಮಿ ಎನ್ನುವ ತಮ್ಮ-ತಂಗಿ ಇದ್ದಾರೆ. ದೀಪಿಕಾ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ವೆಂಕಟೇಶ್ ಜೊತೆ ಪ್ರೇಮ ಬೆಳೆದು ಅದು ಮದುವೆಯ ಹಂತಕ್ಕೆ ಬಂದಾಗ ದೀಪಿಕಾ ಮನೆಯಲ್ಲಿ ಆಕ್ರೋಶ ಸ್ಫೋಟಗೊಂಡಿತು. ವೆಂಕಟೇಶ್ ಯಾವ ರೀತಿಯಲ್ಲಿ ಅನರ್ಹ ಎಂಬುದನ್ನು ಹೇಳದೆ ಕೇವಲ ಕೆಳಜಾತಿ ಹಾಗೂ ಬಡವ ಎಂದಷ್ಟೇ ಕಾರಣಕ್ಕೆ 'ಮದುವೆ ಬೇಡ' ಅಂದಿದ್ದು ದೀಪಿಕಾಳಿಗೆ ಸರಿಕಾಣಲಿಲ್ಲ. ಕೊನೆಗೆ ಬೇರೆ ದಾರಿ ಕಾಣದೆ ದೀಪಿಕಾ-ವೆಂಕಟೇಶ್ 2010 ಜನವರಿ ಎರಡನೇ ವಾರದಲ್ಲಿ ಊರು ತ್ಯಜಿಸಿ ಶ್ರೀರಂಗಪಟ್ಟಣದಲ್ಲಿ ಮದುವೆಯಾದರು. ಅವರ ಹೊಸಜೀವನ ಮೈಸೂರಿನಲ್ಲಿ ಶುರುವಾಯಿತು.



ಕೆಲಕಾಲ ಫುಡ್‌ವರ್ಲ್ಡ್ ಸೂಪರ್ ಮಾರ್ಕೆಟ್‌ನಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡಿದ ವೆಂಕಟೇಶ್ ನಂತರ ಡ್ರೈವರ್ ಆಗಿ ಕೊನೆಗೆ ಪ್ಲಂಬಿಂಗ್ ವೃತ್ತಿ ಹಿಡಿದ. ಇತ್ತ ಕರಿಕಲ್‌ದೊಡ್ಡಿಯ ದೀಪಿಕಾಳ ಮನೆಯವರಿಗೆ ಇದು ಪ್ರತಿಷ್ಠೆಯ ಪ್ರಶ್ನೆಯಾಗಿ ಬೆಳೆಯುತ್ತಾ ಹೋಯಿತು. ಗ್ರಾಮದಲ್ಲಿ ತಮ್ಮ ಅಧೀನದಲ್ಲಿ ಬದುಕುತ್ತಿರುವ ಉಪ್ಪಾರ ಹುಡುಗನೊಬ್ಬ ಸವಾಲಾಕುವಂತೆ ಒಕ್ಕಲಿಗರ ಯುವತಿಯನ್ನು ಕರೆದೊಯ್ದು ಮದುವೆಯೂ ಆಗಿದ್ದು ಅವರಿಗೆ ಒಂದು ಅಕ್ಷಮ್ಯ ಘೋರ ಅಪರಾಧವೆನಿಸಿ ಬಿಟ್ಟಿತು. ಈ ರೊಚ್ಚಿನಲ್ಲೇ ದೀಪಿಕಾ-ವೆಂಕಟೇಶ್ ಎಲ್ಲಿದ್ದಾರೆಂದು ಹುಡುಕುತ್ತಾ ಕೊನೆಗೆ ಮೈಸೂರಿನಲ್ಲಿ ಪತ್ತೆಹಚ್ಚಿಯೂ ಬಿಟ್ಟರು.

ವೆಂಕಟೇಶ್ ಮನೆಯಲ್ಲಿರಿರದಿದ್ದಾಗ ಹೋದವರೆ ದೀಪಿಕಾಳೊಂದಿಗೆ ನಯವಾಗಿ ಮಾತನಾಡಿ ಎಲ್ಲವನ್ನೂ ಕ್ಷಮಿಸಿದಂತೆ ನಟಿಸಿದರು. ದೀಪಿಕಾಳ ಮೊಬೈಲ್ 9972811054 ಗೆ ಪದೇಪದೇ ಫೋನ್ ಮಾಡುತ್ತಾ ಊರಿಗೆ ಬರುವಂತೆ ಮನ ಒಲಿಸಿದರು. ಅಪ್ಪ-ಅಮ್ಮ ಹಾಗೂ ನೆಂಟರಿಷ್ಟರ ಮಾತನ್ನು ನಂಬಿದ ದೀಪಿಕಾ ಒಮ್ಮೆ ತವರುಮನೆಗೆ ಬಂದಳು. ಆದರೆ ತಕ್ಷಣ ತಮ್ಮ ಮಾತಿನ ವರಸೆ ಬದಲಿಸಿದ ಪೋಷಕರು 'ಆಸ್ತಿಯಲ್ಲಿ ಯಾವುದೇ ಭಾಗ ಬೇಡ' ಎನ್ನುವ ಮುಚ್ಚಳಿಕೆಯನ್ನು ದೀಪಿಕಾಳಿಂದ ಬರೆಸಿಕೊಂಡು ಕನಕಪುರ ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ನೋಂದಾಯಿಸಿಕೊಂಡರು. ಅಷ್ಟಕ್ಕೂ ಸುಮ್ಮನಾಗದೆ ವೆಂಕಟೇಶನ ವಿರುದ್ಧ ಕಿರುಕುಳದ ಕಂಪ್ಲೇಂಟ್ ಕೊಡುವಂತೆಯೂ ಧಮಕಿ ಹಾಕಿದ್ದಾರೆ. ಇದರಿಂದ ಹೆದರಿದ ದೀಪಿಕಾ ಅವರಿಂದ ಬಿಡಿಸಿ ಕೊಂಡು ಮೈಸೂರಿಗೆ ಹೋದಳು.

ವೆಂಕಟೇಶ್‌ಗೆ ಇದೆಲ್ಲಾ ಅಪಾಯವೆನ್ನಿಸಿ ಚನ್ನಪಟ್ಟಣಕ್ಕೆ ಮನೆ ಬದಲಿಸಿದ. ಆದರೆ ದೀಪಿಕಾಳ ಅಪ್ಪ ಅಮ್ಮ ಅಲ್ಲಿಗೂ ಬೆಂಬೆತ್ತಿ ಬಂದರು. ಅಷ್ಟರಲ್ಲಿ ದೀಪಿಕಾಳಿಗೆ ಗಂಡು ಮಗುವಾಗಿತ್ತು. 2011 ರ ಜನವರಿ ಕೊನೆಯ ದಿನಗಳಲ್ಲಿ ಚೆನ್ನಪಟ್ಟಣಕ್ಕೇ ಮತ್ತೆ ಬಂದ ದೀಪಿಕಾಳ ತಂದೆ ರಾಮಕೃಷ್ಣಯ್ಯ 'ಅಜ್ಜಿಗೆ ಹುಷಾರಿಲ್ಲ, ಬದುಕುವುದು ಕಷ್ಟ. ಸಾಯೋ ಮುನ್ನ ನಿನ್ನ ಮಗೂನ ನೋಡಬೇಕಂತೆ, ಬಾ' ಅಂದಿದ್ದಾನೆ. ಒಲ್ಲದ ಮನಸ್ಸಿನಿಂದ ಆದರೆ ತನ್ನಜ್ಜಿಯ ಮೇಲಿನ ಪ್ರೀತಿಯಿಂದ ದೀಪಿಕಾ ಹೊರಟಳು. ಅವಳನ್ನು ಕರಿಕಲ್‌ದೊಡ್ಡಿಯ ಹತ್ತಿರದ ತಾಮಸಂದ್ರ ಗ್ರಾಮಕ್ಕೆ ಕರೆದೊಯ್ದು ನೆಂಟರ ಮನೆಯಲ್ಲಿ ಕೂಡಿ ಹಾಕಿದ ಅಪ್ಪ-ಅಮ್ಮ ದೀಪಿಕಾಳಿಗೆ ಮತ್ತೆ ಹಿಂಸೆ ನೀಡಿದ್ದಾರೆ. ಜೊತೆಗೆ ಬೆಂಗಳೂರಿನಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಆಗಿರುವ ಚನ್ನವೀರೇಗೌಡ, ಹಾರೋಹಳ್ಳಿಯಲ್ಲಿ ಹೈಸ್ಕೂಲ್ ಟೀಚರ್ ಆಗಿರುವ ವೆಂಕಟೇಶಪ್ಪನ ಕುಮ್ಮಕ್ಕಿನಿಂದ ಹೊಡೆತ ಬಡಿತಗಳೂ ನಡೆಯಲು ಶುರುವಾಯಿತು. ಫೆಬ್ರವರಿ 27 ನೇ ತಾರೀಖು ಸಂಜೆ ದೀಪಿಕಾಳ ಕೈಯಿಂದ ಹಸುಗೂಸನ್ನು ಕಿತ್ತು ಬಡಿದು ನೀರಿಗೆಸೆದಿದ್ದಾರೆ. ದಿಗ್ಭ್ರಾಂತಳಾದ ದೀಪಿಕಾಳನ್ನು ಇನ್ನಷ್ಟು ಹೆದರಿಸಲು ಹೊಡೆದು, ಕುತ್ತಿಗೆ ಹಿಸುಕಿದಾಗ ಪಾಪ ಆ ಹುಡುಗಿ ಸತ್ತೇ ಹೋಗಿದ್ದಾಳೆ.

ಇವರೆಂತಾ ಕ್ರಿಮಿನಲ್‌ಗಳೆಂದರೆ ತಮ್ಮ ಕೈಯಾರೆ ಮಗಳನ್ನು ಮತ್ತವಳ ಪುಟ್ಟ ಮಗುವನ್ನು ಕೊಂದ ನಂತರವೂ ಕೊಂಚವೂ ಶಾಕ್ ಆಗದೆ ತಕ್ಷಣ ಕೊಲೆ ಕೇಸಿನಿಂದ ಬಚಾವಾಗುವ ಯೋಚನೆ ಮಾಡಿದ್ದಾರೆ. ಇಬ್ಬರ ಶವಗಳನ್ನು ತಾಮಸಂದ್ರದ ಅರ್ಕಾವತಿ ನದಿ ದಂಡೆಯ ಬಳಿ ಸಾಗಿಸಿ ಸುಟ್ಟು ಬೂದಿ ಮಾಡಿದ್ದಾರೆ. ಆದರೆ ಈ ವಿಷಯ ಬೇಗನೆ ಹೊರಗೆ ಬಂತು.

ಕನಕಪುರ ಠಾಣೆಯಲ್ಲಿ ಈಗ ಪ್ರಕರಣ ದಾಖಲಾಗಿದೆ. ದೀಪಿಕಾಳ ಅಪ್ಪ ರಾಮಕೃಷ್ಣಯ್ಯ, ತಾಯಿ ಗೌರಮ್ಮ, ತಾತಾ ಮೂಗೇಗೌಡ, ನೆಂಟರಾದ ರಾಮಕೃಷ್ಣಯ್ಯ, ಪೊಲೀಸ್ ಚನ್ನವೀರೇಗೌಡ ಮುಂತಾದವರು ತಲೆ ಮರೆಸಿಕೊಂಡಿದ್ದಾರೆ. ಶಾಸಕ ಡಿ.ಕೆ. ಶಿವಕುಮಾರನ ಕಾಂಗ್ರೆಸ್ ಚೇಲಾಗಳು ಕೇಸನ್ನು ತಣ್ಣಗಾಗಿಸಲು ಮೊದಲು ಪ್ರಯತ್ನಿಸಿ ಈಗ ಸುಮ್ಮನಾಗಿದ್ದಾರೆ ಎಂದು ಜನ ಹೇಳುತ್ತಿದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಮಂಜುನಾಥ್ ಕೊಲೆ ಆರೋಪಿಗಳನ್ನು ಹಿಡಿಯಲು ನಾಲ್ಕು ಟೀಮ್‌ಗಳನ್ನು ರಚಿಸಿದ್ದಾರೆ. ದೀಪಿಕಾ ಹಾಗೂ ಮಗು

ಖಾಪ್ ಪಂಚಾಯತಿಗಳು ಹಾಗೂ ಮರ್ಯಾದಾ ಹತ್ಯೆಗಳು



ಮರ್ಯಾದಾ ಹತ್ಯೆ ವಿರುದ್ಧ ಪ್ರತಿಭಟನೆ

ಕುಟುಂಬದ ಮರ್ಯಾದೆ ಹಾಗೂ ಜಾತಿ ಕಾರಣಗಳಿಂದ ಹೆಣ್ಣು ಮಕ್ಕಳನ್ನು ಕೊಲ್ಲುವ ಹೀನ ಪ್ರವೃತ್ತಿಯೊಂದು ಭಾರತದ ಉದ್ದಗಲಕ್ಕೂ ಮತ್ತೆ ಸಾಂಸ್ಥಿಕ ರೂಪ ಪಡೆದುಕೊಳ್ಳಲಾರಂಭಿಸಿದೆ. ಹರಿಯಾಣ, ಉತ್ತರ ಪ್ರದೇಶ, ಪಂಜಾಬ್ ಮುಂತಾದೆಡೆ ಡಜನ್‌ಗಟ್ಟಲೆ ಮರ್ಯಾದಾ ಹತ್ಯೆಯ ಪ್ರಕರಣಗಳು ವರದಿಯಾಗುತ್ತಿವೆ. ದೆಹಲಿಯ ಡೆಮಾಕ್ರೆಟಿಕ್ ವುಮೆನ್ಸ್ ಅಸೋಸಿಯೇಷನ್‌ರವರ ಅಂದಾಜಿನ ಪ್ರಕಾರ ಪ್ರತಿ ವರ್ಷ ಒಂದು ಸಾವಿರಕ್ಕೂ ಹೆಚ್ಚು ಮಹಿಳೆಯರನ್ನು ಹೀಗೆ ಕೊಂದು ಹಾಕಲಾಗುತ್ತಿದೆ. ಇತ್ತೀಚೆಗೆ ಉತ್ತರ ಭಾರತದಲ್ಲಿ ಖಾಪ್ ಪಂಚಾಯತ್‌ಗಳು ಸಕ್ರಿಯವಾಗಿವೆ. ಮಹಿಳೆಯರ ಬದುಕನ್ನು ಕಂದಾಚಾರದ, ಜಾತಿ ಹಾಗೂ ಆರ್ಥಿಕ ಪರಾವಲಂಬನೆಯ ಚೌಕಟ್ಟಿನೊಳಗೇ ಇರಿಸಲು ಇವು ಪ್ರಯತ್ನಿಸುತ್ತಿವೆ. ಮದುವೆಯ ಘಟ್ಟ ಅದರಲ್ಲಿ ಪ್ರಮುಖವಾದದ್ದು. ಹೆಣ್ಣೊಬ್ಬಳು ತನ್ನ ಸಂಗಾತಿಯನ್ನು ಸ್ವತಂತ್ರವಾಗಿ ಆರಿಸಿಕೊಂಡ ತಕ್ಷಣವೇ ಅಂತವರ ವಿರುದ್ಧ ನಾನಾ ರೀತಿಯ ದಾಳಿಗಳು ಶುರುವಾಗುತ್ತವೆ. ಹೆಣ್ಣನ್ನು ಬೆದರಿಸುವ, ಶಿಕ್ಷಿಸುವ, ಸಂಗಾತಿಗಳಿಬ್ಬರನ್ನು ಹೊಡೆದು ಕೊಲ್ಲುವವರೆಗೂ ಘಟನೆಗಳು ನಡೆಯುತ್ತಿವೆ.



ಬಹುತೇಕ ಮರ್ಯಾದ ಹತ್ಯಾ ಪ್ರಕರಣಗಳಲ್ಲಿ ಹೆಣ್ಣಿನ ಅಪ್ಪ-ಅಮ್ಮ-ಸೋದರರೇ ಅಂದರೆ ಕುಟುಂಬದವರೇ ಮುಂದೆ ನಿಂತು ಕೊಲೆಗಳನ್ನು ನಡೆಸುತ್ತಿದ್ದಾರೆ. ಹರಿಯಾಣಾದ ಖಾಪ್ ಪಂಚಾಯತಿಗಳಂತೂ ಪೊಲೀಸು, ಕೋರ್ಟ್‌ಗಳನ್ನು ಲೆಕ್ಕಿಸದೆ ಪುಂಡಾಟಿಕೆ ನಡೆಸುತ್ತಿವೆ. ಪಕ್ಕದ ತಮಿಳುನಾಡಿನ ಶಿವಗಂಗಾದಲ್ಲಿ ಮೇಘಾಲ ಎಂಬಾಕೆ ಶಿವಕುಮಾರ್ ಎಂಬ ಅನ್ಯ ಜನಾಂಗದ ಯುವಕನನ್ನು ಪ್ರೀತಿಸಿ ಮದುವೆಯಾದದ್ದನ್ನು ಘೋರ ಅವಮಾನವೆಂದು ಭಾವಿಸಿದ ಆಕೆಯ ತಂದೆ-ಸೋದರರು ಶಿವಕುಮಾರ್‌ನನ್ನು ಹಿಡಿದು ಬಡಿದು ಕೊಂದ ಘಟನೆ ಆಗಿದೆ. ಜಾರ್ಖಂಡ್‌ನಲ್ಲಿ ನಿರುಪಮಾ ಎಂಬ ಬ್ರಾಹ್ಮಣ ಜಾತಿಗೆ ಸೇರಿದ್ದ ಪತ್ರಕರ್ತೆ ಅನ್ಯಜಾತಿಯ ಯುವಕನನ್ನು ಪ್ರೀತಿಸಿದ್ದಕ್ಕೆ ರೊಚ್ಚಿಗೆದ್ದ ಮನೆಯವರು ನಿರುಪಮಾಳನ್ನೇ ಕೊಂದು ಹಾಕಿದ್ದರು. ಸರ್ಕಾರ ಈ ಖಾಪ್ ಪಂಚಾಯತ್‌ಗಳ ಪುಂಡಾಟಿಕೆ ನಿಯಂತ್ರಿಸಲು ಹಿಂದೂ ವಿವಾಹ ಕಾಯ್ದೆಯ ನಿಯಮಗಳನ್ನು ಸರಿಪಡಿಸುವ ಕ್ರಮ ತೆಗೆದುಕೊಳ್ಳಬೇಕಿದೆ. ಖಾಪ್ ಪಂಚಾಯತ್‌ಗಳನ್ನು ಸಮರ್ಥಿಸಿಕೊಳ್ಳುವ ಸಂಸದ ನವೀನ್ ಜಿಂದಾಲ್ ತರದವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕಿದೆ.



ತ್ತುಂಬುವನ್ನು ತಿಳಿಯಲು ಆರೋಪಿಗಳ ಹೇಳಿಕೆಗಳು ಗಂಡ ವೆಂಕಟೇಶನ ಹೇಳಿಕೆಯೇ ಈಗ ಮುಖವಾಗಿದೆ. ಹತ್ಯೆಗೀಡಾದವರ ಶವಗಳೇ ಸಿಗದೆ ಕಾರಣ ಕನಕಪುರ ಪೊಲೀಸರು ಇದನ್ನು ಒಂದು ಲಿ ಪ್ರಕರಣದಂತೆ ಹ್ಯಾಂಡಲ್ ಮಾಡಕೂಡದು. ಜೀವಕ್ಕಿಂತ ಜಾತಿ ಅಹಂಕಾರವೇ ಮುಖ್ಯ ಕೊಂಡಿರುವ ಈ ಕೊಲೆಪಾತಕರಿಗೆ ಶಿಕ್ಷೆಯಾಗ ದೆ ಪೊಲೀಸ್ ತನಿಖೆಯೂ ಆಧುನಿಕ ರೀತಿಯಲ್ಲೇ ಬೇಕಾಗುತ್ತದೆ. ಈಗಾಗಲೇ ರಾಜ್ಯ ಮಹಿಳಾ ಗವೂ ದೀಪಿಕಾಳ ಮರ್ಯಾದ ಹತ್ಯಾ ಕೇಸನ್ನು ಕಾನೂನು ಕ್ರಮ ಆರಂಭಿಸಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಗಮನ ಈ ಮರ್ಯಾದಾ ಹತ್ಯೆಯ ಘಟನಾವಳಿಗಳತ್ತ ತಿರುಗುವ ಸಾಧ್ಯತೆಗಳಿರುವುದರಿಂದ ಸರು ಉಡಾಫೆ ಮಾಡದೆ ಕೇಸನ್ನು ನಿರ್ವಹಿಸಬೇಕಿದೆ.

ಪಿಕಾಳ ತವರುಮನೆ ಕರಿಕಲ್‌ದೊಡ್ಡಿಯಾಗಲಿ ಅವಳು ಕೊಲೆಯಾದ ತಾಮಸಂದ್ರದಲ್ಲಾಗಲಿ ಮುಗಿದು ಹೋದಂತೆ ಮತ್ತೆ ಜನಜೀವನ ಎಂದಿನಂತೆ ತೆ ಕಾಣುತ್ತದೆ. ಜನ ಅವರವರ ಪಾಡಿಗೆ ತಮ್ಮ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಬಡತನ, ಕಷ್ಟಗಳ ಯೂ ಹಿಂದಿನಂತೆಯೇ ಮುಂದುವರೆದೇ ಇದೆ.

ಮುಗ್ಧ ತರುಣಿಯೊಬ್ಬಳನ್ನು ಹಾಗೂ ಒಂದು ಂದನನ್ನೇ ಕೊಲೆ ಮಾಡಿ ಸುಡುವ ಮಟ್ಟಿಗೆ ಈ ಜಾತಿ ಅಹಂಕಾರ ತುಂಬಿಕೊಂಡಿರುವುದು ಖೇದ ತ್ತಿದೆ.

ಆಸ್ತಿಗಾಗಿ ಮಗಳನ್ನೇ ಕೊಂದರೆ?

ಪಿಕಾಳ ಕುಟುಂಬಕ್ಕೆ ಏಳೆಂಟು ಎಕರೆಯಷ್ಟು ದೆ. ಒಂದು ಬೋರ್‌ವೆಲ್ ಕೂಡ ಇದೆ. ರಿನಿಂದ ಹೆಚ್ಚು ದೂರವಿರದ ಕಾರಣ ಜಮೀನಿಗೆ ಬೆಲೆಯೂ ಬಂದಿದೆ. ಏನಿಲ್ಲವೆಂದರೂ ಇವತ್ತಿನ ರೇಟಿನಲ್ಲಿ 1 ಕೋಟಿ ರೂಪಾಯಿ ಬೆಲೆಯ ಕುಟುಂಬದ್ದು. ರಾಮಕೃಷ್ಣಯ್ಯ-ಗೌರಮ್ಮ ಳಿಗೆ ದೀಪಿಕಾ ಹಾಗೂ ರಶ್ಮಿ ಎಂಬ ಇಬ್ಬರು ಮಕ್ಕಳೂ ರಾಜೂ ಎಂಬ ಮಗನೂ ಇದ್ದಾನೆ.

ಪಿಕಾ ಯಾವಾಗ ಉಪ್ಪಾರರ ಬಡ ಹುಡುಗ ನನ್ನು ಮದುವೆಯಾಗಲು ಮನೆಬಿಟ್ಟು ಹೋದಳೋ ಲೇ ಅವಳ ಅಪ್ಪ ಅಮ್ಮ ಆಸ್ತಿಯ ಬಗ್ಗೆಯೂ ದ್ದಾರೆ. ಅದು ಹೇಗೆಂದರೆ ಮದುವೆಯ ನಂತರ ಬಾರಿಗೆ ತವರಿಗೆ ಬಂದಿದ್ದ ದೀಪಿಕಾಳಿಂದ ಮು ಬಯಸಿದ್ದೇ 'ಆಸ್ತಿ ಬೇಡ' ಎನ್ನುವ ಮುಚ್ಚಳಿಕೆ ಕೊಡಬೇಕೆಂಬುದು. ದೀಪಿಕಾ ಅವರ ಇಚ್ಛೆಯಂತೆ ಬರೆದುಕೊಟ್ಟ ನಂತರವೂ ಅಪ್ಪ ಅಮ್ಮನಿಗೆ ನವಾಗಿಲ್ಲ. ಮದುವೆಯ ವಿಚಾರದಲ್ಲಿ ತಮ್ಮ ಗೆ ಸಿಗದೆ ಹೋದ ಮಗಳು ನಾಳೆ ಆಸ್ತಿಯ ಬರದೇ ಇರುತ್ತಾಳೆಯೇ ಎನ್ನುವ ಶಂಕೆಯೂ ಬಂದಿದೆ. ಈ ರೀತಿಯ ಫ್ಯೂಡಲ್ ಯೋಚನೆಗಳಿಗೆ ನೀಡುವ ವೆಂಕಟೇಶಪ್ಪ, ಚನ್ನವೀರೇಗೌಡ ರು. ಜೊತೆಗೆ ದೀಪಿಕಾಳ ನೆಂಟರಿಷ್ಟರೆಲ್ಲಾ ಲ್ಲೇ ಕೊಟ್ಟು ತರುವ ಮದುವೆಗಳನ್ನು ಳುತ್ತಾ ಬಂದಿದ್ದವರು. ಬಹುಶಃ ದೀಪಿಕಾ ಒಬ್ಬಳೇ ತ್ತ ಸಂಬಂಧಿಯಲ್ಲದ, ತನ್ನ ಜಾತಿಗೂ ಸೇರಿರದ ನ್ನು ಇಷ್ಟಪಟ್ಟು ಮದುವೆಯಾದವಳು. ತಮ್ಮ ದಾಟಿ, ಜಾತಿಯ ಚೌಕಟ್ಟನ್ನು ಲೆಕ್ಕಿಸದೆ ದೀಪಿಕಾ ದುಕನ್ನು ಕಟ್ಟಿಕೊಳ್ಳಲು ಬಯಸಿದ್ದೇ ಈಗ ಅವಳ ಕಾರಣವಾಗಿದೆ.

ಯು ಭೂತ ಹೀಗೆ ತನ್ನ ಬೆನ್ನು ಹತ್ತಿ ಬರುತ್ತದೆಂಬ ಗೆ ಹೇಗೆ ತಾನೆ ಬಂದೀತು. ಆಸ್ತಿಯ ಲೆಕ್ಕಾಚಾರಗಳ ನ್ನು ತನ್ನ ಕೊಲೆಗೆ ಪ್ರೇರೇಪಿಸಬಹುದೆಂಬ ಯಾದರೂ ದೀಪಿಕಾಗೆ ಬರಲು ಸಾಧ್ಯವಿರಲಿಲ್ಲ. ಗಾದರೂ ಅಷ್ಟೆ. 'ಲಂಕೇಶ್'ನೊಂದಿಗೆ ಡುತ್ತಾ ಆತ "ಸಾರ್, ಅವರು ನನ್ನ ಸಾಯ್ಸೋಕೆ ದೆ ಅಂತ ಗೊತ್ತಿತ್ತು, ಆದ್ರೆ ನಾನು ಊರಲ್ಲೇ ಇದ್ದಾ ಷ್ಟು ಜನ ದೀಪೂನ ಹಿಂಗೆ ಹೊಡ್ಕಾಕ್ತಾರೆ ರಿರ್ಲಿಲ್ಲ ಸಾರ್" ಅಂದ.

ಕ್ಕ ಪ್ರೀತಿಸಿದ ಹೆಂಡತಿಯನ್ನು ಹಾಗೂ ತನ್ನ ನನ್ನು ಕಳೆದುಕೊಂಡಿರುವ ವೆಂಕಟೇಶ್ 'ಸನ್ ಟಿವ್ ಪವರ್ ಮಾಡಿದ್ದೂಂತ ಕುತ್ತಿಗೆ ಹಿಸುಕಿ ತ್ತಿದಾರೆ. ಅವಳು ನನ್ ನಂಬಿ ಬಂದ್ಲು, ಉಳಿಸ್ಕೊಳ್ಳೋಕಾಗ್ಲಿಲ್ಲ ಸಾರ್. ನಾನೂ ಹೇಳು ಅಪ್ಪಿತ್ತು" ಎಂದು ಗೋಳಾಡುತ್ತಿದ್ದಾನೆ. ಳಿಕೆ, ಹೊಣೆ ಯಾರು?

ರೇಣುಕಾ ಶುಗರ್ಸ್ ಪಾಪದಲ್ಲೂ ಸಿಎಂಗೆ ಪಾಲು!



ಸಕ್ಕರೆ ರಾಣಿಯೊಬ್ಬಳನ್ನು ಬಚಾವು ಮಾಡಲು ಯಡ್ಡಿ ಸರ್ಕಾರ ಮಾನಗೆಟ್ಟ ಕಾರ್ಯಾಚರಣೆಯೊಂದಕ್ಕೆ ಕೈಹಾಕಿದೆ. ಒಂದಲ್ಲ ಎರಡಲ್ಲ ಸರಿಸುಮಾರು 30 ಸಾವಿರ ಕೆ.ಜಿ.ಗಳಷ್ಟು ಕಳಪೆ ಸಕ್ಕರೆಯನ್ನು ಏನಾದರೂ ಮಾಡಿ ಬಡಬಗ್ಗರ ಬಾಯಿಗೆ ಹಾಕಿಬಿಟ್ಟರೆ ಒಂದು ಪಾಪವನ್ನೂ ಮುಚ್ಚಿ ಹಾಕಿದಂತಾಗುತ್ತದೆ ಮತ್ತು ಕರ್ನಾಟಕದ ಅತ್ಯಂತ ಪ್ರಭಾವಿ ಸಕ್ಕರೆ ರಾಣಿಯೊಬ್ಬಳ ಋಣವನ್ನೂ ತೀರಿಸಿದಂತಾಗುತ್ತದೆ.

ಸದ್ಯ ಮಾಗಡಿ ರಸ್ತೆಯ ಹೌಸಿಂಗ್ ಬೋರ್ಡ್‌ನ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಗೋಡೌನಿನಲ್ಲಿ ಜೋಡಿಸಲ್ಪಟ್ಟ ಮುನ್ನೂರು ಚೀಲಗಳಷ್ಟು ವಿಷಪೂರಿತ ಸಕ್ಕರೆ ಮತ್ತು ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರೊಂದು ಸದ್ದಿಲ್ಲದೆ ಮುಚ್ಚಿಹೋಯಿತೆಂದರೆ; ಶುಗರ್ ಲಾಬಿಯ ಋಣವನ್ನು ಯಡ್ಡಿ ಸರ್ಕಾರ ತೀರಿಸಿದಂತಾಗುತ್ತದೆ. ಅದಕ್ಕೆ ಪ್ರತಿಯಾಗಿ ರಾಯಭಾಗದ ಸಕ್ಕರೆ ರಾಣಿ ವಿದ್ಯಾ ಮರಕುಂಬಿ ಮತ್ತು ಆಕೆಯ ಪುತ್ರ ನರೇಂದ್ರ ಮರಕುಂಬಿಯಿಂದ ಯಡ್ಡಿಗೆ ಗಿಫ್ಟು, ಕಪ್ಪ, ಕಮೀಶನ್ ಎಲ್ಲವೂ ಸಂದಾಯ ವಾಗುತ್ತದೆ.

ಗಿಫ್ಟಿನ ಬೆಲೆ ಎಷ್ಟು ಕೋಟಿಯೋ? ಅದು ಯಡ್ಡಿ ಅಥವಾ ಕರಂದ್ಲಾಜೆಯಷ್ಟೇ ಬಾಯಿಬಿಡಬೇಕಾದ ಸತ್ಯ.

ಅದು ಒಂದಲ್ಲ ಎರಡಲ್ಲ ಸರಿಸುಮಾರು 30 ಸಾವಿರ ಕೆ.ಜಿ.ಗಳಷ್ಟು ಕಳಪೆ ಸಕ್ಕರೆ. ಆಯಾ ಸಕ್ಕರೆ ಕಾರ್ಖಾನೆಗಳಿಂದ ಲೇವಿ ರೂಪದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಗೋಡೌನುಗಳಿಗೆ ಬರುವ ಲೋಡುಗಟ್ಟಲೆ ಸಕ್ಕರೆ ಕ್ರಮೇಣ ನ್ಯಾಯಬೆಲೆ ಅಂಗಡಿಗಳ ಮೂಲಕ ರೇಷನ್ ಕಾರ್ಡುದಾರರನ್ನು ಮುಟ್ಟುತ್ತದೆ. ಈ ರೀತಿ ರಾಯಭಾಗದ ರೇಣುಕಾ ಶುಗರ್ಸ್ ಫ್ಯಾಕ್ಟರಿಯಿಂದ ಬನಶಂಕರಿಯ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಗೋಡೌನಿಗೆ ಸರಿಸುಮಾರು 600 ಮೂಟೆಗಳಷ್ಟು ಸಕ್ಕರೆ ಬಂದಿದ್ದು 2010 ಅಕ್ಟೋಬರ್ 13 ರಂದು. ಬೆಂಗಳೂರು ಉತ್ತರ ವಲಯಕ್ಕೆಂದು ಬಂದಿದ್ದ ಇಷ್ಟೂ ಸಕ್ಕರೆಯನ್ನು ಆ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಿಗೆ ಸರಬರಾಜು ಮಾಡಬೇಕಿತ್ತು.



ಆದರೆ ಬಂದಿದ್ದ ಸಕ್ಕರೆ ಕಳಪೆಯಾಗಿತ್ತು; ಕಂದು ಬಣ್ಣಕ್ಕಿದ್ದ ದುರ್ನಾತ ಬೀರುತ್ತಿದ್ದ; ಅಸಲಿಗೆ ಸಕ್ಕರೆಯ ಯಾವೊಂದು ಗುಣಲಕ್ಷಣವೂ ಇರದಿದ್ದ ಅದನ್ನು ದೋಷಪೂರಿತವೆಂದೇ ಲೆಕ್ಕಹಾಕಿದ ಗೋಡೌನಿನ ವ್ಯವಸ್ಥಾಪಕರು ತಿರಸ್ಕರಿಸಿಬಿಟ್ಟರು. ಹೀಗೆ ಬನಶಂಕರಿ ಗೋಡೌನಿನಲ್ಲಿ ತಿರಸ್ಕೃತಗೊಂಡ ಸಕ್ಕರೆಯ ಬದಲಿಗೆ ರೇಣುಕಾ ಶುಗರ್ಸ್ ಉತ್ತಮ ಗುಣಮಟ್ಟದ ಸಕ್ಕರೆಯನ್ನು ಪೂರೈಸಬೇಕಿತ್ತು. ಆದರೆ 30 ಸಾವಿರ ಕೆ.ಜಿಗಳಷ್ಟು ಸಕ್ಕರೆ ವಾಪಸಾಯಿತೆಂದರೆ ಅದು ಕಂಪೆನಿಗೆ ದೊಡ್ಡ ಮಟ್ಟದ ಲುಕ್ಸಾನಾಗುತ್ತದೆ. ಹೇಗಾದರೂ ಮಾಡಿ ಆ ಮೊತ್ತದ ಸಕ್ಕರೆಯನ್ನು ದಬಾಯಿಸಿ ಬಿಟ್ಟರೆ ಕಮ್ಮಿಯೆಂದರೂ 10 ಲಕ್ಷದಷ್ಟು ನಷ್ಟವಾಗುತ್ತದೆ.

ಅದಕ್ಕೆಂದು ರೇಣುಕಾ ಶುಗರ್ಸ್ ಬಳಸಿಕೊಂಡಿದ್ದು ಪಶ್ಚಿಮ ವಿಭಾಗದ ಅಂದರೆ ವಿಜಯನಗರದ ಸಗಟು ಮಳಿಗೆಯ ಗುಮಾಸ್ತ ಎಂ.ಸಿ.ಶ್ರೀನಿವಾಸ್ ಎಂಬಾತನನ್ನು. ಮಾಗಡಿರಸ್ತೆಯಲ್ಲಿ ಹೌಸಿಂಗ್ ಬೋರ್ಡ್ ಎದುರಿಗಿರುವ ಈ ಗೋಡೌನಿಗೆ ಮ್ಯಾನೇಜರ್ ಆಗಿದ್ದದ್ದು ಶಿವಣ್ಣ. ಶ್ರೀನಿವಾಸ್ ಮತ್ತು ಶಿವಣ್ಣ ಸೇರಿಕೊಂಡು ರೇಣುಕಾ ಶುಗರ್ಸ್‌ನ ತಿರಸ್ಕೃತಗೊಂಡಿದ್ದ ಅಷ್ಟೂ ಸಕ್ಕರೆಯನ್ನು ಏಕಾಏಕಿ ವಿಜಯನಗರದ ಗೋಡೌನಿಗೆ ಹಾಕಿಸಿಕೊಂಡರು. ಈ ಪೈಕಿ 300 ಚೀಲಗಳಷ್ಟನ್ನು ಕಾಮಾಕ್ಷಿಪಾಳ್ಯ, ಮಾಳಗಾಲ, ದಾಸರಹಳ್ಳಿ, ಸುಂಕದಕಟ್ಟೆ, ವಿಜಯನಗರದ ನ್ಯಾಯಬೆಲೆ ಅಂಗಡಿಗಳಿಗೆ ವಿತರಿಸಲಾಯ್ತು. ಇನ್ನೇನು ಉಳಿಕೆ ಸಕ್ಕರೆಯನ್ನು ನ್ಯಾಯಬೆಲೆ ಅಂಗಡಿಗಳಿಗೆ ಸಾಗಹಾಕಬೇಕೆನ್ನುವಷ್ಟರಲ್ಲಿ ಅನಾಹುತ ನಡೆದುಹೋಗಿತ್ತು.

ಯಾರ್‍ಯಾರು ನ್ಯಾಯಬೆಲೆ ಅಂಗಡಿಯಿಂದ ಕಳಪೆ ಸಕ್ಕರೆ ಕೊಂಡೊಯ್ದು ಕಾಫಿಗೋ, ಟೀಗೋ ಬಳಸಿದ್ದರೋ ಅಂಥ ಅನೇಕರಿಗೆ ಕುಡಿದಾಕ್ಷಣವೇ ತಲೆತಿರುಗಿ ಬಂದಂತಾಗಿತ್ತು, ಇನ್ನೂ ಕೆಲವರಿಗೆ ಕಣ್ಣೇ ಮಂಜಾಗಿ ವಾಂತಿ ಬೇಧಿ ಶುರುವಾಗಿತ್ತು. ಮರುದಿನವೇ ಈ ಬಗ್ಗೆ ಆಹಾರ ಮತ್ತು ನಾಗರಿಕ ಸರಬರಾಜಿನ ಇಲಾಖೆಗೆ ದೂರುಗಳು ಬರಲಾರಂಭಿಸಿತು. ಆಗ ಕಮೀಶನರಾಗಿದ್ದ ಶ್ರೀನಿವಾಸ್ ತಕ್ಷಣವೇ ವಿಜಯನಗರದ ಗೋಡೌನಿಗೆ ದಾಳಿ ನಡೆಸಿ ಸಕ್ಕರೆಯನ್ನು ಜಪ್ತಿ ಮಾಡಿ ವಿಚಾರಿಸಿದರೆ; ಬಂದ ಸಕ್ಕರೆಗೂ ಸಂಬಂಧಪಟ್ಟ ಗೋಡೌನಿಗೂ ಸಂಬಂಧವೇ ಇರಲಿಲ್ಲ.

ಬನಶಂಕರಿ ಗೋಡೌನಿನಲ್ಲಿ ತಿರಸ್ಕರಿಸಿದ್ದ ಸಕ್ಕರೆಯನ್ನು ವಿಜಯನಗರದ ಗೋಡೌನಿಗೆ ಸಾಗಿಸಿದ್ದೇ ತಪ್ಪಾಗಿತ್ತು. ಆಯಾ ಗೋಡೌನಿನವರು ತಮಗೆ ಸಂಬಂಧ ಪಟ್ಟ ಅಧಿಕಾರಿಯ ಮೂಲಕವೇ ನಿಗದಿತ ಸಕ್ಕರೆಯನ್ನು ಪಡೆಯಬೇಕೇ ಹೊರತು ಯಾರೋ ತಿರಸ್ಕರಿಸಿದ್ದನ್ನಲ್ಲ. ಹೀಗೆ ರೇಣುಕಾ ಶುಗರ್ಸ್ ಮತ್ತು ಸಕ್ಕರೆಯನ್ನು ಸಾಗಾಣಿಕೆ ಮಾಡಿಸಿದ್ದ ಬನಶಂಕರಿಯ ಅನ್ನಪೂರ್ಣೇಶ್ವರಿ ಟ್ರಾನ್ಸ್‌ಪೋರ್ಟ್‌ನ ಮಾಲಿಕ ಮಹೇಶ್‌ರ ಜೊತೆ ಕೈ ಜೋಡಿಸಿ ಕಳಪೆ ಸಕ್ಕರೆಯನ್ನು ತರಿಸಿಕೊಂಡವನು ಇದೇ ಗೋಡೌನಿನ ಕ್ಲರ್ಕ್ ಶ್ರೀನಿವಾಸ್. ಈತನ ಜೊತೆ ಡಿಪೊ ಮ್ಯಾನೇಜರ್ ಶಿವಣ್ಣನೂ ಶಾಮೀಲಾಗಿದ್ದ. ಕಮೀಶನರ್ ಶ್ರೀನಿವಾಸ್ ಆದೇಶದ ಮೇರೆಗೆ ಪಶ್ಚಿಮ ವಿಭಾಗದ ಡೆಪ್ಯೂಟಿ ಡೈರೆಕ್ಟರ್ ಜೆ.ಕೆ.ರಾಜಣ್ಣ ಕಳಪೆ ಸಕ್ಕರೆಯ ಸ್ಯಾಂಪಲ್ ಸಮೇತ ವಿಜಯನಗರ ಪೊಲೀಸ್ ಠಾಣೆಗೆ ದೂರು ಕೊಟ್ಟರು. ಡಿಪೋ ಗುಮಾಸ್ತ ಶ್ರೀನಿವಾಸನೇ ಇಡೀ ಪ್ರಕರಣದ ರೂವಾರಿಯಾಗಿದ್ದ. ಈತನನ್ನು ಕಮೀಶನರ್ ಶ್ರೀನಿವಾಸ್‌ರೇ ಸಸ್ಪೆಂಡ್ ಮಾಡಿದ್ದರು. ವಿಜಯನಗರ ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತು ಕಾಯ್ದೆಯನ್ವಯ ಈತನನ್ನೇ ಮೊದಲ ಆರೋಪಿಯನ್ನಾಗಿಸಿ ಎಫ್‌ಐಆರ್ ಹಾಕಲಾಗಿತ್ತು.

ಈ ಪ್ರಕಾರವೇ ವಿಜಯನಗರ ಪೊಲೀಸರು ಬಂಧಿಸಬೇಕಾದದ್ದು ರಾಯಭಾಗದ ರೇಣುಕಾ ಶುಗರ್ಸ್ ಒಡತಿ ವಿದ್ಯಾ ಮರಕುಂಬಿ ಮತ್ತು ಆಕೆಯ ಪುತ್ರ ನರೇಂದ್ರ ಮರಕುಂಬಿಯನ್ನು. ಅಷ್ಟರಲ್ಲೇ ಗುಮಾಸ್ತ ಶ್ರೀನಿವಾಸ್ ಮತ್ತು ಮ್ಯಾನೇಜರ್ ಶಿವಣ್ಣ ನಿರೀಕ್ಷಣಾ ಜಾಮೀನು ಪಡೆದಾಗಿತ್ತು. ಸಕ್ಕರೆಯ ಮಾದರಿಯನ್ನು ರಾಸಾಯನಿಕ ವಿಶ್ಲೇಷಣೆಗೆ ಕಳಿಸಲಾಗಿತ್ತು. ಇದು ಕಳಪೆ ಎಂಬ ಬಗ್ಗೆ ಪ್ರಯೋಗಾಲಯದ ವರದಿಯೂ ಬಂದಿತ್ತು. ವಿಜಯನಗರದ ಪೊಲೀಸ್ ಉತ್ತರ ಕರ್ನಾಟಕದ ಸಕ್ಕರೆ ದೈತ್ಯರಾದ ವಿದ್ಯಾ ಮರಕುಂಬಿ ಮತ್ತು ನರೇಂದ್ರ ಮರಕುಂಬಿಯನ್ನು ಇನ್ನೇನು ಹಿಡಿದು ಜೈಲಿಗೆ ಹಾಕುತ್ತಾರೆನ್ನುವಾಗಲೇ ಪೊಲೀಸರ ಪೌರುಷ ಠುಸ್ಸಾಗಿತ್ತು.


ನಿರಾಣಿ

ಸಕ್ಕರೆ ರಾಣಿ ವಿದ್ಯಾ ಮರಕುಂಬಿ ನೇರವಾಗಿ ಯಡ್ಡಿಯ ಗೃಹಕಚೇರಿಯಲ್ಲೇ ಠಿಕಾಣಿ ಹೂಡಿದ್ದಳು. ಈಕೆಯ ಶೋಕಿಲಾಲ ಮಗ ನರೇಂದ್ರ ಮರಕುಂಬಿ ಹೇಳಿ ಕೇಳಿ ಕೈಗಾರಿಕಾ ಮಂತ್ರಿ ನಿರಾಣಿಗೆ ಪರಮಾಪ್ತ. ಮುಂಬಯಿಯ ಸಮೀರವಾಡಿ ಶುಗರ್ಸ್‌ನ ಸೋಮಯ್ಯನಿಗೂ ಈತ ಖಾಸಾ ಸ್ನೇಹಿತ. ವಿದ್ಯಾ ಮರಕುಂಬಿ ಒಂದಾನೊಂದು ಕಾಲಕ್ಕೆ ಬೆಳಗಾವಿ ಸಂಸದ ಸಿದ್ನಾಳನಿಗೆ ಪರಮಾಪ್ತೆಯಾಗಿದ್ದಾಕೆ. ಸವದತ್ತಿಯಲ್ಲಿ ಸಿದ್ನಾಳರನ್ನು ಮುಂದಿಟ್ಟುಕೊಂಡೇ ರೇಣುಕಾ ಶುಗರ್ಸ್ ಫ್ಯಾಕ್ಟರಿ ತೆರೆದಳು. ಸಿದ್ನಾಳನ ಎಂಪಿಗಿರಿ ರದ್ದಾಗುತ್ತಿದ್ದಂತೆ ಆತನನ್ನು ರೇಣುಕಾ ಶುಗರ್ಸ್‌ನಿಂದಲೇ ಹೊರದಬ್ಬಿ ತಾನು ಇಡೀ ಫ್ಯಾಕ್ಟ್ರಿಗೆ ಒಡತಿಯಾದಳು. ಕ್ರಮೇಣ ಅಮರ್‌ಸಿಂಗ್ ಪಾಟೀಲ್ ಮತ್ತು ವಿ.ಎಲ್.ಪಾಟೀಲರು ಉಂಡು ದಿವಾಳಿಯೆಬ್ಬಿಸಿದ ರಾಯಭಾಗ್ ಶುಗರ್ಸ್‌ಗೆ ಕೈಯಿಟ್ಟಳು. ನಿಂತೇಹೋಗಿದ್ದ ರಾಯಭಾಗ್ ಶುಗರ್ಸ್ ಅನ್ನು ಮತ್ತೆ ಆರಂಭಿಸಿ ಮಹಾರಾಷ್ಟ್ರದ ಘಟಾನುಘಟಿ ಸಕ್ಕರೆ ದೊರೆಗಳನ್ನೆಲ್ಲ ಹಿಂದಿಕ್ಕಿ ದೇಶವಿದೇಶಗಳ ಸಕ್ಕರೆ ರಫ್ತಿಗೆ ಕೈಯಿಟ್ಟ ಮರಕುಂಬಿಗಳ ಕುಖ್ಯಾತಿ ರಾತ್ರೋರಾತ್ರಿ ವಿಸ್ತರಿಸಿತು.

ಅದೇನು ಯಡವಟ್ಟೋ ಅಥವಾ ದುರಾಶೆಯೋ ತನ್ನ ಫ್ಯಾಕ್ಟರಿಯ ಕಳಪೆ ಸಕ್ಕರೆಯನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಗೋಡೌನುಗಳಿಗೆ ಸಾಗಹಾಕುವ ದುಸ್ಸಾಹಸಕ್ಕೆ ಮರಕುಂಬಿ ದೊರೆಗಳು ಕೈಯಿಟ್ಟದ್ದು ಬೆಂಗಳೂರಿನಲ್ಲಿ ಬಯಲಾಗಿ ಹೋಗಿತ್ತು. ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಪ್ರಕರಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದರಿಂದ ಮರಕುಂಬಿಗಳಿಗಿದು ಮಂಗಳಾರದ ತುತ್ತಾಯಿತು. ಒಂದು ಹಂತದಲ್ಲಿ ಇಡೀ ಪ್ರಕರಣವನ್ನು ಮುಚ್ಚಿಹಾಕುವ ಷಡ್ಯಂತ್ರಕ್ಕೆ ಮರಕುಂಬಿಗಳು ಕೈಹಾಕಿದ್ದಾರೆ. ಮೊದಲು ಶೋಭಾ ಕರಂದ್ಲಾಜೆಯನ್ನು ಬುಟ್ಟಿಗೆ ಹಾಕಿಕೊಂಡು ಆನಂತರ ಯಡ್ಡಿಯ ಜೊತೆ ಡೀಲು ಕುದುರಿಸಿದ್ದಾರೆ.

ಒಮ್ಮೆ ಕಳಪೆ ಸಕ್ಕರೆಯ ಕೇಸ್‌ನಲ್ಲಿ ಮರಕುಂಬಿ ಹೆಸರು ಬಂತೆಂದರೆ ಸಹಜವಾಗೇ ಅದು ಅಂತರರಾಷ್ಟ್ರೀಯವಾಗಿ ಪೆಟ್ಟಾಗುತ್ತದೆ. ಕೋಟಿಗಟ್ಟಲೇ ಸಕ್ಕರೆ ವಹಿವಾಟಿನ ಮೇಲೂ ಪರಿಣಾಮ ಬೀರುತ್ತದೆ. ಕೈಗಾರಿಕಾ ಮಂತ್ರಿ ನಿರಾಣಿಯೇ ಆಸಕ್ತಿವಹಿಸಿ ಸಕ್ಕರೆ ದೊರೆಸಾನಿಯ ಪರ ಲಾಬಿಗಿಳಿದ ಮೇಲೆ ಕೇಸು ಹಳ್ಳ ಹಿಡಿಯದಿದ್ದರೆ ಹೇಗೆ?

2011ರ ಫೆಬ್ರವರಿ 15ರ ಹೊತ್ತಿಗೆ ವಿಜಯನಗರ ಪೊಲೀಸರ ವರ್ತನೆಯೇ ಬದಲಾಗಿತ್ತು. ಈ ಹಿಂದೆ ಕಳಪೆ ಸಕ್ಕರೆಯ ಮೂಲಕ್ಕೆ ಕೈಹಾಕಿದ್ದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಡೆಪ್ಯೂಟಿ ಡೈರೆಕ್ಟರ್ ರಾಜಣ್ಣ ತಮ್ಮ ವರಸೆಯನ್ನೇ ಬದಲಾಯಿಸಿ ರೇಣುಕಾ ಶುಗರ್ಸ್ ಮಾಲಿಕರ ಬದಲಿಗೆ ಸಕ್ಕರೆಯನ್ನು ತಮ್ಮ ಲಾರಿ ಮೂಲಕ ಸಾಗಿಸಿದ ಶ್ರೀ ಅನ್ನಪೂರ್ಣೇಶ್ವರಿ ಟ್ರಾನ್ಸ್‌ಪೋರ್ಟ್‌ನ ಮಾಲಿಕ ಮಹೇಶ್ ಮೇಲೆ ತಿರುಗಿಸಿದ್ದರು. ಇಲ್ಲಿ ಟ್ರಾನ್ಸ್‌ಪೋರ್ಟ್‌ನವರ ತಪ್ಪೇ ಇರಲಿಲ್ಲ. ರೇಣುಕಾ ಶುಗರ್ಸ್‌ನವರು ಹೇಳಿದಲ್ಲಿಗೆ ಸಕ್ಕರೆ ಮೂಟೆಗಳನ್ನು ಸಾಗಿಸುವುದಷ್ಟೇ ಲಾರಿಯವರ ಜವಾಬ್ದಾರಿಯಾಗಿತ್ತು.

ರೇಣುಕಾ ಶುಗರ್ಸ್ ಮತ್ತು ರಾಯಭಾಗ್ ಶುಗರ್ಸ್‌ನವರನ್ನು ಹೊಣೆ ಮಾಡುವ ಬದಲು ಇಡೀ ಪ್ರಕರಣವನ್ನು ಟ್ರಾನ್ಸ್‌ಪೋರ್ಟ್ ಕಂಪೆನಿಯ ಮೇಲೆ ಹೊರಿಸಲಾಯ್ತು. ಇದಕ್ಕೆ ಅನುಕೂಲವಾಗಲೆಂದು ಕಮೀಶನರ್ ಶ್ರೀನಿವಾಸ್‌ರನ್ನೇ ಎತ್ತಂಗಡಿ ಮಾಡಿ ಆ ಜಾಗಕ್ಕೆ ಪ್ರಸಾದ್‌ರನ್ನು ತರಲಾಯ್ತು. ಆಹಾರ ಮತ್ತು ನಾಗರಿಕ ಸರಬರಾಜು ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿದ್ದ ಹರೀಶ್‌ಗೌಡ ಇದರ ವಿರುದ್ಧ ಏನೆಲ್ಲಾ ಸೆಣಸಾಡಿದರೂ ನಿರಾಣಿ-ಕರಂದ್ಲಾಜೆ ತಾಕತ್ತಿನ ಮುಂದೆ ಏನೇನೂ ಪ್ರಯೋಜನವಾಗಲಿಲ್ಲ. ಇತ್ತ ಕಮೀಶನರ್ ಎತ್ತಂಗಡಿಯಾಗುತ್ತಿದ್ದಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವ್ಯವಸ್ಥಾಪಕ ನಿರ್ದೇಶಕ ಸಯ್ಯದ್ ಸಲೀಂ ಅಧೋನಿಯ ನಿಯತ್ತೇ ಬದಲಾಯಿತು. ಅದಕ್ಕೆ ಕಾರಣನಾದವನು ಜನರಲ್ ಮ್ಯಾನೇಜರ್ ಕುಮಾರ್.

ಯಾವ ಶ್ರೀನಿವಾಸ್ ಎಂಬ ಕ್ಲರ್ಕ್ ಕಳಪೆ ಸಕ್ಕರೆಯನ್ನು ತರಿಸಿಕೊಂಡಿದ್ದನೋ ಆತನನ್ನು ಮತ್ತೆ ಅದೇ ಜಾಗಕ್ಕೆ ತರುವುದು ಮ್ಯಾನೇಜರ್ ಕುಮಾರ್‌ನ ಉದ್ದೇಶವಾಗಿತ್ತು. ಒಮ್ಮೆ ಶ್ರೀನಿವಾಸ್ ಮಾಗಡಿರೋಡಿನ ಗೋಡೌನಿಗೆ ಕಾಲಿಟ್ಟನೆಂದರೆ ಈಗಾಗಲೇ ಅಲ್ಲಿ ಜಪ್ತಿ ಮಾಡಿ ಜೋಡಿಸಿಟ್ಟ ಕಳಪೆ ಸಕ್ಕರೆಯ ಮೂಟೆಗಳನ್ನೇ ರಾತ್ರೋರಾತ್ರಿ ನಾಪತ್ತೆ ಮಾಡಬಹುದು. ಹಿಂದಿದ್ದ ಕಮೀಶನರ್ ಜಪ್ತಿ ಮಾಡಿದ್ದ ಕಳಪೆ ಸಕ್ಕರೆ ಮೂಟೆಗಳನ್ನೂ ರಾತ್ರೋರಾತ್ರಿ ನಾಪತ್ತೆಯಾಗಿಸಬಹುದು.


ಇಂಥ ಲೆಕ್ಕ ಹಾಕಿಯೇ ಕ್ಲರ್ಕ್ ಶ್ರೀನಿವಾಸ್‌ನನ್ನು ಮತ್ತದೇ ಗೋಡೌನಿಗೆ ಹಾಕಿಸಿದ್ದಾನೆ ಮ್ಯಾನೇಜರ್ ಕುಮಾರ್. ಈ ಬಗ್ಗೆ ಆದೇಶವೂ ಹೊರಬಿದ್ದಿದೆ. ಒಮ್ಮೆ ಡ್ಯೂಟಿಗೆ ಬಂದು ಶ್ರೀನಿವಾಸ್ ಕುಳಿತನೆಂದರೆ ಅದರ ಮರುದಿನವೇ ಸಕ್ಕರೆ ಮೂಟೆಗಳು ನಾಪತ್ತೆಯಾಗುತ್ತವೆ. ಅಲ್ಲಿಗೆ ಇಡೀ ಪ್ರಕರಣದ ಮೂಲಸಾಕ್ಷ್ಯಗಳೇ ನಿರ್ನಾಮಗೊಂಡಂತಾಗುತ್ತದೆ.

ಇಲಾಖೆಯ ಅಧಿಕಾರಿಯೇ ಕೊಟ್ಟ ದೂರನ್ನು ಬದಲಾಯಿಸುವ ಮಂತ್ರಿ, ಉಲ್ಟಾ ಹೊಡೆಯುವ ಪೊಲೀಸರು, ಸಸ್ಪೆಂಡಾದವನಿಗೆ ಸಣ್ಣ ಶಿಕ್ಷೆಯೂ ಇಲ್ಲದೆ ಮತ್ತದೇ ಜಾಗಕ್ಕೆ ತರುವ ಇಲಾಖಾ ಮುಖ್ಯಸ್ಥರು; ಒಂದು ಪ್ರಕರಣವನ್ನು ಇಷ್ಟೊಂದು ರಾಜಾರೋಷವಾಗಿ ಮುಚ್ಚಿ ಹಾಕುವ ಸರ್ಕಾರವನ್ನು ಪ್ರಶ್ನಿಸುವವರ್‍ಯಾರು?

ನೂರಾರು ಜನಸಾಮಾನ್ಯರ ಜೀವದ ಜೊತೆ ಚೆಲ್ಲಾಡಿದ ಭ್ರಷ್ಟ ಅಧಿಕಾರಿಗಳು ಮತ್ತು ದುಷ್ಟ ಸಕ್ಕರೆ ದೊರೆಗಳಿಗೆ ಯಾವ ಶಿಕ್ಷೆಯೂ ಇಲ್ಲವೆ? ಜನರ ಜೀವಕ್ಕೆ ಬೆಲೆಯಿಲ್ಲವೆ?


• ಡಾ. ಸೋಮನಾಥ್

ಮಾಗಡಿ ರಸ್ತೆಯ ಗೋಡೌನು






ಮೈಸೂರು ವಿ.ವಿ. ಲೈಂಗಿಕ ಪ್ರಕರಣದ ಹಿಂದಿನ ಸತ್ಯ ಏನು?



ಇಡೀ ಭಾರತಲ್ಲಿನ ವಿಶ್ವವಿದ್ಯಾಲಯಗಳಲ್ಲಿಯೇ ಹೆಸರಿರುವ, ಕರ್ನಾಟಕದಲ್ಲಿ ಮೊತ್ತಮೊದಲು ಸ್ಥಾಪನೆಯಾದ ಮೈಸೂರು ವಿಶ್ವವಿದ್ಯಾಲಯ ಈಗ ಕಳಂಕ ಮೆತ್ತಿಕೊಂಡಿದೆ. ಶಿಕ್ಷಣದ ಗುಣಮಟ್ಟ, ಕ್ಯಾಂಪಸ್ ನಿರ್ವಹಣೆ, ಪ್ರಗತಿಪರ ಹೋರಾಟಗಳಿಗೆ ಹೆಸರಾಗಿದ್ದ ಮೈಸೂರು ವಿವಿಗೆ ಬರುತ್ತಿರುವ ಕುಲಪತಿಗಳು ಹಗರಣ ಸೃಷ್ಟಿಸುವುದು ವಾಡಿಕೆಯಂತಾಗಿದೆ. ಇದರಲ್ಲೂ ನಾಡಿನ ಖ್ಯಾತ ಸಾಹಿತಿಗಳಲ್ಲೊಬ್ಬರೆನಿಸಿಕೊಂಡಿದ್ದ ದೇ. ಜವರೇಗೌಡ ಮತ್ತು ಅವರ ಕುಲಪುತ್ರ ರತ್ನಾಕರ ಶಶಿಧರ್ ಪ್ರಸಾದ್ ಮಾಡಿಟ್ಟ ಯಡವಟ್ಟುಗಳು, ಹಗರಣಗಳು ಹಸಿಯಾಗಿರುವ ಬೆನ್ನ ಹಿಂದೆಯೇ ಲೈಂಗಿಕ ಪ್ರಕರಣ ಗರಿಬಿಚ್ಚಿಕೊಂಡಿದೆ. ಈ ಘಟನೆಯನ್ನ ರಾಜಕೀಯಗೊಳಿಸುತ್ತಾ, ಜಾತಿಯನ್ನ ಬೆರೆಸುತ್ತಾ ಮತ್ತು ಮಾಧ್ಯಮಗಳಲ್ಲಿ ಬ್ರೇಕಿಂಗ್ ನ್ಯೂಸ್ ಆಗಿಸುತ್ತಾ ಮೈಸೂರು ವಿವಿಯ ಅಂಗಳ ವೀಗ ವಿವಾದದ ಹುತ್ತವಾಗಿದೆ.



ಬಾಂಬು ಸಿಡಿಸಿದ ಸರಿತಾ!

ಎಂ.ಸರಿತಾ ಎಂಬ ಸಂಶೋಧನಾ ವಿದ್ಯಾರ್ಥಿನಿ ಮೊನ್ನೆ ಹೊಸ ಬಾಂಬ್ ಸಿಡಿಸಿದ್ದಾಳೆ. ಅದು ತನ್ನ ಪಿಎಚ್‌ಡಿ ಮಾರ್ಗದರ್ಶಕ ಪ್ರೊ.ಶಿವಬಸವಯ್ಯ ತನ್ನ ಮೇಲೆ ಲೈಂಗಿಕ ದೌರ್ಜನ್ಯಕ್ಕೆ ಪ್ರಯತ್ನಿಸಿದ್ದಾರೆಂಬ ಬಾಂಬ್. ಈ ಪ್ರಕರಣದ ಹಿಂದಿನ ಕಾಣದ ಕೈಗಳ ತಂತ್ರಗಳು, ಜಾತಿಲಾಬಿಗಳು, ರಾಜಕೀಯ ಪ್ರವೇಶ, ಸರಿತಾ ಗಂಡ ಡಾ.ವಿಜಯ್‌ಕುಮಾರ್ ಮಾಧ್ಯಮಗಳ ಮುಂದೆ ನಡೆದುಕೊಳ್ಳುತ್ತಿರುವ ರೀತಿಗಳು ಎಲ್ಲವೂ ಸಹ ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿವೆ.


ಸರಿತಾ ಮೈಸೂರಿನ ವಿಜಯನಗರದವಳಾದರೆ ಆಕೆಯ ಗಂಡ ಡಾ.ವಿಜಯ್‌ಕುಮಾರ್ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಕ್ರಾಸ್‌ನವ. ಇವರಿಬ್ಬರೂ ಮೊದಲಿಗೆ ಮೈಸೂರಿನ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಪರಿಚಿತರಾಗಿ ಪ್ರೇಮ ಅಂಕುರಿಸಿತು. ಜಾತಿಯ ಕಾರಣಕ್ಕೆ ಇಬ್ಬರ ಮನೆಗಳಲ್ಲಿ ವಿರೋಧವಿದ್ದರೂ ಮದುವೆಯಾದರು. ನಂತರ ಈ ದಂಪತಿಗಳು ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಲಾರಂಭಿಸಿದರು.

ಅದಾಗಲೇ ಡಾಕ್ಟರೇಟ್ ಪಡೆದಿದ್ದ ವಿಜಯ್ ತನ್ನ ಹೆಂಡತಿಯೂ ಡಾಕ್ಟರೇಟ್ ಪದವಿ ಪಡೆದರೆ ಉತ್ತಮ ಸಂಬಳದ ಕೆಲಸ ಸಿಗುತ್ತದೆ ಎಂಬ ಆಶೆಯಿಂದ ಆಕೆಯನ್ನ ಪಿಎಚ್‌ಡಿಗೆ ಸೇರಿಸಲು ತೀರ್ಮಾನಿಸಿದರು. ಆಗ ಪರಿಚಯವಾದ ಶಿವಬಸವಯ್ಯ ಸಹಜವಾಗಿ ಮೈಸೂರು ವಿವಿಯಲ್ಲೇ ಪಿಹೆಚ್‌ಡಿ ಮಾಡಿ ಎಂದಿದ್ದಾರೆ. ಹಾಗೆಯೇ ಯುಜಿಸಿಯ ನೆಟ್ ಎಕ್ಸಾಂ ಬರೆದಿದ್ದರಿಂದ ಫೆಲೋಶಿಪ್ ಸಹ ಸಿಕ್ಕಿದೆ. ನಂತರ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಪಿಎಚ್‌ಡಿಗೆ 2010ರಲ್ಲಿ ಸೇರಿದ್ದಾಗಿದೆ.

ಸರಿತಾಳ ಪ್ರಕಾರ ವಿಭಾಗದ ಮುಖ್ಯಸ್ಥ ಶಿವಬಸವಯ್ಯ ಆಗಾಗ ಪಾರ್ಟಿ ಕೊಡು ಎಂದು ಪೀಡಿಸುತ್ತಿದ್ದನಂತೆ. ನಂತರ ತನ್ನ ಪತಿ ವಿಜಯ್ ಜೊತೆ ಪಾರ್ಟಿಯನ್ನೂ ಸಹ ಕೊಡಿಸಲಾಯಿತಂತೆ. ನಂತರ ತನ್ನ ಜೊತೆ ಸಹಕರಿಸಿದರೆ ಪಿಎಚ್‌ಡಿ ಸಲೀಸಾಗಿ ಕೊಡಿಸುತ್ತೇನೆಂದು ಪದೇಪದೆ ಶಿವಬಸವಯ್ಯ ಪದೇಪದೆ ಹೇಳುತ್ತಿದ್ದನಂತೆ. ಇದು ಅತಿರೇಕಕ್ಕೆ ಹೋಗಿದ್ದರಿಂದ ತನ್ನ ಪತಿಗೆ ವಿಚಾರ ತಿಳಿಸಿ ಕುಲಪತಿ ತಳವಾರ್ ಬಳಿ ದೂರು ನೀಡಿದ್ದರೂ, ಆರೋಪಿ ಶಿವಬಸವಯ್ಯನ ಮೇಲೆ ಕ್ರಮ ಕೈಗೊಂಡು ತನಗೆ ನ್ಯಾಯವನ್ನ ಕೊಡಿಸಲಿಲ್ಲ, ಅದಕ್ಕೆ ತಾನು ನಿದ್ರೆ ಮಾತ್ರೆ ಸೇವಿಸಿ ಸಾಯಲು ಪ್ರಯತ್ನಿಸಿದ್ದಾಗಿ ಸರಿತಾ ಹೇಳುತ್ತಾಳೆ.

ಯಾವುದೇ ವಿದ್ಯಾರ್ಥಿನಿ ತನ್ನ ಶೀಲದ ವಿಚಾರದಲ್ಲಿ ಸುಮ್ಮನೆ ಸುಳ್ಳು ಹೇಳಲು ಇಷ್ಟಪಡುವುದಿಲ್ಲ, ಘಟನೆ ನಡೆದರೂ ಮಾನಕ್ಕೆ ಅಂಜಿ ಸತ್ಯವನ್ನ ಮುಚ್ಚಿಕೊಂಡಿರುವ ಪ್ರಕರಣಗಳು ಸಾಕಷ್ಟಿವೆ. ಆದರೆ ಶಿವಬಸವಯ್ಯನ ಮೇಲೆ ಇದು ಮೊದಲನೆ ಆರೋಪ. ಇಂತಹ ಸಂದರ್ಭದಲ್ಲಿ ಹಲವು ಜನರು ಹಲವು ಅಭಿಪ್ರಾಯಗಳನ್ನ ಹೇಳುತ್ತಿದ್ದಾರೆ. ಶಿವಬಸವಯ್ಯ ಅಂತಹ ವ್ಯಕ್ತಿಯಲ್ಲ, ಆತ ದಲಿತ ಎನ್ನುವ ಕಾರಣಕ್ಕೆ ಹೀಗೆ ಮಾಡುತ್ತಿದ್ದಾರೆ ಎನ್ನುವವರೂ ಇದ್ದಾರೆ. ಇಂತಹ ಘಟನೆಗಳು ನಡೆದಾಗ ದಲಿತ ಮತ್ತು ಮಹಿಳೆ ಎನ್ನುವ ಶಸ್ತ್ರ ಮತ್ತು ಪ್ರತಿ ಶಸ್ತ್ರಗಳನ್ನ ಜಳಪಿಸಿ ತಪ್ಪಿತಸ್ಥರು ಶಿಕ್ಷೆಯಿಂದಲೇ ತಪ್ಪಿಸಿಕೊಳ್ಳುತ್ತಿದ್ದಾರೆ. ಈತ ತಪ್ಪಿತಸ್ಥ ಎಂದರೆ ಖಂಡಿತವಾಗಿಯೂ ಶಿಕ್ಷೆಯಾಗಬೇಕಿದೆ.

ಆದರೆ ಸಚಿವ ರಾಮದಾಸ್ ಮತ್ತು ವಿಧಾನ ಪರಿಷತ್ತಿನ ಉಪಸಭಾಪತಿ ವಿಮಲಾ ಗೌಡ ತಮ್ಮ ಜವಾಬ್ದಾರಿಯನ್ನು ಮರೆತು ಒಂದು ಶಿಕ್ಷಣ ಸಂಸ್ಥೆಯ ಮೇಲೆ ಮಾತಾಡುವಾಗ ಕನಿಷ್ಠ ಪ್ರಜ್ಞೆಯನ್ನು ಇಟ್ಟುಕೊಳ್ಳದೆ ತಲೆಬುಡ ಗೊತ್ತಿಲ್ಲದೆ 'ಅಂಗಾಂಗವನ್ನ ಕತ್ತರಿಸಿ, ವಿವಿಯಿಂದ ಒದ್ದೋಡಿಸಿ' ಎಂದು ಆರೋಪ ಸಾಬೀತಾಗುವ ಮುನ್ನವೇ ಮಾತಾಡಿರುವುದು ಬಿಜೆಪಿಯವರ ಸಂಸ್ಕೃತಿಯನ್ನ ಎತ್ತಿ ತೋರಿಸುತ್ತದೆ. ಇವರು ಎಬಿವಿಪಿಗಳಿಗೆ ಫರ್ಮಾನು ಹೊರಡಿಸಿ ಈ ಘಟನೆಯನ್ನ ಬೀದಿಗೆ ತಂದು ಜಾತಿಯ ಬಣ್ಣ ಹಚ್ಚಿ ಪರ-ವಿರೋಧಗಳ ಪ್ರತಿಭಟನೆ ನಡೆಯುವಂತೆ ಮಾಡಿದ್ದೀಗ ಬಹಿರಂಗ ಸತ್ಯ.




ತಳವಾರ್ ಜಾತಿವಾದಿಯೇ?

ಮೈಸೂರು ವಿವಿಯ ಕುಲಪತಿ ವಿ.ಜಿ. ತಳವಾರ್ ಜಾತಿವಾದಿ ಅಲ್ಲದಿದ್ದರೆ ಶಿವಬಸವಯ್ಯನ ಮೇಲೆ ಯಾಕೆ ಕ್ರಮ ತೆಗೆದುಕೊಳ್ಳಲಿಲ್ಲ ಅಂತೆಲ್ಲಾ ಪ್ರಶ್ನೆಗಳು ಹುಟ್ಟಿಕೊಂಡಿವೆ. ಆದರೆ ತಳವಾರ್‌ರನ್ನು ಹತ್ತಿರದಿಂದ ಬಲ್ಲವರು ಹೇಳುವುದೇ ಬೇರೆ. ತಳವಾರ್ ಮೂಲತಃ ದಲಿತ, ಅದರಲ್ಲೂ ಎಡ ಸಮುದಾಯದ ಹಿನ್ನೆಲೆಯಿರುವ ವ್ಯಕ್ತಿಯಾದರೂ ಜಾತಿವಾದಿಯಾಗಲೀ, ದುಷ್ಟನಾಗಲೀ, ಭ್ರಷ್ಟನಾಗಲೀ ಅಲ್ಲ ಎನ್ನುವವರೂ ಇದ್ದಾರೆ. ಏನೇ ಆದರೂ ತಳವಾರ್ ಹಿಂದಿನ ವಿಸಿಗಳಾಗಿದ್ದ ಮಾದಯ್ಯ, ಹೆಗಡೆ, ಶಶಿಧರ್ ಪ್ರಸಾದ್‌ರಂತಹ ಜಾತಿಯ ಹಿನ್ನೆಲೆಯಾಗಲೀ, ರಾಜಕೀಯ ಪ್ರಭಾವಗಳಿಂದಾಗಲೀ ಹುದ್ದೆಗೆ ಬಂದವರಲ್ಲ ಮತ್ತು ಭ್ರಷ್ಟರಲ್ಲ.

ಮೂಲತಃ ಬೆಳಗಾಂ ಜಿಲ್ಲೆಯವರಾದ ತಳವಾರ್ ಟಾಟಾ ಇನ್‌ಸ್ಟಿಟ್ಯೂಟ್‌ನಲ್ಲಿ ಲೈಬ್ರರಿಯನ್ ಮತ್ತು ಮಾಹಿತಿ ವಿಭಾಗದಲ್ಲಿ ಕೆಲಸಮಾಡಿದ ಅನುಭವ ಹೊಂದಿರುವವರು. ಜೊತೆಗೆ ಮಂಗಳೂರು ವಿವಿ ಮತ್ತು ಮೈಸೂರು ವಿವಿಯಲ್ಲಿ ಸೇವೆ ಸಲ್ಲಿಸಿದ ಅನುಭವಿ. ಮೈಸೂರು ವಿವಿಯಲ್ಲಿ ಹಲವು ವರ್ಷಗಳ ಕಾಲ ಪ್ರೊಫೆಸರ್ ಆಗಿಯೂ ಎಂಟು ವರ್ಷಗಳ ಕಾಲ ರಿಜಿಸ್ಟ್ರಾರ್ ಆಗಿಯೂ ಕೆಲಸ ಮಾಡಿದ್ದರೂ ಸಹ ಕಚ್ಚೆ-ಕೈ ಮತ್ತು ಬಾಯಿ ಶುದ್ಧವಿಟ್ಟುಕೊಂಡಿರುವ ಮಾನವೀಯ ವ್ಯಕ್ತಿ.

ಪ್ರಸ್ತುತ ಪ್ರಕರಣದಲ್ಲಿ ಸರಿತಾ ಕುಟುಂಬಕ್ಕೆ ತಳವಾರ್‌ರನ್ನ ಇದರೊಳಗೆ ಎಳೆದು ತರಲು ಇಷ್ಟವಿಲ್ಲದಿದ್ದರೂ ಬಲವಂತವಾಗಿ ತರಲಾಗಿದೆ. ಇದರ ಹಿಂದೆ ಕುಲಪತಿ ಹುದ್ದೆ ಕೈತಪ್ಪಿಹೋಗಿರುವ ರಂಗಪ್ಪನ ಪಾತ್ರ ಇರುವುದು ಸ್ಪಷ್ಟವಾಗಿದೆ. ಇದೇ ಕಾರಣಕ್ಕಾಗಿ ಶಿವಬಸವಯ್ಯನನ್ನ ಮಟ್ಟಹಾಕುವ ನೆಪದಲ್ಲಿ ತಳವಾರ್‌ರನ್ನೂ ಸಹ ಹುದ್ದೆಯಿಂದ ಕೆಳಗಿಳಿಸಿ ತನ್ನ ಕನಸನ್ನ ಈಡೇರಿಸಿಕೊಳ್ಳುವ ಪ್ರಯತ್ನ ನಡೆಸಲಾ…



ಮಾರ್ಚ್ 1ರ ಸಂಜೆ ಕುಲಪತಿಯವರ ಮ… ಸರಿತಾ ದಂಪತಿಗಳು ಹೋಗಿ ಶಿವಬಸವಯ್ಯನ ವಿ… ದೂರು ಹೇಳಿದ್ದಾರೆ. 'ನೀವು ನನ್ನ ಸಹೋದರಿ… ಹಾಗೆ, ಖಂಡಿತ ಸಹಾಯ ಮಾಡುತ್ತೇ… ಎಂದು ತಳವಾರ್ ಹೇಳಿದ್ದಾರೆ. ಆದರೆ ಮಾ… 2 ಶಿವರಾತ್ರಿ ಹಬ್ಬವಾಗಿದ್ದರಿಂದ ರಜೆಯಿ… 3ನೇ ತಾರೀಖು ಆರೋಪಿ ಶಿವಬಸವಯ… ಫೋನ್ ಮಾಡಿ ಬರಲು ಹೇಳಿದಾಗ… ತಾನು ಸಕಲೇಶಪುರಕ್ಕೆ ಕರ್ತವ್ಯದ ನಿ… ಹೋಗಿರುವುದಾಗಿ ಹೇಳಿದ್ದಾನೆ. ತಳವಾ… ವಾಪಸ್ ಬಂದನಂತರ ತುರ್ತಾಗಿ ಕಾ… ಶಿವಬಸವಯ್ಯನಿಗೆ ಸೂಚಿಸಿದ್ದಾರೆ. … 8.30ಕ್ಕೆ ಹಿಂದಿರುಗಿದ ಶಿವಬಸವಯ್ಯ… ತಮ್ಮ ಚೇಂಬರಿಗೆ ಕರೆಸಿ ಬೈದಿದ್ದಾರೆ. "ಇದು ಸ… ನಾನು ಆಕೆಗೆ ಗೈಡ್ ಆಗಿ ಮುಂದುವರೆಯುವು… ಎಂದು ಶಿವಬಸವಯ್ಯ ತಿಳಿಸಿದ್ದಾನೆ. ಅದರ ಮಾರನೆ… ಸರಿತಾ ಆಕೆಯ ಪತಿ ವಿಜಯ್ ಮತ್ತು ಆರೋ… ಶಿವಬಸವಯ್ಯನನ್ನು ಕರೆದು ವಿಚಾರಣೆ ಮಾಡಿದ್ದಾರೆ. ಗೈಡ್… ಬದಲಿಸಲು ರಿಜಿಸ್ಟ್ರಾರ್ ಡಾ.ವಿಶ್ವನಾಥ್‌ರ ಎದು… ಸೂಚಿಸಲಾಗಿದೆ. ವಿವಿಯಲ್ಲಿ ಕೆಲವು ವಿಭಾಗಗಳಲ್ಲಿ ಗೈ… ಬದಲಾದರೆ ಫೆಲೋಶಿಪ್ ನಿಲ್ಲುತ್ತದೆ. ಆಗ ಸರಿ… ಯುಜಿಸಿಯಿಂದ ಪ್ರತಿ ತಿಂಗಳು ಬರುತ್ತಿದ್ದ ಹತ್ತು ಸಾ… ರೂಗಳ ಫೆಲೋಶಿಪ್ ನಿಲ್ಲುವ ಭೀತಿ ಎದುರಾಗಿದೆ… ಕಾರಣದಿಂದಾಗಿ ಸ್ವಲ್ಪ ದಿನ ಅವಕಾಶಕೊಡಿ ಎಂದು… ವಿಸಿ ಹೇಳಿದ್ದಾರೆ. ಆದರೆ ಸರಿತಾಳ ಪತಿ ಗಲಾಟೆ… ತೆಗೆದಿದ್ದಾನೆ. ಆಗ ತಳವಾರ್ "ನೀವು ಗೈ… ಬದಲಾಯಿಸಿಕೊಳ್ಳಿ ಇಲ್ಲವೇ ಫೆಲೋಶಿಪ್ ಕಳೆದುಕೊ… ಎಂಬರ್ಥದಲ್ಲಿ ಹೇಳಿದ್ದಾರೆ.

ಇಷ್ಟರಲ್ಲಾಗಲೇ ಆರೋಪಿ ಶಿವಬಸವಯ್ಯ … ಗೈಡ್ ಆಗಿ ಮುಂದುವರೆಯುವುದಿಲ್ಲ ಎ… ಬರೆದುಕೊಟ್ಟಿದ್ದ. ವಿಸಿಯವರು ಸರಿತಾರ ದೂ… ಉತ್ತರಿಸಲು ಆತನಿಗೆ ನೋಟಿಸ್ ಸಹ ನೀಡಿದ್ದರು. … ವಿಜಯ್ ಮಾತ್ರ ಫೆಲೋಶಿಪ್ ಬೇಕೇ ಬೇಕು … ಪಟ್ಟು ಹಿಡಿದಿದ್ದ.

ಇದೆಲ್ಲವೂ ಆದ ಮೇಲೆ ಮಾರನೆ ದಿನ ಮಾಧ್ಯಮ… ಶಿವಬಸವಯ್ಯ ಮತ್ತು ಕುಲಪತಿ ತಳವಾರ್ ಬ… ಜಾತಿಯವರಾದ್ದರಿಂದ ಆರೋಪಿ ಮೇಲೆ ಕ್ರಮ ಕೈಗೊ… ಗಿಲ್ಲ, ಇವರ ಕಿರುಕುಳದಿಂದಾಗಿ ಸರಿತಾ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾಳೆಂದು ಸರಿತಾ ಪತಿ ಕಿರು… ಇದು ರಾಜ್ಯ ಮಟ್ಟದ ಬ್ರೇಕಿಂಗ್ ಸುದ್ದಿ ಆ… ಇದೆಲ್ಲದರ ಹಿಂದೆ ಕಳಂಕಿತ, ಕೊಳಕು ವ್ಯಕ್ತಿ ಮುಕ್ತ ವಿ… ವಿಸಿ ರಂಗಪ್ಪನ ಕೈವಾಡವಿದೆ ಎಂಬ ಸುದ್ದಿ ಇದೆ.

ಇದರ ಜೊತೆಗೆ ಮತ್ತೊಂದು ಸುದ್ದಿಯೂ … ಅದೇನೆಂದರೆ ಶಿವಬಸವಯ್ಯ ಮತ್ತು ಜಿಯಾಲಜಿ ರಿ… ಮಾದೇಶ್ ಎಂಬುವವರು ವಿವಿಯಲ್ಲಿ ಕೆಲಸ ಮಾಡ… ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿದ್ದರು. ಕ್ರಮೇಣ… ಜೋಡಿ ಕಿತ್ತಾಡಿಕೊಂಡು ದೂರವಾಗಿದ್ದ… ಶಿವಬಸವಯ್ಯನನ್ನ ಮಣಿಸಲು ಮಾದೇಶ್ ಹವಣಿ… ಹಾಗೂ ಇದಕ್ಕೆ ವಿಜಯ್ ಕುಮಾರ್‌ನನ್ನು ಬಳಸಿಕೊಳ್ಳ… ಎಂಬ ಸುದ್ದಿ ವಿವಿಯ ತುಂಬೆಲ್ಲಾ ಹರಿದಾಡುತ್ತಿದೆ…

ಇದೆಲ್ಲದರ ಮಧ್ಯೆ ಎಬಿವಿಪಿಯ ಪುಂಡರು ವಿ… ವಿರುದ್ಧ ಪ್ರತಿಭಟನೆ ಮಾಡಿದ್ದಾರೆ. ಇದು ಸಹಜ… ದಲಿತರನ್ನು ಕೆರಳಿಸಿದೆ. ಇದನ್ನೇ ಬಳಸಿಕೊಂಡು ವಿ… ಹಾಸ್ಟೆಲ್‌ಗಳಲ್ಲಿ ಟೆಂಡರ್ ಪಡೆದು ದುಂಡಗಾಗಿ… ಮೇಯರ್ ಆಗಿದ್ದ ಪುರುಷೋತ್ತಮ್ ಎಂಬಾತ 'ದ… ಮೇಲೆ ದೌರ್ಜನ್ಯಕ್ಕೆ ಧಿಕ್ಕಾರ' ಅಂತ ಬೀದಿಗಿಳಿದಿ…

ಇದೀಗ ವಿವಿಯಲ್ಲಿ ಹಿರಿಯರ ಜಾತಿವಾದಿ ವ… ವಿದ್ಯಾರ್ಥಿಗಳಿಗೂ ಹರಿದು ಅವರೆಲ್ಲ ಈಗ ಜಾತಿ… ಗಳನ್ನ ಕಟ್ಟುತ್ತಿದ್ದಾರೆ. ಅಂತೂಇಂತೂ ವಿವಿಯ… ನಡೆಯುತ್ತಿದ್ದ ಒಳ ಜಗಳಗಳು ಹೊರ ಬಂದಿವೆ… ಬಸವಯ್ಯ ಮೇಲಿನ ಆರೋಪದ ಬಗ್ಗೆ ನಿಷ್ಪಕ್ಷಪಾ… ತನಿಖೆ ನಡೆದು ಹಿರಿಯರ ಘಟಿಂಗತನಗಳಿಗೆ … ಹಾಕಬೇಕಿದೆ.

● ಲಕ್ಷ್ಮಣ್ ಚೇರನ…

ಹೆಣ್ಣುಬಾಕರ ದಂಡು!

ಮೈಸೂರು ವಿವಿಯಲ್ಲಿ ಸಂಶೋಧನೆಗೆ ಬರುವ ಹೆಣ್ಣುಮಕ್ಕಳನ್ನು ದುರುಪಯೋಗ ಪಡಿಸಿಕೊಂಡವರ ಹೆಸರು ಹೇಳುತ್ತಾ ಹೋದರೆ ಅದಕ್ಕೆ ಕೊನೆ ಇರುವುದಿಲ್ಲ, ವಿವಿಯ ಹಲವು ವಿಭಾಗದ ಮುಖ್ಯಸ್ಥರು ಸಂಶೋಧನೆಗೆ ಬರುತ್ತಿದ್ದ ವಿದ್ಯಾರ್ಥಿನಿಯರನ್ನ ದುರುಪಯೋಗಪಡಿಸಿಕೊಂಡು ತಮ್ಮ ಪಾಪ ಕಳೆದುಕೊಳ್ಳಲು ಮೈಸೂರು ವಿವಿಯಲ್ಲಿ ಕೆಲಸ ಕೊಡಿಸಿರುವ ಉದಾಹರಣೆಗಳಿವೆ. ಈ ಬಗ್ಗೆ ಹುಡುಕುತ್ತಾ ಹೋದರೆ ವಿಚಾರವಾದಿ ಕೆ.ರಾಮದಾಸ್‌ರನ್ನ ಬಿಟ್ಟರೆ ಉಳಿದವರದ್ದು ರಂಗೀಲ ವೃತ್ತಾಂತ. ಮೈಸೂರು ವಿವಿಯಲ್ಲಿ 2005 ರಿಂದೀಚೆಗೆ 26 ಇಂತಹ ಪ್ರಕರಣಗಳು ನಡೆದಿದ್ದು ಶಿವಬಸವಯ್ಯನ ಪ್ರಕರಣ 27ನೆಯದು! ಆದರೆ ಒಂದೇ ಒಂದು ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯೇ ಆಗಿಲ್ಲ!

ಇಷ್ಟೇ ಅಲ್ಲದೆ ಉಮಾ ಎಂಬ ವಿದ್ಯಾರ್ಥಿನಿ ಸೇರಿದಂತೆ ಹಲವು ವಿದ್ಯಾರ್ಥಿನಿಯರ ಆತ್ಮಹತ್ಯೆಗಳೂ ಇಲ್ಲಿ ನಡೆದಿವೆ. ಆದರೆ ಈ ಬಗ್ಗೆ ತನಿಖೆ ನಡೆದರೆ ಬಹಳಷ್ಟು ಮಾಜಿ ಪಂಡಿತರೂ ಹಾಲಿ ಪಂಡಿತರುಗಳೂ ಜೈಲು ಸೇರಬೇಕಾಗುತ್ತದೆ. ದುರಂತವೆಂದರೆ ದೊಡ್ಡ ದೊಡ್ಡ ಸಾಹಿತಿಗಳು, ಬರಹಗಾರರು, ಪಂಡಿತರು ಎನಿಸಿಕೊಂಡವರೂ ಸಹ ಇದರಿಂದ ಹೊರತಾಗಿಲ್ಲ.

▶▶ 9 ಸೇರಿಕೊಂಡೇ ದೋಚಿದರಾ?

ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಚಮಚಾಗಿರಿ ಮಾಡಿಕೊಂಡೇ ದೀಲಿಗಿಳಿದ ಉಮೇಶ್ ಶ್ರೀಧರ್‌ನೇ ನಿಂತು ನಂಜುಂಡಪ್ಪ ಎಂಬ ವಕೀಲರನ್ನು ಆಕೆಯ ನೆರವಿಗೆಂದು ನೇಮಿಸಿದ್ದ. ತನ್ನ ಬಳಿಯಿದ್ದ ಎರಡು ಇನ್ನೋವಾ ಕಾರುಗಳ ಪೈಕಿ ಒಂದನ್ನು ಉಮಾ ಈತನಿಗೆಂದು ಮೀಸಲಿರಿಸಿದ್ದಳು. ಉಮಾಳನ್ನು ತಾನೇ ಮದುವೆಯಾಗ್ತೀನಿ ಎಂದು ಉಮೇಶ್ ವಂಚಿತರ ಬಳಿ ರುಬಾಬು ಮಾಡಿದ್ದ ಈಗ ಇವನೇ ಆಕೆಯನ್ನು ಕೇರಳಕ್ಕೆ ಒಯ್ದು ಮುಚ್ಚಿಟ್ಟಿರಬಹುದಾ? ಯಾವುದೋ ಕಾಲಕ್ಕೆ ಬಲರಾಮ ಎಂಬಾತನ ಎರಡನೇ ಪತ್ನಿಯಾಗಿದ್ದ ಈಕೆಯನ್ನು ಮದುವೆಯಾದರೆ ಆಕೆಯ ಅಷ್ಟೂ ಆಸ್ತಿ ತನಗೆ ದಕ್ಕುತ್ತದೆ ಎಂಬುದು ಮಲೆಯಾಳಿ ಉಮೇಶನ ಹುನ್ನಾರವೆ?

ಇದಲ್ಲದೇ ಜೆ.ಪಿ. ನಗರ ಪೊಲೀಸ್ ಠಾಣೆಯ ಎಸ್.ಐ. ಮೋಹನ್‌ನ ಮಗ ಲೋಹಿತ್ ಕೂಡ ಉಮಾಳ ಬೆನ್ನಿಗೆ ಬಿದ್ದಿದ್ದ. ರೆಡ್ಡಿ ಅಲಿಯಾಸ್ ಈಶ್ವರ್ ರೆಡ್ಡಿ ಎಂಬಾತ ತಾನು ಸಿಬಿಐ ಅಧಿಕಾರಿಯೆಂದು ಹೇಳಿಕೊಂಡು ಉಮಾಳನ್ನು ಪೀಡಿಸುತ್ತಿದ್ದ. ಈತನನ್ನು ಆಕೆಯ ವಿರುದ್ಧವೂ ಬಿಟ್ಟವನು ಮಂಗಳೂರಿನ ಸುಶಾಂತ್ ಪೈ ಎಂಬಾತ. ಈ ಪೈಕಿ ಯಾರಾದರೂ ಆಕೆಯನ್ನು ಹೊತ್ತೊಯ್ದು ಕೂಡಿಟ್ಟುಕೊಂಡಿರಬಹುದಾ?

ಬೆಂಗಳೂರಿನಿಂದ ನಾಪತ್ತೆಯಾದ ಉಮಾ ಕೊನೆಯದಾಗಿ ಕಾಣಿಸಿದ್ದು ನೆಲಮಂಗಲದ ಸುಕನ್ಯಾ ಎಂಬ ನಿಗೂಢ ಹೆಂಗಸಿನ ಮನೆಯಲ್ಲಿ. ಈಕೆಯ ತಂಗಿ ಅಶ್ವಿನಿ ಕೂಡ ವಂಚಕಿಯೇ. ಇವರಿಬ್ಬರಿಗೂ ಬ್ಯೂಟಿ ಪಾರ್ಲರ್ ನೇತ್ರಾ ಎಂಬಾಕೆಯೇ ಆಪದ್ರಕ್ಷಕಿ. ಈ ಮೂವರೂ ಹೆಂಗಸರು ಸೇರಿ ಉಮಾಳನ್ನು ಬಚ್ಚಿಟ್ಟಿರಬಹುದಾ? ಆಕೆ ಮುಂಡಾಯಿಸಿದ ದುಡ್ಡು ಏನಾಯಿತು? ವಾಹೂ ನೆಟ್ ಪ್ರೈವೇಟ್ ಲಿಮಿಟೆಡ್‌ನ ವೆಂಕಟೇಶ್ ಎಂಬಾತನ ಬಳಿ ಉಮಾಳ ದುಡ್ಡು ಜೋಪಾನವಾಗಿದೆಯೇ? ಪ್ರತಿ ತಿಂಗಳೂ ಉಮಾಗೆ 45 ಲಕ್ಷದಷ್ಟು ದುಡ್ಡು ತಂದುಕೊಡುತ್ತಿದ್ದ ವಾಹೂ ನೆಟ್‌ನ ವೆಂಕಟೇಶನ ಬಳಿ ಉಮಾಳ 15 ಕೋಟಿ ರೊಕ್ಕ ಜೋಪಾನವಾಗಿದೆಯೇ? ವೆಂಕಟೇಶನನ್ನು ರಿಪೇರಿ ಮಾಡಿದರೆ ಉಮಾಳ ಮೋಸದ ದುಡ್ಡು ವಸೂಲಿಯಾಗುತ್ತಾ?

ಬಿಡದಿ ಪೊಲೀಸರಾಗಲಿ, ರಾಮನಗರದ ಡಿವೈಎಸ್‌ಪಿ ರಾಮಕೃಷ್ಣರಾಗಲಿ ಉಮಾಳನ್ನು ಎಳೆತಂದು ಮೋಸಹೋದವರಿಗೆ ನ್ಯಾಯ ಕೊಡಿಸುವುದುಂಟಾ? ವಿನಿವಿಂಕ್ ಶಾಸ್ತ್ರಿಯಾದ ಗತಿ ಏಕೆ ಈಕೆಗಾಗುತ್ತಿಲ್ಲ?

ಚಿಕ್ಕಮಗಳೂರು: ಪೆಟ್ರೋಲ್ ಮಾಫಿಯಾ ಜೊತೆ ಜೋಡಿಸಿದ್ದ ಪೊಲೀಸರಿಗೆ ರಕ್ಷಣೆ!

ಚಿಕ್ಕಮಗಳೂರಿನ ಮೂವರು ಖಾಕಿ ಖದೀಮರ ... ಬಯಲಾಗಿದೆ. ಮೂಡಿಗೆರೆ ಎಸ್ಸೈ ಜೆ.ಟಿ.ಸ್ವಾಮಿ, ...ಬೀಡು ಪಿಎಸ್ಐ ಸುನೀಲ್ ಕುಮಾರ್, ...ಗಳೂರು ಎಸ್ಸೈ ಸಿದ್ದಯ್ಯ ಎಂಬ ...ಗಳು ಪೆಟ್ರೋಲ್ ಮಾಫಿಯಾ ...ಗೆ ನಂಟನ್ನಿಟ್ಟುಕೊಂಡು ಸಿಕ್ಕಿಬಿದ್ದಿದ್ದಾರೆ. ... ಕುರಿತು ಕಳೆದ ವಾರ 'ಲಂಕೇಶ್' ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ...ಟವಾಗಿತ್ತು. ಇದು ಗೊತ್ತಾಗುತ್ತಲೆ ಭ್ರಷ್ಟ ...ಸರು ಬಚಾವಾಗಲು ವಿವಿಧ ಕಸರತ್ತಿಗಿಳಿ... ಕೊನೆಗೆ ಗೋಣಿಬೀಡು ಪಿಎಸ್ಐ ...ಲ್ ಕುಮಾರನನ್ನು ಅಮಾನತುಗೊಳಿಸ...ತು. ಆದರೆ ಪೊಲೀಸ್ ಇಲಾಖೆ ಅದಕ್ಕೆ ನೀಡಿರುವ ...ವೇನು ಗೊತ್ತಾ? ಕರ್ತವ್ಯಲೋಪ ...ಪ!


ತುಳಸಿ

...ಟ್ರೋಲ್ ಮಾಫಿಯಾದೊಂದಿಗೆ ಲಿಂಕ್ ...ರುವ ಭ್ರಷ್ಟ ಪೊಲೀಸರದ್ದು ಕೇವಲ ... ಲೋಪವಲ್ಲ ಎಂಬುದು ಎಸ್ಪಿ ವಿಕಾಸ್ ...ರ್‌ಗೆ ಚೆನ್ನಾಗಿ ಗೊತ್ತಿದೆ. ಈಗಾಗಲೇ ...ಅಧಿಕಾರಿ ಡಿವೈಎಸ್‌ಪಿ ವೇದಮೂರ್ತಿ ... ಈ ಖದೀಮ ಪೊಲೀಸರ ಕುರಿತು ... ತಯಾರಿಸಿ ಎಸ್ಪಿ ವಿಕಾಸ್ ಕುಮಾರ್‌...ಗೆ ಕಳಿಸಿದ್ದಾರೆ. ಆದರೆ ವಿಕಾಸ್ ...ರ್ ಅದ್ಯಾಕೋ ಆ ವರದಿಗೆ ಸಹಿ ಹಾಕಿಲ್ಲ.


ರಾಜು

... ಕರಾಮತ್ತಿನ ಹಿಂದೆ ಚಿಕ್ಕಮಗಳೂರು ಶಾಸಕ ...ವಿ, ಮೂಡಿಗೆರೆ ಶಾಸಕ ಎಂ.ಪಿ ಕುಮಾರಸ್ವಾಮಿಯ ...ತ ಇರಬಹುದೇ? ಪೆಟ್ರೋಲ್ ...ಯಾದ ರಾಜುಶೆಟ್ಟಿಯ ಹಡಬೆ ದುಡ್ಡು ... ಸಂಪರ್ಕಗಳು ಆ ಮಟ್ಟದ ಕೆಲಸ ...ತ್ತಿರಬಹುದೆ?

...ಟ್ರೋಲ್ ಮಾಫಿಯಾದ ಸಂಪರ್ಕ ...ಜಾಲಾಡಿದರೆ ಭಯಾನಕ ಸಂಗತಿಗಳು ...ಳ್ಳುತ್ತಿವೆ. ಒಂದು ಕಡೆ, ರಾಜಕಾರಣಿಗಳು ...ಗಳಂತೆ ಕಾಣಿಸಿಕೊಂಡರೆ, ಇನ್ನೊಂದು ...ಂಗಳೂರು ಭೂಗತ ಜಗತ್ತಿನ ಕರಾಳ ...ಬಾಯ್ದೆರೆದುಕೊಳ್ಳುತ್ತದೆ. ಮಗದೊಂದು ...ಪೊಲೀಸ್ ಇಲಾಖೆಯ ಅಸಲಿಯತ್ತು ಜರೂರಾಗಿ ...ಗೊಳ್ಳುತ್ತದೆ. ಇದಕ್ಕೆಲ್ಲಾ ಕೊಂಡಿ ಬೆಸೆದವನ ಹೆಸರು ...ಶ್ ಅಲಿಯಾಸ್ ರಾಜುಶೆಟ್ಟಿ.


ರಾಜಶೆಟ್ಟಿ

...ಜುಶೆಟ್ಟಿಯದ್ದು ಬೇಲೂರಿನ ಕಿರಿಗಡಲು ಎಂಬ ... ಚಿಕ್ಕಂದಿನಲ್ಲಿ ಬೆಂಗಳೂರಿನಲ್ಲಿ ಬೇಕರಿ ಕೆಲಸಕ್ಕೆ ...ಬಂದಿದ್ದ ರಾಜುಶೆಟ್ಟಿ ಆಗ ಉದ್ಯಮಿಯೋರ್ವನ ಪುತ್ರನೊಂದಿಗೆ ಸ್ನೇಹ ಗಳಿಸಿದ್ದ. ಒಂದು ಕಾಲದಲ್ಲಿ ಒಂದೆಕರೆ ಜಮೀನಿರದವನು ಇವತ್ತಿಗೆ ಕೋಟಿಕುಳವಾಗಿ ಬೆಳೆದಿದ್ದಾನೆ. ಬೇಲೂರಿನ ಕೋಗಿಲೆಮನೆಯಲ್ಲಿ ಹೊಲ, ಮೂಡಿಗೆರೆಯ ಗೌಡಹಳ್ಳಿಯಲ್ಲಿ ಕಾಫಿ ಎಸ್ಟೇಟು, ಬೆಂಗಳೂರಿನಲ್ಲಿ ಎರಡು ಡಾಬಾ, ಬೇಲೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಸೈಟುಗಳು, ಎಂಆರ್‌ಪಿಎಲ್ ಪೈಪ್‌ಲೈನ್ ಹಾದುಹೋಗಿರುವ ಕಡೆಯೆಲ್ಲಾ ಜಮೀನು ಖರೀದಿಸಿದ್ದಾನೆ.


ಈ ರಾಜುಶೆಟ್ಟಿ ಹಾಸನ ಜಿಲ್ಲೆಯಲ್ಲಿ ಶೆಟ್ಟಿ ಸಂಘದ ಅಧ್ಯಕ್ಷನಾಗಿದ್ದ. ಹಿಂದೊಮ್ಮೆ ಕೋಗಿಲೆಮನೆ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದ. ಎರಡು ವರ್ಷಗಳ ಹಿಂದೆ ಬಿಎಸ್‌ಪಿಯಿಂದ ಎಂಎಲ್‌ಎ ಚುನಾವಣೆಗೆ ನಿಂತು ಹನ್ನೊಂದು ಸಾವಿರ ಮತ ಗಳಿಸಿದ್ದ. ಅದೇ ಹೊತ್ತಿಗೆ ಅರೆಹಳ್ಳಿ ಹತ್ತಿರದ ಮಲಸಾವರದಲ್ಲಿ ಪೆಟ್ರೋಲ್ ಕದ್ದು ಸಿಕ್ಕಿಬಿದ್ದಿದ್ದ. ಆಗ ರಾಜು ಶೆಟ್ಟಿಗೆ ಬಿಎಸ್‌ಪಿ ಮುಖಂಡರು ಗೇಟ್‌ಪಾಸ್ ಕೊಟ್ಟು ಕಳಿಸಿದ್ದರು.

ಆದಾದನಂತರ ದಕ್ಷಿಣ ಕನ್ನಡ ಜಿಲ್ಲೆಯ ನೆರಿಯಾದಲ್ಲಿ ಎಂಆರ್‌ಪಿಎಲ್ ಪೈಪ್‌ಲೈನ್‌ಗೆ ತೂತು ಕೊರೆದಿದ್ದ. ಆಗ ಅದು ಹೇಗೋ ಬಚಾವಾಗಿ ಮೂಡಿಗೆರೆಯ ಗೌಡಹಳ್ಳಿಯಲ್ಲಿ ಅದೇ ಲೈನ್‌ಗೆ ಎರಡಿಂಚಿನ ಪೈಪ್ ಸಿಕ್ಕಿಸಿದ. ಅಲ್ಲೂ ಕೆಲಸಗಾರರನ್ನು ಸಿಕ್ಕಿಸಿ ತಾನು ತಪ್ಪಿಸಿಕೊಂಡ.

ಬಹಳ ಹಿಂದೆ ಸಕಲೇಶಪುರದ ಹುರುಡಿಯಲ್ಲಿ ಡೀಸೆಲ್ ಕಳ್ಳತನವಾಗಿತ್ತು. ಆಗಲೇ ಈ ಪೆಟ್ರೋಲ್ ಮಾಫಿಯಾ ತನ್ನ ದಂಧೆಯನ್ನು ಪ್ರಾರಂಭಿಸಿದ್ದು. ಆದರೆ ಆಗ ಈ ಮಾಫಿಯಾಗೆ ದಿಕ್ಕುದೆಸೆಯ ಅರಿವಿರದಿದ್ದರಿಂದ ಪೈಪ್‌ಲೈನ್‌ಗೆ ಸಿಕ್ಕಿಸಿದ ಕೊಂಡಿ ಕಳಚಿ ಬಿದ್ದು ಹತ್ತಿರತ್ತಿರ ಒಂದು ಲಕ್ಷ ಲೀಟರ್ ಡೀಸೆಲ್ ಭೂಮಿಯೊಡಲು ಸೇರಿತ್ತು. ಆ ಪ್ರಕರಣದಲ್ಲಿ ರಾಜುಶೆಟ್ಟಿಯನ್ನು ಬಚಾವ್ ಮಾಡಿದ ಪೊಲೀಸರು ಬೇರೆಯವ ರನ್ನು ಬೆನ್ನತ್ತಿ ಕೇಸು ಜಡಿದಿದ್ದರು. ಅವತ್ತಿಗೆ ಅಲ್ಲಿನ ಎಸ್ಸೈ ಶೈಲೇಂದ್ರ ಕುಮಾರ್‌ಗೆ ಹೀರೋ ಪಟ್ಟ ಸಿಕ್ಕಿತ್ತಾದರೂ ಹಲವರನ್ನು ಕೇಸಿನಿಂದ ಹೊರಗಿಡಲಾಗಿತ್ತು.




ಹಾಗೆ ನೋಡಿದರೆ ಎಂಟು ವರ್ಷಗಳ ಹಿಂದೆ ಮಂಗಳೂರಿನಿಂದ ಬೆಂಗಳೂರಿಗೆ ಎಂಆರ್‌ಪಿಎಲ್ ಕಂಪೆನಿ ಪೆಟ್ರೋಲ್ ಸಾಗಾಣಿಕೆಗೆ ಪ್ರಾರಂಭಿಸಿತ್ತಲ್ಲ, ಅದೇ ಹೊತ್ತಿಗೆ ರಾಜುಶೆಟ್ಟಿ ಅಂಡ್ ಗ್ಯಾಂಗು ಷಡ್ಯಂತ್ರದಲ್ಲಿ ತೊಡಗಿತ್ತು. ರಾಜುಶೆಟ್ಟಿ ತನ್ನ ಬಗಲಲ್ಲಿ ದಿನೇಶ್ ಮತ್ತು ತುಳಸಿಪ್ರಸಾದ್ ಎಂಬ ಇಬ್ಬರು ಖದೀಮರನ್ನು ಇಟ್ಟುಕೊಂಡು ಪೈಪ್‌ಲೈನ್ ಹಾದುಹೋಗಿರುವೆಡೆ ಅಕ್ಕಪಕ್ಕದ ಜಮೀನು ಖರೀದಿಗಿಳಿದಿದ್ದ. ಕೆಲವೆಡೆ ಭೂಮಿಯನ್ನು ಭೋಗ್ಯಕ್ಕೂ ಪಡೆದ. ಒಂದೆಡೆ ಎಂಆರ್‌ಪಿಎಲ್ ಕಂಪನಿ ಪೈಪ್‌ಲೈನ್ ಕೆಲಸದಲ್ಲಿ ತೊಡಗಿದ್ದರೆ ಮತ್ತೊಂದೆಡೆ ರಾಜುಶೆಟ್ಟಿಯ ತಂಡ ಹತ್ತಿರದ ಜಮೀನುಗಳಲ್ಲಿ ಎರಡಿಂಚಿನ ಕಳ್ಳಾದ ಪೈಪ್ ಹಾಕುವ ಕೆಲಸದಲ್ಲಿ ತೊಡಗಿತ್ತು. ಇವತ್ತು ಇಲ್ಲೆಲ್ಲ ಸರಿಯಾಗಿ ಹುಡುಕಿದರೆ ಬಹುತೇಕ ಕಡೆ ಇಂಥ ಅನೇಕ ಪೈಪ್‌ಗಳು ಸಿಗುತ್ತವೆ.


ಸ್ವಾಮಿ

ಪೆಟ್ರೋಲ್ ಮಾಫಿಯಾದಲ್ಲಿ ರಾಜುಶೆಟ್ಟಿಯ ಭಂಟ ದಿನೇಶನ ಪಾತ್ರ ಮಹತ್ವದ್ದು. ಆತ ಪೆಟ್ರೋಲ್ ಕಳ್ಳ ಸಾಗಾಣಿಕೆಗೆಂದೇ ಹತ್ತು ಟ್ಯಾಂಕರ್‌ಗಳನ್ನು ಖರೀದಿಸಿದ್ದ. ಕಳೆದ ಸಲ ಮಲಸಾವರದಲ್ಲಿ ದಿನೇಶ ಪೊಲೀಸರಿಗೆ ಸೆರೆ ಸಿಕ್ಕಿದ್ದು ರಾಜುಶೆಟ್ಟಿಯೊಂದಿಗಿನ ವೈಮನಸ್ಯಕ್ಕೆ ಕಾರಣವಾಗಿತ್ತು. ದಿನೇಶ್ ಜೈಲಿನಲ್ಲಿರು ವಾಗಲೇ ಆತನನ್ನು ಮುಗಿಸಲು ರಾಜುಶೆಟ್ಟಿ ಪಿತೂರಿಗಿಳಿದು ವಿಫಲನಾಗಿದ್ದ. ಈ ಷಡ್ಯಂತ್ರದ ಅರಿವಾದ ಕೂಡಲೇ ರಾಜುಶೆಟ್ಟಿಯೊಂದಿಗಿನ ತನ್ನೆಲ್ಲಾ ಸಂಬಂಧವನ್ನು ದಿನೇಶ್ ಕಡಿದುಕೊಂಡಿದ್ದ. ಒಂದು ಮೂಲದ ಪ್ರಕಾರ ತುಳಸಿಪ್ರಸಾದ್ ಮತ್ತು ರಾಜುಶೆಟ್ಟಿ ನಡುವೆಯೂ ವೈಮನಸ್ಯ ಬೆಳೆದಿದೆ. ಆ ಕಾರಣದಿಂದ ತುಳಸಿಪ್ರಸಾದ್ ಪೊಲೀಸ ರಿಗೆ ಮಾಹಿತಿ ನೀಡಿದ. ಆದರೆ ಗೋಣಿ ಬೀಡು ಪಿಎಸ್ಐ ಸುನೀಲ್ ಕುಮಾರ್ ಪ್ರಕರಣ ದಾಖಲಿಸುವ ಬದಲು ವಸೂಲಿ ಗಿಳಿದ. ವಿಷಯ ತಿಳಿದ ಮೂಡಿಗೆರೆ ಸರ್ಕಲ್ ಇನ್ಸ್‌ಪೆಕ್ಟರ್ ಜೆ.ಟಿ.ಸ್ವಾಮಿ ಮತ್ತು ಸಿದ್ದಯ್ಯ ಕೂಡ ಸುನೀಲ್ ಕುಮಾರ್ ಜೊತೆ ಸೇರಿಕೊಂಡಿ ದ್ದಾರೆ. ಅನಾಮತ್ತು ಒಂದು ಕೋಟಿ ಪಡೆದು ಮೂವರೂ ಹಂಚಿಕೊಂಡಿದ್ದಾರೆ.

ಅನಾಮತ್ತು ಎಂಟು ಸಾವಿರ ಫೋನ್ ಕರೆಗಳು ರಾಜುಶೆಟ್ಟಿಯ ಗ್ಯಾಂಗ್ ಮತ್ತು ಧೂರ್ತ ಪೊಲೀಸರ ನಡುವೆ ನಡೆದಿದೆ. ಇಂಥ ಖದೀಮರ ಜಾತಕ ಡಿವೈಎಸ್‌ಪಿ ವೇದಮೂರ್ತಿಗೆ ಅರಿವಾಗು ತ್ತಿದ್ದಂತೆ ಮೂರು ಖಾಕಿಗಳೂ ಒಮ್ಮಿಂದೊಮ್ಮೆಲೆ ಬೆಚ್ಚಿದ್ದಾರೆ. ದಾಖಲೆಗಳೊಂದಿಗೆ ಸಿಕ್ಕಿಬಿದ್ದಿರು ವುದರಿಂದ ಅವರು ಬಚಾವಾಗುವ ದಾರಿ ಸುಲಭವಿಲ್ಲ. ತಲೆಮರೆಸಿ ಕೊಂಡಿರುವ ಆರೋಪಿಗಳ ಪತ್ತೆಗೆ ಎಸ್ಸೈ ಗುರುಪ್ರಸಾದ್ ಎಂಬವರ ನೇತೃತ್ವದಲ್ಲಿ ತಂಡವನ್ನು ರಚಿಸಲಾಗಿದೆ. ಈಗಾಗಲೆ ನಾಗೇಶ್ ಶೆಟ್ಟಿ, ಮಧುಸೂದನ್, ಮದನ, ಸತೀಶ್, ವಿಜಯ ಕುಮಾರ್, ಕಾಂತರಾಜು, ಸುರೇಶ್ ಸೆರೆ ಸಿಕ್ಕಿದ್ದಾರೆ. ಇನ್ನು ರಾಜುಶೆಟ್ಟಿ, ಪಾಂಡು, ತುಳಸಿಪ್ರಸಾದ್, ಮುರಳಿ, ರಾಜು, ಹರೀಶ್, ಎಂಆರ್‌ಪಿಎಲ್ ಕಂಪನಿಯ ಇಂಜಿನಿಯರ್ ಪ್ರಕಾಶ್ ಮತ್ತು ವಿಜಯೇಂದ್ರ ತಲೆ ಮರೆಸಿಕೊಂಡಿದ್ದಾರೆ. ರಾಜು ಶೆಟ್ಟಿ ಮಾತ್ರ ಆಂಧ್ರ, ತಮಿಳುನಾಡುಗಳಲ್ಲಿ ತಿರುಗುತ್ತಿರುವ ಮಾಹಿತಿಯಿದೆ.


ವೇದಮೂರ್ತಿ

ಆದರೆ ಪಶ್ಚಿಮ ವಲಯದ ಐಜಿಪಿ ಈತನಕ ಸ್ಥಳಕ್ಕೆ ಭೇಟಿ ನೀಡದಿರುವುದು ಅನುಮಾನಕ್ಕೆಡೆ ಮಾಡಿದೆ. ಈ ನಡುವೆ ಪೆಟ್ರೋಲ್ ಮಾಫಿಯಾ ಮತ್ತು ಖದೀಮ ಪೊಲೀಸರನ್ನು ಹಿಡಿದು ಹೆಡೆಮುರಿ ಕಟ್ಟಲು ಹೊರಟಿರುವ ಡಿವೈಎಸ್‌ಪಿ ವೇದಮೂರ್ತಿಯ ಎತ್ತಂಗಡಿಗೆ ಸಿದ್ಧತೆ ನಡೆಯುತ್ತಿದೆ. ಅದು ನಡೆದರೆ ಚಿಕ್ಕಮಗಳೂರಿನ ಜನರು ಬೀದಿಗಿಳಿಯುವುದು ಖಚಿತ.

• ಅಜೀಜ್ ಕಿರುಗುಂದ

ಕಳೆದ 'ಲಂಕೇಶ್' ಸಂಚಿಕೆಯನ್ನು ಕದ್ದವರಾರು?

'ಲಂಕೇಶ್' ವಿಶೇಷಾಂಕ ಸಂಚಿಕೆಯಿದ್ದ ಬಂಡಲು ಕಳೆದ ಶುಕ್ರವಾರ ಚಿಕ್ಕಮಗಳೂರು ಬಸ್ ನಿಲ್ದಾಣದಲ್ಲಿ ಕಳ್ಳತನವಾಗಿತ್ತು. ನಮ್ಮ ಏಜೆಂಟ್ ಮಂಜು ಬಸ್ಸಿನಿಂದ ಪತ್ರಿಕೆಯನ್ನು ಕೆಳಗಿಳಿಸಿ ಅತ್ತಿತ್ತ ನೋಡುವುದರೊಳಗೆ ಪತ್ರಿಕೆಯ ಬಂಡಲು ಅಲ್ಲಿರಲಿಲ್ಲ. ಹೀಗಾಗಿ ಸಂಚಿಕೆಯ ಹೆಚ್ಚುವರಿ ಪ್ರತಿಗಳನ್ನು ತರಿಸಿ ಮಾರುಕಟ್ಟೆಗೆ ಒದಗಿಸುವಾಗ ಎರಡು ದಿನ ತಡವಾಗಿತ್ತು.

ಆರಂಭದಲ್ಲಿ ನಾಪತ್ತೆಯಾಗಿದ್ದ ಬಂಡಲ್‌ಗಾಗಿ ಮಂಜು ಸುತ್ತಮುತ್ತ ಹುಡುಕಾಡಿದರು. ಅನಂತರ ಭಾನುವಾರ ಬೆಳಗ್ಗೆ ಮಂಜು ಅವರು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಬಂದರೆ ಅಲ್ಲಿದ್ದ ಪಿಎಸ್ಐ ರವಿ ದೂರು ಸ್ವೀಕರಿಸಲು ಸತಾಯಿಸಿದ್ದಾನೆ. ಮಧ್ಯಾಹ್ನದ ವೇಳೆ ಡಿವೈಎಸ್‌ಪಿ ವೇದಮೂರ್ತಿ ಠಾಣೆಗೆ ಅನಿರೀಕ್ಷಿತ-ಭೇಟಿ ನೀಡಿದಾಗ ಅವರಿಗೆ ವಿಷಯ ತಿಳಿದು ದೂರು ದಾಖಲಿಸಲು ಪಿಎಸ್ಐ ರವಿಗೆ ಸೂಚಿದ ಬಳಿಕವಷ್ಟೇ 379 ಕಲಂನಡಿ ಕಳ್ಳತನದ ದೂರು ದಾಖಲಾಗಿದೆ. ಈ ವೇಳೆಯಲ್ಲಿ ಪತ್ರಿಕೆಯ ಸಂಚಿಕೆಗಾಗಿ ಜನ ಕುತೂಹಲದಿಂದ ಕಾದಿದ್ದರು. ಕೆಲವರು ಹಾಸನ, ಮಂಗಳೂರು ಮತ್ತು ಶಿವಮೊಗ್ಗದಿಂದ ತರಿಸಿಕೊಂಡಿದ್ದರು. ಇನ್ನು ಕೆಲವರು ಜೆರಾಕ್ಸ್ ಪ್ರತಿ ಮಾಡಿ ಹಂಚಿದ್ದರು. 'ಲಂಕೇಶ್' ವಾರ ಪತ್ರಿಕೆ ಜಿಲ್ಲೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಕುತಂತ್ರಿ ರಾಜಕೀಯದ ವಿರುದ್ಧ ಅನೇಕ ವರದಿಗಳನ್ನು ಪ್ರಕಟಿಸಿದೆ. ಆದರೆ ಈವರೆಗೆ ಜಿಲ್ಲೆಯಲ್ಲಿ ಪತ್ರಿಕೆಯ ಬಂಡಲು ಕಳ್ಳತನವಾಗಿರಲಿಲ್ಲ. ಕಳೆದ ಸಂಚಿಕೆಯಲ್ಲಿ ಖದೀಮ ಪೊಲೀಸರ ಕುರಿತು ಪ್ರಕಟವಾಗಿದ್ದ ವರದಿಯ ಬಗ್ಗೆ ಬಸ್ಸು ಬೆಂಗಳೂರು ಬಿಟ್ಟು ಚಿಕ್ಕಮಗಳೂರು ತಲುಪುವ ಮುನ್ನ ಖದೀಮರಿಗೆ ತಿಳಿದಿತ್ತು.

ಅಂದರೆ ಕಳ್ಳರಾರು ಎಂಬುದನ್ನು ನೀವೇ ಊಹಿಸಿ...

ಕನ್ನಡ ವಿರೋಧಿ ಮಾಲ್‌ಗಳಿಗೊಂದು ಎಚ್ಚರಿಕೆ

ಬೆಂಗಳೂರಿನ ಕಡೆ ಶಾಪಿಂಗ್ ಮಾಲ್ ಅಂತ ಹೆಸರುವಾಸಿಯಾಗಿರುವ ...ಸ್ತಂಗಡಿಗಳು ಶಿವಮೊಗ್ಗದಂಥ ಪ್ಯಾಟೆಗಳಿಗೂ ಲಗ್ಗೆಯಿಟ್ಟಿವೆ. ಸದ್ಯ ...ಮೊಗ್ಗದಲ್ಲಿರುವುದು 'ಮೋರ್' ಹೆಸರಿನ ಅಂಗಡಿ. ಇದರ ರೂಪುರೇಷೆ, ...ರ ವೈಖರಿಗಳೆಲ್ಲ ನಮ್ಮ ನೆಲದ ಘಮಕ್ಕೆ ತದ್ವಿರುದ್ಧವಾಗಿವೆ. ಅವಿದ್ಯಾವಂತರು, ... ಕಾಲಿನವರು, ಮಾಸಿದ ಬಟ್ಟೆಯವರು. ಒಳಬರಬಾರದೆಂಬ 'ವಾಸ್ತು' ...ತಾರದೊಂದಿಗೇ ಸ್ಥಾಪನೆಯಾದಂತಿರುವ 'ಮೋರ್' ನನ್ನನ್ನು ತಬ್ಬಿಬ್ಬುಗೊಳಿಸಿ...ಬಗ್ಗೆ ಅದು ಸಾಮಾನ್ಯರೆಲ್ಲರ ಅನುಭವವೂ ಆಗಿರುವ ಸಾಧ್ಯತೆಗಳಿರುವುದರಿಂದ ...ಲೇಕಿಸ್ಸಿದೆ.....

...ತ್ತೀಚೆಗೆ ಮಡದಿ ಶ್ರೀದೇವಿಯೊಂದಿಗೆ ಶಿವಮೊಗ್ಗಕ್ಕೆ ಹೋಗಿದ್ದೆ. ಆಕೆ ...ಬೇಕಾಗಿದ್ದ ಮಾತ್ರೆ ತರಲು ಹೊರಟರೆ, ಸೌಳಂಗ ರಸ್ತೆಯಲ್ಲಿರುವ 'ಮೋರ್' ...ಗೆ ಆಕರ್ಷಿಸಿತು. 'ತರಕಾರಿ ಸಂತೆ' ಅಂತ ದಪ್ಪಕ್ಷರದ ಬೋರ್ಡು ಮಳಿಗೆಯ ...ದೆ ನೇತಾಡುತ್ತಿದ್ದದ್ದು ಅದಕ್ಕೆ ಕಾರಣ. ಆರ್‌ಎಂಸಿ ಯಾರ್ಡ್‌ನಲ್ಲಿ ಕಟ್ಟಿದ್ದ ...ರಿ ಮಾರುಕಟ್ಟೆಯಂತೆ ಏನಾದರೂ ವ್ಯವಸ್ಥೆ ಮಾಡಿದ್ದಾರಾ ಅಂತ ಕುತೂಹಲ ...ಗಾಯ್ತು. ಮನೆಯಾಕೆ ದಿನಸಿ ಸಾಮಾನನ್ನೂ ತರಬೇಕಿದ್ದುದರಿಂದ ಆಕೆ ...ಗ್ರದರೊಳಗೆ 'ಮೋರ್' ಹೊಕ್ಕು ಹೊರಬರುವುದಾಗಿ ನಿರ್ಧರಿಸಿದೆ.

...ಹೋದ ತಕ್ಷಣಕ್ಕೆ ಸೈಕಲ್ ಬ್ರಾಂಡ್ ಅಗರ್‌ಬತ್ತಿ ಖರೀದಿಸಲು ಹುಡುಕಾಟ ...ಶಿದ್ದೆನೆ. ಮನೆಗೆ ಬೇಕಾದ ಎಲ್ಲಾ ಸಾಮಾನುಗಳೂ ಪ್ಲಾಸ್ಟಿಕ್ ಕವರ್‌ನೊಳಗೆ ...ಕೇರಿಸಲ್ಪಟ್ಟಿರುವುದು ಕಣ್ಣಿಗೆ ಬಿತ್ತು. ಯಾವ ಕಡೆಯಿಂದ ಹುಡುಕಾಡಿದರೂ ... ಒಂದಕ್ಷರ ಕನ್ನಡ ಸಿಗಲಿಲ್ಲ. 'ಅಯಾ ಪಾಕೆಟ್ಟುಗಳ ಮೇಲೆ ಕನ್ನಡದಲ್ಲಿ ... ಒದಿದ್ರೆ, ನಮ್ಮಂಥ ಇಂಗ್ಲಿಷ್ ಬಾರದ ಗಿರಾಕಿಗಳಿಗೆ ಅನುಕೂಲ ಆಗ್ತದೆ. ಇಲ್ಲಿದ್ರೆ ಏನೂ ಅರ್ಥಾಗ್ದೆ ವಾಪಾಸೋಗ್ಬೇಕಾಗುತ್ತೆ. ಇದ್ರಿಂದ ನಿಮ್ಗೇ ಲಾಸ್ ಅಲ್ವೇನಯ್ಯಾ' ಅಂದೆ. 'ಮೋರ್'ನ ಜನರಲ್ ಮ್ಯಾನೇಜರ್ ಇಸ್ರಾನ್ 'ಬೆಂಗಳೂರಿನ ಹೆಡ್ಡಾಫೀಸಿಗೆ ಈ ಬಗ್ಗೆ ತಿಳಿಸ್ತೀವಿ' ಅಂತ ವಿನಮ್ರನಾಗಿ ಆಶ್ವಾಸನೆ ನೀಡಿ ತನ್ನ ಕೆಲಸ ಮುಂದುವರೆಸಿದ.



ಯಾಕೋ ನನಗಿದರಿಂದ ಸಮಾಧಾನವಾಗ ಲಿಲ್ಲ. ಆ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವ ಹತ್ತಿರವಿದ್ದುದರಿಂದ 'ಕನ್ನಡದಲ್ಲಿ ಏಕೆ ಹೆಸರು, ದರ ಪಟ್ಟಿ ಹಾಕಿಲ್ಲಾಂತ ಯಾರಾದ್ರು ಕೇಳಿದ್ರೆ ಏನು ಹೇಳ್ತೀರಿ' ಅಂತ ಇಸ್ರಾನ್‌ನನ್ನು ಮತ್ತೊಮ್ಮೆ ಮಾತಿಗೆಳೆದೆ. ಆಗ ಆತನ ಮುಖದಲ್ಲಿ ಸ್ವಲ್ಪ ಭಯ ಕಾಣಲಾರಂಭಿಸಿತು. ಆತ 'ಹೆಡ್ಡಾಫೀಸಿಗೆ ಮಾಹಿತಿ ಕೊಟ್ಟು ಕ್ರಮ ತಗೋಳ್ತೀವಿ. ಸ್ವಲ್ಪ ಸಮಯಾವಕಾಶ ಕೊಡಿ' ಅಂತ ವಿನಂತಿಸಿಕೊಂಡ.

ಏನೋ ನಾನು ಕೇಳಿದೆ ಅಂತ ಬಡಪಾಯಿ ಮ್ಯಾನೇಜರ್ ಸಮುಜಾಯಿಷಿ ನೀಡಿದ್ದಾನೆ. ಆದರೆ ಶಿವಮೊಗ್ಗದ ಮೋರ್‌ನವರು ಮಾರಾಟ ಮಾಡುವ ಸಾಮಾನುಗಳ ಹೆಸರನ್ನು ಕನ್ನಡದಲ್ಲಿ ಬರೆಸದೆ 'ನಾವು ಇಂಗ್ಲಿಷ್‌ನಲ್ಲಿ ಮಾತ್ರ ಬರೆಸುತ್ತೇವೆ' ಎಂಬರ್ಥದಲ್ಲಿ ಮೊಂಡು ಕೂತರೆ ಏನು ಮಾಡುವುದು ಅಂತೊಂದು ಹುಳ್ಳೆ ಕಾಡತೊಡಗಿತು.

ಆಗ ಹೊಳೆದದ್ದು ಚಳವಳಿಯ ರೂಪ ತಾಳದೆ ಯಾವ ವಿಷಯವೂ ಕಾರ್ಯರೂಪಕ್ಕೆ ಬರುವುದಿಲ್ಲ ಎಂಬ ಸತ್ಯ. ಮೋರ್ ಮುಂದಿ ಮೊಂಡು ಹಿಡಿದರೆ ರೈತ ಸಂಘ, ಕನ್ನಡ ಸಂಘಟನೆಗಳನ್ನು ಒಟ್ಟುಗೂಡಿಸಿ ಇಡೀ ಕರ್ನಾಟಕದಲ್ಲಿ ಮೋರ್‌ನಂಥ ಕನ್ನಡ ವಿರೋಧಿ ಮಳಿಗೆಗಳಿಗೊಂದು ಗತಿ ಕಾಣಿಸುವುದು ಅನಿವಾರ್ಯವೆನ್ನಿಸಿತು. ಇಂದು ಕರ್ನಾಟಕದಾದ್ಯಂತ ಹಬ್ಬಿರುವ ಇಂಥ ಮಾಲ್‌ಗಳಲ್ಲಿ ಕನ್ನಡತನವನ್ನು ಪಸರಿಸುವಂಥ ಕೆಲಸಗಳು ತುರ್ತಾಗಿ ಆಗಬೇಕಿದೆ.

ಸದ್ಯದಲ್ಲಿ ಜಿಲ್ಲಾ ರೈತ ಸಂಘಗಳು ತಮ್ಮ ವ್ಯಾಪ್ತಿಯ ಮೋರ್‌ನಂಥ ಮಳಿಗೆಗಳಿಗೆ ಭೇಟಿಯಿತ್ತು ಕನ್ನಡ ಬಳಸುವಂತೆ ಎಚ್ಚರಿಸಬೇಕಿದೆ. ಕಂಪ್ಯೂಟರ್ ಬಳಸಿದರೂ ಯಾವ ರೀತಿಯಲ್ಲೇ ಬಿಲ್ ಹಾಕಿದರೂ ಅದು ಕನ್ನಡದಲ್ಲೇ ಇರಬೇಕಾದದ್ದು ಅತ್ಯವಶ್ಯ. ಆದರೀಗ ಮೋರ್‌ನಂಥ ಮಳಿಗೆಗಳು ಯಾವುದೋ ಪರದೇಶಿ ಕಂಪನಿಗಳಂತೆ ಕಾಣಿಸುತ್ತಿವೆ.

ಸದ್ಯ ನನ್ನೂರು ಶಿವಮೊಗ್ಗದಲ್ಲಿ ತಲೆ ಎತ್ತಿರುವ ಮೋರ್‌ನೊಳಗೆ ಕನ್ನಡತನ ಪಸರಿಸಿ ಅದು ರಾಜ್ಯವ್ಯಾಪಿ ಹೈಟೆಕ್ ಮಾಲ್‌ಗಳಿಗೂ ಹಬ್ಬವೆಂಬುದು ನನ್ನ ಆಶಯ. ಸರ್ಕಾರದ ಪರವಾಗಿ ಯಾರಾದರೂ ಅಧಿಕಾರಿಗಳು ಮೋರ್‌ನಂಥ ಅಂಗಡಿಗಳಿಗೆ ಹೋಗಿ 'ರಿಪೇರಿ' ಮಾಡಿದರೂ ಸಂತೋಷ. ಚಳವಳಿಯಿಂದಲೇ ಬದಲಾವಣೆ ಜರುಗಬೇಕೆಂದೇನಿಲ್ಲ.


• ಕಡಿದಾಳು ಶಾಮಣ್ಣ

ಪ್ಯಾಟಿಯೊಂದಿಗೆ ಪ್ರೇಮಾಂಕುರ


● ಅವತ್ತು ಸಾರಾಯಿ ಅಂಗಡಿ ಮುಂದೆ ಚಿಟ್ ಕೋಳಿ ಹಿಡಿದು ನಿಂತಿದ್ದ ಸಿದ್ದನ ಬಳಿ ಕಾಸಿಲ್ಲ ಎಂದು ಪ್ಯಾಟಿಗೆ ಗೊತ್ತಾಯಿತು. ಆಗ ಅವಳೇ ಅವನಿಗೆ ಒಂದು ಕ್ವಾರ್ಟರ್ ಕೊಡಿಸಿದಳು. ಆಕೆ ಎಷ್ಟು ಹೇಳಿದರೂ ಒಪ್ಪದ ಸಿದ್ದ ಆಕೆಗೇ ತನ್ನ ಕೈಯಲ್ಲಿದ್ದ ಚಿಟ್ ಕೋಳಿಯನ್ನು ಕೊಟ್ಟಿದ್ದ. ಚಿಟ್ ಕೋಳಿಯನ್ನು ಹಿಡಿದು ಒತ್ತಾಯ ಮಾಡಿ ಸಿದ್ದನನ್ನು ತನ್ನ ಬಿಡಾರಕ್ಕೆ ಪ್ಯಾಟಿ ಕರೆದುಕೊಂಡು ಹೋಗಿದ್ದಳು. ಅವತ್ತು ಕೋಳಿ ಸಾರು ಮಾಡಿ ಸಿದ್ದನಿಗೆ ಕ್ವಾರ್ಟರ್ ಜೊತೆ ಅದನ್ನು ಬಡಿಸಿದ್ದಳು. ಅವತ್ತು ಪ್ಯಾಟಿಯಲ್ಲಿ ಮೋಕ್ಷ ಕಂಡ ಸಿದ್ದ ಅಂದಿನಿಂದ ಅವಳ ಬಿಡಾರದಲ್ಲೇ ಉಳಿದ. ಪ್ಯಾಟಿ ಕೂಡ ತನ್ನ ಬಳಗವನ್ನು ಬಿಟ್ಟು ಸಿದ್ದನ ಜೊತೆ ಸೇರಿಹೋದಳು. ●



ಮಂಗನ ಬ್ಯಾಟೆ



ಆದೊಂದು ದಿನ ಸಿದ್ದ ಬೆಸಿ ಒಡ್ಡಿ ಚಿಟ್ ಕೋಳಿ ಹಿಡಿದಿದ್ದ. ಅದನ್ನು ಯಾರಿಗಾದರೂ ಮಾರಿ ಅವತ್ತಿನ ಸಾರಾಯಿ ಖರ್ಚನ್ನು ಗಿಟ್ಟಿಸಿಕೊಳ್ಳೋಣ ಎಂದು ಪೇಟೆ ಕಡೆ ಬಂದಿದ್ದ. ಸಾರಾಯಿ ಅಂಗಡಿಯ ಹತ್ತಿರವೇ ಹಕ್ಕಿಪಿಕ್ಕಿಯವರು ಕ್ಯಾಂಪ್ ಹೂಡಿದ್ದರಿಂದ ಅವರೆಲ್ಲ ಅಂದಿನ ವ್ಯಾಪಾರ ಮುಗಿಸಿಕೊಂಡು ಸಾರಾಯಿ ಅಂಗಡಿ ಹತ್ತಿರ ಸೇರಿದ್ದರು. ಒಳ್ಳೆಯ ಗಿರಾಕಿ ಸಿಗದಿದ್ದರಿಂದ ಸಿದ್ದನ ಚಿಟ್ ಕೋಳಿ ವ್ಯಾಪಾರವಾಗದೆ ಆತನ ಹತ್ತಿರ ದುಡ್ಡಿರಲಿಲ್ಲ. ಅವತ್ತೇ ಸಿದ್ದ ಮತ್ತು ಪ್ಯಾಟಿ ನಡುವೆ ಪ್ರೇಮಾಂಕುರವಾದದ್ದು. ಅದು ನಡೆದದ್ದು ಹೀಗೆ:



● ಕಲ್ಕುಳಿ ವಿಠ್ಠಲ ಹೆಗ್ಡೆ

ಹಕ್ಕಿಪಿಕ್ಕಿಗಳ ಕ್ಯಾಂಪಿನಲ್ಲಿದ್ದ ಕೆಳ ಪ್ಯಾಟಿಗೆ ಎಲೆ ಅಡಿಕೆ ಹಾಕುವ ಚಟ. ಅದರಲ್ಲೂ ಮಲೆನಾಡು ಅಡಿಕೆ ಅಂದರೆ ಆಕೆಗೆ ಅಚ್ಚುಮೆಚ್ಚು. ಆಕೆ ಊರೂರು ಅಲೆಯುತ್ತಿದ್ದರೂ ಮಲೆನಾಡು ಅಡಿಕೆಗಾಗಿ ಹಂಬಲಿಸುತ್ತಿದ್ದಳು. ಅದಕ್ಕೆ ತಕ್ಕಂತೆ ಸಿದ್ದನ ಎಲೆಅಡಿಕೆ ಚೀಲವೆಂದರೆ ಅದು ಸಂಚಿ ಹೊನ್ನಮ್ಮಳ ಭಂಡಾರಕ್ಕೆ ಸಮಾ ಎಂಬಂತಿತ್ತು. ಅದಕ್ಕೆ ಕಾರಣ, ಆತ ಯಾರ ಮನೆಗೆ ಹೋದರೂ ಮುಂದೊಂದು ದಿನ ಯಾತಕ್ಕಾದರೂ ಈ ಸಿದ್ದ ಉಪಯೋಗಕ್ಕೆ ಬರುತ್ತಾನೆಂದು ಎಲ್ಲರೂ ಅವನಿಗೆ ಬೊಗಸೆಗಟ್ಟಲೆ ಅಡಿಕೆ ನೀಡುತ್ತಿದ್ದರು. ಪರಿಣಾಮವಾಗಿ ಸಿದ್ದನ ಅಡಿಕೆ ಚೀಲಕ್ಕೆ ಎಂದೂ ದುರ್ಭಿಕ್ಷ ಎದುರಾಗಿದ್ದಿಲ್ಲ.

ಹೀಗೆ ಜನ ನೀಡಿದ್ದ ಅಡಿಕೆಯಲ್ಲಿ ಸಿದ್ದ ತನಗೆ ಬೇಕಾದ ಗಂಡು ಅಡಿಕೆಯನ್ನು ಆರಿಸಿ ಇಟ್ಟುಕೊಂಡಿರುತ್ತಿದ್ದ. ಯಾರು ಕೇಳಿದರೂ ಸಿದ್ದ ಅಡಿಕೆ ಮತ್ತು ಎಲೆಯನ್ನು ಕೊಡುತ್ತಿದ್ದ. ಮಲೆನಾಡಿನಲ್ಲಿ ಊಟಕ್ಕಿಂತ ಎಲೆಅಡಿಕೆ ಮುಖ್ಯವಾದದ್ದು. ನಮ್ಮಲ್ಲಿ ಹದವಾಗಿ ಬೆಳೆದ ಅಡಿಕೆಯನ್ನು ಕೊಯ್ದು ಸುಲಿದು ಅದರೊಳಗಿನ ಬೆಣೆಯನ್ನು ಮಧ್ಯಕ್ಕೆ ಕತ್ತರಿಸಿ ಎರಡು ಭಾಗ ಮಾಡಿ ಬೇಯಿಸುತ್ತಾರೆ. ಹೀಗೆ ಹೋಳು ಮಾಡಿದ ಅಡಿಕೆಯಲ್ಲಿ ಮೊಳಕೆ ಒಡೆಯುವ ಮೇಲ್ಭಾಗದ ಅಡಿಕೆಗೆ ಹೆಣ್ಣು ಅಡಿಕೆ ಎಂದೂ, ಕೆಳಭಾಗದ ಅಡಿಕೆಯನ್ನು ಗಂಡು ಅಡಿಕೆ ಎಂದೂ ಕರೆಯುತ್ತಾರೆ. ಅಡಿಕೆಯನ್ನು ಬೇಯಿಸಿದಾಗ ಅಡಿಕೆಯ ಕಣ್ಣಿನ ಭಾಗ ಮತ್ತು ಹೆಚ್ಚಿದ ಭಾಗ - ಎರಡೂ ಕಡೆ ತೂತಿನಂತೆ ಕೆಳಕ್ಕೆ ಹೋಗಿರುತ್ತದೆ. ಆ ಕಾರಣಕ್ಕೇ ಎರಡು ತೂತಿರುವ ಮೇಲ್ಭಾಗದ ಅಡಿಕೆಯನ್ನು ಹೆಣ್ಣು ಎಂದು, ಒಂದೇ ತೂತಿರುವ ಕೆಳಭಾಗದ ಅಡಿಕೆಯನ್ನು ಗಂಡು ಎಂದು ಕರೆಯುತ್ತಾರೇನೋ, ಗೊತ್ತಿಲ್ಲ. ಅವಳಿಜವಳಿ ಅಲ್ಲದಿದ್ದರೂ ಒಂದೇ ಅಡಿಕೆ ಬೆಳೆಯಲ್ಲಿ ಸಿಗುವ ಅಡಿಕೆಯನ್ನೂ ಹೀಗೆ ಗಂಡು-ಹೆಣ್ಣು ಎಂದು ಭೇದ ಮಾಡಲಾಗಿದೆ. ಅದೇಕೋ ಗೊತ್ತಿಲ್ಲ, ಎಲೆ ಅಡಿಕೆ ಹಾಕುವವರು ಕೆಳಭಾಗದ ಗಂಡು ಅಡಿಕೆಯನ್ನು ವಿಶೇಷವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಹಾಗೆ ಸಿದ್ದ ಕೂಡ ಗಂಡು ಅಡಿಕೆಯನ್ನು ಆಯ್ದು ಇಟ್ಟುಕೊಳ್ಳುತ್ತಿದ್ದ.

ಅಷ್ಟೇ ಅಲ್ಲ, ನಿತ್ಯ ತಿನ್ನಲೆಂದು ಸಿದ್ದ ಪಂಚವಳ್ಳಿ ಎಲೆ ಹಂಬನ್ನೂ ತನ್ನ ಬಿಡಾರದ ಪಕ್ಕದಲ್ಲಿದ್ದ ಮಾವಿನ ಮರಕ್ಕೆ ನೆಟ್ಟುಕೊಂಡಿದ್ದ. ಬೆಳಗ್ಗೆ ಎದ್ದಕೂಡಲೇ ಆತ ಮಾಡುತ್ತಿದ್ದ ಮೊದಲ ಕೆಲಸ ಆ ಎಲೆ ಹಂಬಿಗೆ ನೀರು ಹಾಕುವುದು. ನಂತರ ಆ ಮರಕ್ಕೆ ಉದ್ದದ ಏಣಿಯನ್ನು ಕಟ್ಟಿ, ಅದನ್ನು ಹತ್ತಿ ಆ ದಿನಕ್ಕೆ ಬೇಕಾದಷ್ಟು ಎಳೆ ಎಲೆಗಳನ್ನು ಕೊಯ್ಯುವುದು. ಎಲೆಅಡಿಕೆ ಹಾಕುವಾಗ ಸಿದ್ದ ಈ ಪಂಚವಳ್ಳಿಯ ಎಳೆ ಎಲೆಯನ್ನು ತೆಗೆದು ಎಲೆಯ ತುದಿಯನ್ನು ತನ್ನ ಉಗುರಿನಿಂದ ಕತ್ತರಿಸಿ ತನ್ನ ಕೆನ್ನೆಗೆ ಹಚ್ಚಿಕೊಳ್ಳುತ್ತಿದ್ದ. ಆಮೇಲೆ, ಎಲೆಯ ತೊಟ್ಟನ್ನು ಕತ್ತರಿಸುತ್ತಿದ್ದ. ಎಲೆಯ ನರಗಳನ್ನು ಸಿರಿ ಎಂದು ಕರೆಯುತ್ತಾರೆ. ಸಿದ್ದ ಎಲೆಯ ಸಿರಿಗಳನ್ನು ನಾಜೂಕಿನಿಂದ ತೆಗೆಯುತ್ತಿದ್ದ. (ಎಷ್ಟೇ ಪ್ರಯತ್ನಿಸಿದರೂ ಸಿದ್ದನಂತೆ ಎಲೆಯ ಸಿರಿಯನ್ನು ತೆಗೆಯಲು ಯಾರಿಂದಲೂ ಆಗುತ್ತಿರಲಿಲ್ಲ) ತೆಳು ಪೊರೆಯಂತಿರುವ ಸಿರಿಗಳನ್ನು ತಗೆದ ನಂತರ ಸಿದ್ದ ಎಲೆಗೆ ತೆಳುವಾಗಿ ಸುಣ್ಣವನ್ನು ಲೇಪಿಸುತ್ತಿದ್ದ.

ಎಲೆಅಡಿಕೆಗೆ ಸುಣ್ಣ ಬಹಳ ಮುಖ್ಯವಾದ ಪದಾರ್ಥವಾದ್ದರಿಂದ ಅದನ್ನೂ ಸಿದ್ದ ತನಗೆ ಬೇಕಾದಂತೆ ತಯಾರಿಸಿಕೊಳ್ಳುತ್ತಿದ್ದ. ಆತ ಸುಣ್ಣವನ್ನು ತಯಾರಿಸುತ್ತಿದ್ದ ರೀತಿಯೇ ವಿಶಿಷ್ಟವಾಗಿತ್ತು. ಸಾಮಾನ್ಯವಾಗಿ ಎಲ್ಲರೂ ಸುಣ್ಣವನ್ನು ಬೇಯಿಸಿ, ಅದನ್ನು ಸೋಸಿ, ಅದಕ್ಕೆ ಬೆಣ್ಣೆ ಸೇರಿಸಿ ಮಡಿಕೆಯಲ್ಲಿ ಸಂಗ್ರಹಿಸಿಡುತ್ತಾರೆ. ಆದರೆ ಒಳ್ಳೆ ಸುಣ್ಣ ಬೇಕೆಂದರೆ ಅದಕ್ಕೆ ಒಳ್ಳೆ ಬೆಣ್ಣೆ ಉಪಯೋಗಿಸಬೇಕು. ಆ ಕಾರಣಕ್ಕೇ ಸಿದ್ದ ಸುಣ್ಣ ಬೇಯಿಸುವ ಮುನ್ನ ತನಗೆ ಗೊತ್ತಿದ್ದ ಮನೆಗಳಿಂದ ಒಳ್ಳೆಯ ಬೆಣ್ಣೆ ತಂದಿರುತಿದ್ದ.

ಸಿದ್ದ ತಯಾರಿಸಿದ್ದ ಸುಣ್ಣವೆಂದರೆ ಎಲೆಅಡಿಕೆ ತಿನ್ನುವವರಿಗೆಲ್ಲ ಅಚ್ಚುಮೆಚ್ಚು. ಆದರೆ ಸಿದ್ದ ಮಂಗನ್ನು ತಿನ್ನುವ ಕೀಳು ಜಾತಿಯವನಾದ್ದರಿಂದ ಆತನ ಸುಣ್ಣವನ್ನು ಮೇಲು ಜಾತಿಯವರು ಮುಟ್ಟುವಂತಿರಲಿಲ್ಲ. ಜಾತಿ ವ್ಯವಸ್ಥೆಯಲ್ಲಿ ನೀರಿಗಿರುವಷ್ಟೇ ವಿಶೇಷ ಸ್ಥಾನ ಸುಣ್ಣಕ್ಕೂ ಇದೆ. ಸಮಾನ ಜಾತಿಯವರು ಮಾತ್ರ ಪರಸ್ಪರ ಮನೆಯಲ್ಲಿ ನೀರು-ಸುಣ್ಣವನ್ನು ಮುಟ್ಟುತ್ತಾರೆ.

ಸಿದ್ದ ತಯಾರಿಸಿದ್ದ ಸುಣ್ಣ ಬೆಣ್ಣೆಯಂತೆ - ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ಕ್ರೀಮಿನಂತೆ - ಇರುತ್ತಿತ್ತು. ಏಕೆಂದರೆ ಸುಣ್ಣವನ್ನು ಸರಿಯಾಗಿ ತಯಾರಿಸದಿದ್ದರೆ ಅದು ಕಲ್ಲಿನಂತೆ ಇರುತ್ತದೆ. ಆದ್ದರಿಂದ ಸರಿಯಾಗಿ ತಯಾರಿಸಿದ ಸುಣ್ಣಕ್ಕೆ ನಮ್ಮಲ್ಲಿ ಜಾಗಂಟೆ ಸುಣ್ಣ ಎಂದು ಕರೆಯುತ್ತಾರೆ. ಅಂತಹ ಸುಣ್ಣ ಹರಳುಹರಳಾಗಿದ್ದು ಅದನ್ನು ಜಾಗಂಟೆ ಹೊಡೆದಂತೆ ಹೊಡೆಯಬೇಕು. ಇಲ್ಲವಾದಲ್ಲಿ ಅದನ್ನು ವೀಳ್ಯದ ಎಲೆಯ ಮೇಲೆ ಸುಲಭವಾಗಿ ಲೇಪಿಸಲಾ[...]ವುದಿಲ್ಲ.

ಸಿದ್ದ ಎಲೆ ಅಡಿಕೆ ಹಾಕುವ ಸೊಬಗನ್ನು ನೋಡಿದ[...] ದ್ಯಾರೂ ಅದನ್ನು ಮರೆಯುತ್ತಿರಲಿಲ್ಲ. ಎಚ್.ಎಲ್.ಕೇಶ[...] ಮೂರ್ತಿಯವರು ಒಮ್ಮೆ ತಮ್ಮ ಲೇಖನವೊಂದರ[...] 'ಮಂಡ್ಯದಲ್ಲಿ ಹೆಣ್ಣು ಗಂಡು ಸೇರುವುದಕ್ಕೆ ಎಲೆಅ[...] ಅಂತ ಕರೆಯುತ್ತಾರೆ' ಎಂದು ಬರೆದಿದ್ದ ನೆನಪು ಇ[...] ಅದೇನೇ ಇರಲಿ, ರಸಿಕನಾದ ಸಿದ್ದನ ಎಲೆ ಅಡಿಕೆ ಕಾರ್ಯಕ್ರ[...] ವೆಂದರೆ ಅದು ಕನಿಷ್ಠ ಕಾಲು ಗಂಟೆಯ ಕಾರ್ಯಕ್ರ[...] ಪ್ರಶಸ್ತವಾದ ಸ್ಥಳದಲ್ಲಿ ಕುಳಿತು ಅವರ ಪ್ರಮು[...] ಬಂಡವಾಳವಾದ ಎಲೆ ಅಡಿಕೆ ಚೀಲವನ್ನು ತೆಗೆಯುತ್ತಿ[...] ಅದರಿಂದ ಅಡಿಕೆ, ಎಲೆಗಳನ್ನು ತೆಗೆದು, ಅವುಗಳನ್ನು ರೆಡಿಮಾಡಿ, ಸುಣ್ಣವನ್ನು ತೆಳುವಾಗಿ ಲೇಪಿಸಿ, ಟೀಎಲೆಗಳ[...] ಕತ್ತರಿಸಿಟ್ಟುಕೊಂಡಿದ್ದ ಹೊಗೆಸೊಪ್ಪಿನಲ್ಲಿ ಒಂದು ಚಿಟಿಕೆಯ[...] ತೆಗೆದು, ಅಂಗೈಗೆ ಹಚ್ಚಿಕೊಂಡಿದ್ದ ಸುಣ್ಣದೊಂದಿಗೆ ಹೊ[...] ಸೊಪ್ಪನ್ನು ಚೆನ್ನಾಗಿ ತಿಕ್ಕಿ, ಅದನ್ನು ನಶ್ಯದಂತೆ ಮಾಡಿ ತ[...] ದವಡೆಯ ಪಕ್ಕಕ್ಕೆ ಇಡುತ್ತಿದ್ದ. ಹೀಗೆ ಸಿದ್ದ ಅಚ್ಚುಕಟ್ಟಾ[...] ಎಲೆಅಡಿಕೆಯನ್ನು ತಯಾರಿಸುತ್ತಿದ್ದ. ಸಿ[...] ಏನೇ ಮಾಡಿದರೂ ಅಚ್ಚುಕಟ್ಟಾ[...] ಮಾಡುತ್ತಿದ್ದ.

ಸಿದ್ದ ಎಲೆ ಅಡಿಕೆ ಹಾಕುವ ಚಂ[...]ವನ್ನು ನೋಡಿಯೇ ಪ್ಯಾಟಿ ಅವನ[...] ಮೆಚ್ಚಿಕೊಂಡಿದ್ದಳು. ಅದಕ್ಕಿಂತ ಮು[...]ವಾಗಿ ತನ್ನ ಕಿಂದರಿ ಹಾಡುಗಳೊಂದಿ[...] ಅನೇಕ ಜನರನ್ನು ಸ್ವರ್ಗಕ್ಕೆ ಸಾಗಿಸುತ್ತಿ[...] ಸಿದ್ದನಿಗೆ ಮಡಿದವರ ಮನೆಯವ[...] ಬಳುವಳಿಯಾಗಿ ಸೀರೆಗಳನ್ನು ಕೊಡು[...]ತ್ತಿದ್ದರು. ಆ ಸೀರೆಗಳನ್ನು ಸಿದ್ದ ತನ[...] ಬೇಕಾದವರಿಗೆ ಕೊಡುತ್ತಿದ್ದ. ಒವ[...] ಅಂತಹ ಒಂದು ಸೀರೆಯನ್ನು ಪ್ಯಾಟಿ[...] ಕೊಟ್ಟಿದ್ದ. ಅವಳ ಜೀವಮಾನದಲ್ಲಿ ಅವ[...]ಗೆಂದು ಯಾರೂ ಏನನ್ನೂ ಕೊಟ್ಟಿರಲಿ[...] ಆದ್ದರಿಂದ ಆ ಸೀರೆ ಅವಳಿಗೆ ಸಿಕ್ಕ[...] ಅತಿ ದೊಡ್ಡ ಬಳುವಳಿಯಾಗಿತ್ತು. ಸಿದ್ದನ[...] ಪ್ಯಾಟಿಗೆ ಆಸಕ್ತಿ ಹುಟ್ಟಲು ಆಕೆಯ ಗಂಡ[...] ನಿರ್ಲಕ್ಷ್ಯವೂ ಕಾರಣವಾಗಿತ್ತು.

ಸಿದ್ದ ಆಳೆತ್ತರ ಇರದಿದ್ದರೂ ಅವನ ಉದಾರ[...] ಬುದ್ಧಿವಂತಿಕೆ, ನಿಸ್ವಾರ್ಥ ಗುಣ, ನಿಷ್ಕಳಂಕ ಸ್ನೇಹ, ಎಲೆಅಡಿ[...] ಹಾಕುವ ಶೈಲಿ, ಅಚ್ಚುಕಟ್ಟುತನ... ಎಲ್ಲವೂ ಸೇರಿಕೊಂಡ[...] ಪ್ಯಾಟಿ ಪಾಲಿಗೆ ಸಿದ್ದನನ್ನು ಬಿಟ್ಟರೆ ಪ್ರಪಂಚದಲ್ಲಿ ಬೇ[...] ಯಾರೂ ಇಲ್ಲ ಎಂಬಂತಾಗಿತ್ತು.

ಅವತ್ತು ಸಾರಾಯಿ ಅಂಗಡಿ ಮುಂದೆ ಚಿಟ್ ಕೋ[...] ಹಿಡಿದು ನಿಂತಿದ್ದ ಸಿದ್ದನ ಬಳಿ ಕಾಸಿಲ್ಲ ಎಂದು ಪ್ಯಾಟಿ[...] ಗೊತ್ತಾಯಿತು. ಆಗ ಅವಳೇ ಅವನಿಗೆ ಒಂದು ಕ್ವಾರ್ಟ[...] ಕೊಡಿಸಿದಳು. ಆಕೆ ಎಷ್ಟು ಹೇಳಿದರೂ ಒಪ್ಪದ ಸಿ[...] ಆಕೆಗೇ ತನ್ನ ಕೈಯಲ್ಲಿದ್ದ ಚಿಟ್ ಕೋಳಿಯನ್ನು ಕೊಟ್ಟಿ[...] ಚಿಟ್ ಕೋಳಿಯನ್ನು ಹಿಡಿದು ಒತ್ತಾಯ ಮಾಡಿ ಸಿದ್ದನ[...] ತನ್ನ ಬಿಡಾರಕ್ಕೆ ಪ್ಯಾಟಿ ಕರೆದುಕೊಂಡು ಹೋಗಿದ್ದ[...] ಅವತ್ತು ಕೋಳಿ ಸಾರು ಮಾಡಿ ಸಿದ್ದನಿಗೆ ಕ್ವಾರ್ಟ[...] ಜೊತೆ ಅದನ್ನು ಬಡಿಸಿದ್ದಳು. ಅವತ್ತು ಪ್ಯಾಟಿಯಲ್ಲಿ ಮೋ[...] ಕಂಡ ಸಿದ್ದ ಅಂದಿನಿಂದ ಅವಳ ಬಿಡಾರದಲ್ಲೇ ಉಳಿ[...] ಪ್ಯಾಟಿ ಕೂಡ ತನ್ನ ಬಳಗವನ್ನು ಬಿಟ್ಟು ಸಿದ್ದನ ಜೊ[...] ಸೇರಿಹೋದಳು.


ಅಂದಿನಿಂದ ಅವರಿಬ್ಬರದ್ದು ಜೋಡಿ ಬದುಕು...

(ಮುಂದುವರೆಯುವುದ[...]

ಇಂತಿ ನಿನ್ನ ಕ್ಷಮೆ ಇರಲಿ.....

ಅವಳು: ನನ್ನ ಹೃದಯ ಭಾವನೆಗಳು ಬತ್ತಿ ಬರಡು ನೆಲವಾಗಿದೆ.
ನಾನು: ಚಿಂತೆ ಬಿಡು, ಹದ ಮಾಡಿ ಉತ್ತಿ-ಬಿತ್ತಿ ಬೆಳೆ ತೆಗೆಯುತ್ತೇನೆ.
ಅವಳು: ನೀರ ಸೆಲೆ ಬತ್ತಿದೆ.
ನಾನು: ಹಠ ಹಿಡಿದು ಮಳೆ ಭರಿಸುತ್ತೇನೆ.
ಅವಳು: ಧರ್ಮ-ದ್ವೇಷದ ಕಳೆ ಬೆಳೆಯುತ್ತದೆ.
ನಾನು: ಆ ಕಳೆ ಕಿತ್ತು ನಂಬಿಕೆಯ ಹೂ ಗಿಡಗಳ ನೆಡುತ್ತೇನೆ.
ಅವಳು: ಹೂ ಬಿಡುವ ಮುಂಚೆ ಹಕ್ಕಿ-ಪಿಕ್ಕಿಗಳ ಕಾಟ.
ನಾನು: ಅವುಗಳಿಗೂ ತುತ್ತು-ಕಾಳು ಕೂಡಿಡುತ್ತೇನೆ.
ಅವಳು: ದೇಶ ಮುರಿದು ದೇಶ ಕಟ್ಟಿದ ಕರಾಳ ನೆನಪುಗಳ ಇಬ್ಬನಿ ಸುರಿಯುತ್ತಿದೆ.
ನಾನು: ಕ್ಷಣಾರ್ಧದಲ್ಲೆ ಕರಗುವಂತೆ ಮಮತೆಯ ಕಾವು ಕೊಡುತ್ತೇನೆ.
ಅವಳು: ಮಸೀದಿಯ ಬುರುಜು ಕೆಡಪಿದ ನೋವು ಕಾಡುತ್ತಿದೆ.
ನಾನು: ನೋವಿಗೆ ಮುಲಾಮು ಹಚ್ಚಿ 'ಅಲ್ಲಾನ' ಕ್ಷಮೆ ಕೋರುತ್ತೇನೆ. 'ಗಾಂಧಿ' ಪಾದತಲದಲ್ಲಿ ತಲೆಯಿಟ್ಟು ಉರಿದುಹೋದ ಜೀವಗಳಿಗೆ ಶಾಂತಿ ಕೋರುತ್ತೇನೆ.
ಅವಳು: ಸಂತಕ್ರಿಸ್ತನ ಮೇಲೆ ದಾಳಿ ನಡೆಯುತ್ತಿದೆ...
ನಾನು: ಆ ರಾಮ ಭಕ್ತರಿಗೆ ಸದ್ಬುದ್ಧಿ ಕೊಡುವಂತೆ 'ಅಯೋಧ್ಯಾ ರಾಮ'ನಲ್ಲಿ ಮೊರೆಯಿಡುತೇನೆ.
ಅವಳು: ಹರಿದ ರಕ್ತಕ್ಕೆ ಬೆಲೆ ಕಟ್ಟಲಾದೀತೆ?
ನಾನು: ಇಲ್ಲ... ಬುದ್ಧ ಬಸವ, ಸಂತಷರೀಫ, ಅಂಬೇಡ್ಕರ್‌ರನ್ನು ಮುಂದಿಟ್ಟುಕೊಂಡು ಮುರಿದ ಮನಸ್ಸುಗಳ ಕಟ್ಟೋಣ... ಮೊಗ್ಗು, ಹೂವು, ಕಾಳು ತೆನೆತೂಗುವ ಬೆಳೆ ತೆಗೆಯೋಣ..
ಅವಳು: ಕಣವೆಲ್ಲಿ?
ನಾನು: ನಿನ್ನೆದೆ ಮೇಲೆ.....
ಅವಳು: ಸುಗ್ಗಿ ಹಬ್ಬ?
ನಾನು: ನಿನ್ನ ಕಣ್ಣಲಿ.
ಅವಳು: ಫಲವೇನು?
ನಾನು: ಊರ ಅಗಸೆ ಬಾಗಿಲಿಗೆ ತಳಿರುತೋರಣ, ಮನುಷ್ಯತ್ವಕ್ಕೆ ಹೋಳಿಗೆ ಊರಣ.
ಅವಳು: ನಂಬಬಹುದೆ?
ನಾನು: ನಂಬಿಕೆ ಮೇಲೆ ಜಗತ್ತು ನಿಂತಿದೆ. ಅದರೊಳಗೆ ನಾವಿಬ್ಬರು... ಅವ್ವ (ಭಾರತಾಂಬೆ), ನಿನ್ನ ಒಡಲೊಳಗೆ ರಾಮ, ರಹೀಮ, ಕ್ರಿಸ್ತ ಎಲ್ಲರೂ...

● ಎನ್. ರವಿಕುಮಾರ್, ಶಿವಮೊಗ್ಗ



ನೀನಾಸಂನಿಂದ ಕುವೆಂಪುಗೆ ಅಪಚಾರವಾಗಿಲ್ಲ

ಪತ್ರಿಕೆಯ ವಿಶೇಷಾಂಕದಲ್ಲಿ ಪ್ರಕಟವಾಗಿರುವ ಸಮ ...ನ ರಂಗಭೂಮಿಯ ಕುರಿತ ತಮ್ಮ ಲೇಖನದಲ್ಲಿ ...ಪ್ಪ ದಳವಾಯಿಯವರು ಹೆಗ್ಗೋಡಿನ ನೀನಾಸಂ ಸಂಸ್ಥೆಯ ಬಗ್ಗೆ ಹೇಳಿರುವ ಯಾವ ಮಾತುಗಳೂ ...ಲ್ಲ. ಹೆಗ್ಗೋಡಿನಲ್ಲಿ ನಾಟಕದ ಬದಲು ಮಡೆಸ್ನಾನದ ...ವಣಿಯ ಸಮರ್ಥನೆ ನಡೆದಿದೆ ಎಂದು ಅವರು ...ುತ್ತಾರೆ. ಬಹುಶಃ ಪ್ರಜಾವಾಣಿಯಲ್ಲಿ ಇತ್ತೀಚಿಗೆ ...ವಾದ ಅಕ್ಷರ ಅವರ ಬಹುಚರ್ಚಿತ ಲೇಖನವೊಂದನ್ನು ...ನಲ್ಲಿಟ್ಟುಕೊಂಡು ಈ ಮಾತನ್ನು ಹೇಳಿದ್ದಾರೆ. ತಾನು ...ಸ್ನಾನದಂತಹ ಆಚರಣೆಯ ಸಮರ್ಥಕನಲ್ಲವೆಂದು ಆ ...ದಲ್ಲೂ, ಚರ್ಚೆಯ ಕೊನೆಯಲ್ಲಿ ಬರೆದ ಪ್ರತಿಕ್ರಿಯೆ ...ಲ್ಲೂ ಸ್ಪಷ್ಟವಾಗಿಯೇ ಅಕ್ಷರ ಹೇಳಿದ್ದಾರೆ. ಇಷ್ಟಾದರೂ ... ಮಡೆಸ್ನಾನದಂತಹ ಆಚರಣೆಯ ಸಮರ್ಥನೆಯೇ ...ಎಂದು ರಾಜಪ್ಪ ದಳವಾಯಿ ಅವರಿಗೆ ...ಸಿರಬಹುದು. ಆದರೆ ಅದನ್ನೇ ...ವಾಗಿಟ್ಟುಕೊಂಡು, 60 ವರ್ಷಗಳ ಚರಿತ್ರೆ ...ನ ಒಂದು ಸಂಸ್ಥೆಯ ಚಟುವಟಿಕೆಗಳನ್ನು ...ವಾರವಾಗಿ ಹೀಗೆಳೆಯುವುದು ಎಷ್ಟು ...ಕ್ಕೂ ಸಲ್ಲದು. ನೀನಾಸಂ, ನೀನಾಸಂ ...ಶಾಲೆ ಮತ್ತು ಅಕ್ಷರ ಪ್ರಕಾಶನಗಳು ...ಜನಿಕರ ಕಣ್ಣಿಗೆ ಸದಾ ತಮ್ಮನ್ನು ...ಂಡಿರುವ ಸಂಸ್ಥೆಗಳು; ಆಸಕ್ತರಾದ ...ಗೂ ಆ ಸಂಸ್ಥೆಗಳ ಒಳಗೆ ಸ್ವಾಗತವಿದೆ, ಅಭಿಪ್ರಾಯ ಭೇದಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವೂ ...ಸುಬ್ಬಣ್ಣನವರ ಕಾಲದಲ್ಲಿ ಮಾತ್ರವಲ್ಲ ಅಕ್ಷರ ಅವರು ...ಸ್ಥರಾಗಿರುವ ಈ ಕಾಲದಲ್ಲೂ ಇದನ್ನು ಕಂಡುಂಡಿದ್ದೇವೆ. ...ಯಿಂದ ನೀನಾಸಂ ನಮ್ಮ ಪ್ರಜಾಪ್ರಭುತ್ವದ ಹಲವು ...ಳಿಗಿಂತ ಹೆಚ್ಚು ಮುಕ್ತವಾಗಿರುವ ಸಂಸ್ಥೆ. ನಮ್ಮ ...ಲೇಜುಗಳು, ವಿಶ್ವವಿದ್ಯಾಲಯಗಳು, ಮಠಮಾನ್ಯಗಳು, ದೃಶ್ಯಮಾಧ್ಯಮಗಳು, ಅಷ್ಟೇ ಯಾಕೆ ಇತರ ಕೆಲವು ಸಂಸ್ಥೆಗಳಿಗಿಂತ ನೀನಾಸಂನಲ್ಲಿ ಹೆಚ್ಚು ವೈಚಾರಿಕ ...ತ್ರ್ಯವಿದೆ. ಈ ಮಾತುಗಳನ್ನು ಬರಿ ಅದರ ...ಬೆಲೆಯಲ್ಲಿ ನಂಬುವ ಅವಶ್ಯಕತೆ ಏನೂ ಇಲ್ಲ, ಈ ...ುಲ್ಲಿ ನಡೆದ ಕಾರ್ಯಚಟುವಟಿಕೆಗಳು ... ಅದರಲ್ಲಿ ಭಾಗವಹಿಸಿದವರ ಅಭಿ...ಯಗಳ ಆಧಾರದಲ್ಲಿಯೇ ಇದನ್ನು ...ಳ್ಳಬಹುದಾಗಿದೆ. ಹೀಗೆ ಸಾರ್ವಜನಿಕ ...ರೆದುಕೊಂಡಿರುವ ಒಂದು ಸಂಸ್ಥೆಯಲ್ಲಿ ...ಕ ಸಾಂಸ್ಕೃತಿಕ ಒಳಸಂಚು ನಡೆಯುತ್ತಿದೆ ...ರ್ಥದಲ್ಲಿ ರಾಜಪ್ಪನವರು ಬರೆದಿರುವುದೇ ...ವಿರೋಧಾಭಾಸ. ಅಕ್ಷರ ಅವರನ್ನು ...ವಾಗಿ ಹೆಸರಿಸಿ ರಾಜಪ್ಪ ದಳವಾಯಿ ...ು ಹೇಳಿರುವ ಮಾತುಗಳು ಪೂರ್ವಗ್ರಹ ...ವಾಗಿವೆ ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯ.

... ವರ್ಷದ ನೀನಾಸಂ ತಿರುಗಾಟದಲ್ಲಿ, ನಾಡಿನಾದ್ಯಂತ ...ನಗೊಳ್ಳುತ್ತಿರುವ 'ಶೂದ್ರ ತಪಸ್ವಿ' ನಾಟಕದ ಬಗ್ಗೆಯೂ ... ಇಲ್ಲಸಲ್ಲದ ಮಾತುಗಳನ್ನಾಡಿದ್ದಾರೆ. ಈ ನಾಟಕದ ...ಯೋಗ ಕುವೆಂಪು ಅವರ ಆಶಯಗಳಿಗೆ ...ದವೆಸಗಿದೆ ಮತ್ತೂ ಇದಕ್ಕೆ ಅಕ್ಷರ ಅವರೇ ನೇರ ... ಎಂಬ ಆರೋಪವನ್ನು ಅವರು ಮಾಡಿದ್ದಾರೆ. ಆರೋಪಗಳನ್ನು ಮಾಡುವುದಕ್ಕೆ ಮುಂಚೆ ...ವರು ನೀನಾಸಂ ಸಂಸ್ಥೆ ತಿರುಗಾಟಕ್ಕೆ ನಿರ್ದೇಶಕರು ... ಕೃತಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಯಾವ ...ಂಡಗಳನ್ನು ಉಪಯೋಗಿಸುತ್ತದೆ ಎಂದು ಸ್ವಲ್ಪ ...ಳ್ಳಬೇಕಿತ್ತು. ನೀನಾಸಂ ತಿರುಗಾಟಕ್ಕೆ ನಾಟಕಗಳನ್ನು ಆಯ್ಕೆ ಮಾಡುವುದಕ್ಕೆ ಒಂದು ಆಕೃತಿಯನ್ನು ಇಟ್ಟುಕೊಂಡಿದೆ. ಒಂದು ನಮ್ಮ ದೇಶದ ಹೊರಗಿನ ನಾಟಕ ಕೃತಿ, ಒಂದು ಆಧುನಿಕಪೂರ್ವ ರಂಗಪಠ್ಯ ಹಾಗು ಒಂದು ಆಧುನಿಕ ನಾಟಕ–ಇದು ತಿರುಗಾಟದ ನಾಟಕಗಳ ಆಯ್ಕೆಯ ಆಕೃತಿ. ಇಷ್ಟಾಗಿಯೂ ಅವರು ಮೊದಲು ನಿರ್ದೇಶಕರನ್ನು ಆಯ್ಕೆ ಮಾಡುತ್ತಾರೆ; ನಿರ್ದೇಶಕರು ಈ ಆಕೃತಿಗೆ ತಕ್ಕುದಾದ ಯಾವ ನಾಟಕವನ್ನಾದರೂ ಆಯ್ದುಕೊಳ್ಳುವ ಸ್ವಾತಂತ್ರ್ಯವನ್ನು ಅವರಿಗೆ ಕೊಡುತ್ತಾರೆ ಹಾಗು ಅದು ಒಪ್ಪಿಗೆಯಾದ ನಂತರ ಸಂಸ್ಥೆ ಆ ರಂಗಕೃತಿಯ ನಿರ್ಮಾಣದಲ್ಲಿ ಯಾವ ರೀತಿಯಲ್ಲೂ ಮೂಗು ತೂರಿಸದೆ, ನಿರ್ದೇಶಕರಿಗೆ ರಂಗಕೃತಿ ನಿರ್ಮಾಣದ ಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತದೆ. ಈ ಪ್ರಕ್ರಿಯೆಯನ್ನು ನಾವು ನೀನಾಸಂ ತಿರುಗಾಟಕ್ಕೆ ನಾಟಕ ನಿರ್ದೇಶನ ಮಾಡಿದವರಿಂದಲೇ ಖುದ್ದಾಗಿ ತಿಳಿದುಕೊಂಡಿದ್ದೇವೆ. ಈ ಸಾರಿಯ ತಿರುಗಾಟಕ್ಕೆ ನೀನಾಸಂ ಯುವ ನಿರ್ದೇಶಕ ಮಂಜುನಾಥ ಬಡಿಗೇರ್ ಅವರನ್ನು ಆಹ್ವಾನಿಸಿದೆ ಮತ್ತು ಅವರ ಆಯ್ಕೆಯ 'ಶೂದ್ರ ತಪಸ್ವಿ'ಯನ್ನು ನಿರ್ದೇಶಿಸುವ ಸ್ವಾತಂತ್ರ್ಯವನ್ನು ಅವರಿಗೆ ನೀಡಿದೆ. ಒಬ್ಬ ಯುವ ನಿರ್ದೇಶಕ ತನಗೆ ಒಪ್ಪಿತವಾದ ನಾಟಕವನ್ನು ನಿರ್ದೇಶಿಸುವಾಗ ಆ ನಾಟಕದ ಆಶಯಗಳನ್ನು ಎತ್ತಿ ಹಿಡಿಯುವಂತಹ ರಂಗಪ್ರತಿಮೆಗಳನ್ನು ನಿರ್ಮಿಸುತ್ತಾನೆ. ನಿರ್ದೇಶಕನ ಸದಾಶಯದ ಹೊರತಾಗಿಯೂ ಬಳಸಿರುವ ರಂಗಪ್ರತಿಮೆಗಳು ಕೃತಿಯ ಆಶಯಕ್ಕೆ ವ್ಯತಿರಿಕ್ತವಾಗಿದೆ ಎಂದು ಕೆಲವರಿಗೆ ಅನಿಸಬಹುದು; 'ಶೂದ್ರ ತಪಸ್ವಿ'ಯ ಜೊತೆ ಪ್ರದರ್ಶಿತವಾಗುತ್ತಿರುವ ಮತ್ತೊಂದು ತಿರುಗಾಟದ ನಾಟಕ 'ಒಥೆಲೊ'ದಲ್ಲಿ ಬಳಸಿರುವ ರಂಗಪ್ರತಿಮೆಗಳ ಬಗ್ಗೆ ಪರ–ವಿರೋಧ ಚರ್ಚೆ ನಡೆಯುತ್ತಿದೆ. ಭಿನ್ನಮತವನ್ನು ನಾಟಕದ ವಿಮರ್ಶೆ ಎತ್ತಿ ತೋರುವುದು ತಪ್ಪಲ್ಲ, ಆದರೆ ಅದನ್ನೇ ಕೃತಿಕಾರನ ಆಶಯವನ್ನು ನಾಶ ಮಾಡುವುದಕ್ಕೆ ನಿರ್ದೇಶಕ ಮತ್ತು ನಾಟಕವನ್ನು ಪ್ರಯೋಜಿಸಿದ ಸಂಸ್ಥೆ ಒಟ್ಟಾಗಿ ಹೂಡಿದ ಪ್ರಜ್ಞಾಪೂರ್ವಕ ಸಂಚು ಎಂದು ರಾಜಪ್ಪ ದಳವಾಯಿಯವರು ಹೇಳುತ್ತಾರೆ. ಇಂತಹ ಮಾತುಗಳು, ರಂಗಕೃತಿಯ ಸಾಮಾಜಿಕ ವಿಮರ್ಶೆಯಾಗುವುದು ಅಂತಿರಲಿ, ಖಂಡಿ ತಕ್ಕೂ ಮಾನವಂತ ರಂಗ ವಿಮರ್ಶೆಯೂ ಆಗುವುದಿಲ್ಲ. ಇಂದಿನ ಪೀಳಿಗೆಯ ರಂಗ ಕರ್ಮಿಗಳನ್ನು ಬೌದ್ಧಿಕ ವಿಮರ್ಶೆಗಳಿಂದ ನಲುಗಿಸದೇ ಮೌನವಾಗಿದ್ದು ಪ್ರೋತ್ಸಾಹಿಸಬೇಕು ಎಂದು ಹೇಳುವ ರಾಜಪ್ಪನವರು, ನೀನಾಸಂ ಮುಖ್ಯಸ್ಥ ಅಕ್ಷರ ಅವರ ಮೇಲೆ ಆರೋಪ ಹೊರಿಸುವ ಭರದಲ್ಲಿ ಒಬ್ಬ ಯುವ ನಿರ್ದೇಶಕನ ಮೇಲೆ ಅಪರಾಧದ ಆರೋಪ ಹೊರಿಸುತ್ತಿರುವುದು ವಿಪರ್ಯಾಸವೇ ಸರಿ.

ರಾಜಪ್ಪ ತಮ್ಮ ಲೇಖನದಲ್ಲಿ ಒಂದೆಡೆ ತಾವು ಎಡಪಂಥೀಯ ವೈಚಾರಿಕತೆ ಮತ್ತು ಸಾಮಾಜಿಕ ಪರಿವರ್ತನೆಗಳ ಪರವಾಗಿರುವವರು ಎಂದು ಬರೆದುಕೊಂಡಿದ್ದಾರೆ. ತಾವು ಎಡಪಂಥೀಯ ಎಂದು ಘೋಷಿಸಿಕೊಂಡ ಮಾತ್ರಕ್ಕೆ ತಾವು ಒಲ್ಲದ ಅಭಿಪ್ರಾಯಗಳನ್ನು ಹೊಂದಿದವರನ್ನು ಅಪರಾಧಿಗಳು ಎಂದು ಚಿತ್ರಿಸಬಹುದೋ? ಈ ಬಗೆಯ ಅಸಹನೆಯಿಂದ ಎಡಪಂಥೀಯ ಚಳವಳಿಗಳಿಗೆ ಕಿಂಚಿತ್ತೂ ಉಪಯೋಗವಿಲ್ಲ ಎಂಬ ನಿಲುವಿನಿಂದಲೇ ನಾವು ಈ ಪ್ರತಿಕ್ರಿಯೆಯನ್ನು ಬರೆದಿದ್ದೇವೆ.

-ಜಿ.ರಾಜಶೇಖರ್, ಕೆ.ಫಣಿರಾಜ್, ಉಡುಪಿ


ಅಕ್ಷರ


ರಾಜಪ್ಪ



ಗೌರಿ ಲಂಕೇಶ್ ಪತ್ರಿಕೆ ಮಾರ್ಚ್ 9, 2011ರ ಮುಖಪುಟ ಲೇಖನ 'ಬಂಡಲ್ ಬ್ರಹ್ಮಾಂಡ' ನರೇಂದ್ರ ಶರ್ಮನ ಕುರಿತು ನೀವು ಬರೆದಿರುವುದು ತೀರಾ ಕಡಿಮೆ ವಿಷಯ.

ಪ್ರಳಯ, ಆರಿದ್ರಾ ನಕ್ಷತ್ರ ಪತನಗಳೊಂದಿಗೆ ಮೇ 6 ರಂದು ಇಡೀ ವಿಶ್ವವನ್ನು ಕತ್ತಲಾವರಿಸುತ್ತದಂತೆ, ಅದು ಪ್ರಳಯದ ಆರಂಭ ಸೂಚನೆಯಂತೆ! ಅದಕ್ಕಾಗಿ ಮೇ 18 ರಂದು 'ನವದುರ್ಗಯಾಗ'ವನ್ನು ಮಾಡುತ್ತಾನೆ. First come first basisನಲ್ಲಿ 1800 ರೂ.ಗಳನ್ನು ಕೊಟ್ಟವರು ಅದರಲ್ಲಿ ಭಾಗವಹಿಸಬಹುದು. ಅಷ್ಟಲಕ್ಷ್ಮಿಯರನ್ನೂ, ದುರ್ಗೆಯನ್ನೂ ಆ ಯಾಗದ ಸಮಯದಲ್ಲಿ ಪ್ರತ್ಯಕ್ಷವಾಗಿ ನೋಡುವ ಭಾಗ್ಯ 1800 ರೂ.ಗಳನ್ನು ಕೊಟ್ಟ ಪುಣ್ಯವಂತರೆಂಬ ಮುಠ್ಠಾಳರಿಗೆ ಲಭ್ಯವಂತೆ!!

ಮೂಳೆತಜ್ಞ ವೈದ್ಯನಿಗೇನಾದರೂ ಲಾಭವಾಗದೆಯೋ ಎಂಬುದರ ಬಗ್ಗೆ ಸಹ ಯಾವ ಮಾಹಿತಿಯೂ ಸಿಕ್ಕಿಲ್ಲ!!

ಹಾಗೆಯೇ ಅಕ್ಷಯ ತದಿಗೆಯಂದು ಚಿನ್ನ ಖರೀದಿಸಿದರೆ ಅದು ವೃದ್ಧಿಯಾಗಿ ಕೊಂಡವರೂ ವೃದ್ಧಿಯಾಗುತ್ತಾರೆಂಬ ಬುರುಡೆಗೆ ಮಲ್ಲೇಶ್ವರದಲ್ಲಿ ಮಾತ್ರವೇ ಅಂಗಡಿಗಳ ಮುಂದೆ ಕ್ಯೂ ನಿಂತವರ ಸಂಖ್ಯೆ 8000 ಮೀರಿತ್ತು, ಗೂಳಿಗಳಂತೆ ನುಗ್ಗಿ ಮಾಡಿದ ವ್ಯಾಪಾರ ಮತ್ತೆ ವ್ಯಾಪಾರಿಗಳ ಲಾಭ. ಆಗ ಅವನಿಗೆ ಸಿಕ್ಕ ಮೊತ್ತ ಒಂದೇ ಅಂಗಡಿಯಿಂದ 1.5 ಲಕ್ಷ. ಇದೆಲ್ಲದರೊಂದಿಗೆ ಕ್ಷೇತ್ರ ಮಹಿಮೆಗಳ ಬಗ್ಗೆ ಈತ ವಿವರಿಸುವ ಪರಿಯಿಂದ ಆಯಾ ದೇವಸ್ಥಾನದ ವತಿಯಿಂದ ಅವನಿಗೆ ಬರುವ ಕಮಾಯಿ ಅವನ ಡೊಳ್ಳು ಹೊಟ್ಟೆಗೆ ಅರೆಕಾಸು ಮಜ್ಜಿಗೆ. ಎಲ್ಲವನ್ನೂ cash

ಬ್ರಹ್ಮಾಂಡ ಶರ್ಮನ ಬಗ್ಗೆ ಓದುಗರಿಂದ ಒಂದಿಷ್ಟು ಬಂಡಲ್ ಪುರಾಣಗಳು

ಮಾರ್ಚ್ 9ನೇ ತಾರೀಖು ಸಾಕ್ಷಾತ್ ಶಿವ ಕರ್ನಾಟಕಕ್ಕೆ ಇಳಿದುಬರುತ್ತಾನಂತೆ. ಅವನ ಸ್ವಾಗತವನ್ನು ಬಯಸಿ ಬೆಂಕಿಮಳೆ, ಕಲ್ಲುಕೋಳಿ ಕೂಗುವುದು, ಇಡೀ ಜಗತ್ತಿನಲ್ಲಿರುವ ಎಲ್ಲಾ ಬಸವಗಳೂ ಎದ್ದು ನಿಲ್ಲುತ್ತವಂತೆ.

ಈ ನವದುರ್ಗಯಾಗದಂತೆ ಹಿಂದೊಮ್ಮೆ ಬೆಂಗಳೂರು ಪ್ಯಾಲೇಸ್ ಮೈದಾನದಲ್ಲಿ ರುದ್ರಯಾಗ ಮಾಡಿದ್ದ. ಆಗ ಇಡೀ ಮನುಜ ಸಂಕುಲಕ್ಕೆ ಕೋಟಿ ರಾಮನಾಮ ಜಪವನ್ನು ಬರೆದು ತರುವಂತೆ ಆಜ್ಞೆ ಮಾಡಿದ್ದ. ಅದೆಷ್ಟೋ ಮೂರ್ಖರು ಪುಣ್ಯವನ್ನು ವೃದ್ಧಿಮಾಡಿಕೊಳ್ಳಲು ಅದನ್ನು ಬರೆದು ಭಯಭಕ್ತಿಯಿಂದ ಯಾಗದ ಸ್ಥಳಕ್ಕೆ ಕೊಂಡೊಯ್ದರು. ಈ ಮುಠ್ಠಾಳ ಎಷ್ಟು ಜನರನ್ನು ಮೂರ್ಖರನ್ನಾಗಿಸಿರಬಹುದು ಎಂಬ ಐಡಿಯಾ ಅವನಿಗೇ ಇಲ್ಲದ್ದರಿಂದ ಕೋಟಿನಾಮ ಜಪ ಸ್ವಲ್ಪಮಟ್ಟಿಗೆ ಹೋಮಕ್ಕೆ ಮುಕ್ಕಾಲಿಗೂ ಹೆಚ್ಚಿನ ಭಾಗ ರದ್ದಿಗೂ ಹೋಯಿತು! 3,000, 5,000, 10,000 ರೂಪಾಯಿಗಳ ಟಿಕೆಟ್ ಕೊಂಡು ಅಲ್ಲಿಗೆ ಮುಗಿಬಿದ್ದ ಜನರೆಲ್ಲಾ ಯಾವ ಯಾವ ರೀತಿಯಲ್ಲಿ ಉದ್ಧಾರವಾದರೆಂಬ ಮಾಹಿತಿ ಇದುವರೆಗೂ ಸಿಕ್ಕಿಲ್ಲ.

ವರಲಕ್ಷ್ಮಿ ಹಬ್ಬಕ್ಕೆ ಬೆಳ್ಳಿಯ ಮುಖವಾಡವನ್ನು ಕೊಂಡು ಪೂಜೆ ಮಾಡಿದರೆ ಲಕ್ಷ್ಮೀ ಮನೆಯಲ್ಲಿ ಕಾಲು ಒಡೆದುಕೊಂಡು (ಯಾರ ಮನೆಯಲ್ಲಿ!) ಬಿದ್ದಿರುತ್ತಾಳೆ ಎಂದು ಬುರುಡೆ ಬಿಟ್ಟಿದ್ದರಿಂದ ಸ್ವತಃ ಅವನಿಗಾದ ಲಾಭ 2 ಲಕ್ಷ ರೂ! ವ್ಯಾಪಾರವಾಗಿದ್ದು ಚಿನ್ನ ಬೆಳ್ಳಿ ಅಂಗಡಿ ಮಾಲೀಕರಿಗೆ! ಲಕ್ಷ್ಮಿ ಎಲ್ಲರ ಮನೆಯಲ್ಲೂ ಏಕಕಾಲದಲ್ಲಿ ಕಾಲೊಡೆದುಕೊಂಡು ಬಿದ್ದಿರುವುದರಿಂದ ಮಾಡಿಕೊಳ್ಳುವ ಅವನ ಜಾಣ್ಮೆಗೆ ಸಲಾಂ!

ಒಂದೆಡೆ ಡಾ. ಅಬ್ದುಲ್ ಕಲಾಂರಂತಹವರು ಮಕ್ಕಳಿಗೆ ವೈಜ್ಞಾನಿಕ ಚಿಂತನೆಯ ಕುರಿತು ಬೋಧಿಸುತ್ತಿರುವಾಗ ಆ ಮಕ್ಕಳ ತಾಯಂದಿರು ಐದು ಎಣ್ಣೆಗಳ ಮಿಶ್ರಣದ ದೀಪವನ್ನು ಹೊತ್ತು ಮೂರ್ಖರಂತೆ ದೇವಸ್ಥಾನಗಳಿಗೆ ಹೊರಟರೆ ಮಕ್ಕಳ ಮನಸ್ಸಿನಲ್ಲಿ ಯಾವ ರೀತಿಯ confusion ಮೂಡಬಹುದು ಊಹಿಸಿ! ಭಾರತ ಎತ್ತ ಸಾಗಿದೆ? ಜನರಲ್ಲಿದ್ದ ತಾರ್ಕಿಕ ಮೌಲ್ಯಗಳನ್ನು ಹರಾಜು ಹಾಕಲು ಯಾಕೆ ಮಾಧ್ಯಮಗಳು ಸಹಾಯಕವಾಗಿದೆ? ಇಂತಹ ಮೂರ್ಖನನ್ನು ಓಲೈಸುತ್ತಿರುವ ಝೀ ಟೀವಿ ಕನ್ನಡಕ್ಕೆ ಬೇಕಾಗಿರುವುದು ತನ್ನ ಟಿಆರ್‌ಪಿ ಏರಿಕೆಯಷ್ಟೇ. ಅಲ್ಲಿನ ವಿದ್ಯಾವಂತ ಯುವಕರೂ ಮೂರ್ಖರಂತೆ ಶರ್ಮ ಹೇಳುವುದೆಲ್ಲ ವೇದವಾಕ್ಯವೆಂಬಂತೆ, ಸುನಾಮಿ ಬಂದು ಸಾವಿರಾರು ಜನರು ಸತ್ತಾಗ ವಿಜ್ಞಾನಿಗಳು ಏನೂ ಮಾಡಲಾಗದಿದ್ದದ್ದನ್ನು ಪ್ರಳಯ ನಿಯಂತ್ರಣಕ್ಕೆ ನಮ್ಮ ನರೇಂದ್ರ ಶರ್ಮ ಮಾಡಲು ಹೊರಟಿರುವುದನ್ನು ಸಹಿಸಲಾಗದ ಪತ್ರಿಕಾ ಮಾಧ್ಯಮ ಹುಚ್ಚುಚ್ಚಾಗಿ ಬರೆಯುತ್ತಿದ್ದಾರೆಂದು ಹೇಳಿಕೊಳ್ಳುತ್ತಾ ಅವನು ಹೇಳಿದ್ದಕ್ಕೆಲ್ಲ ತಾಳಹಾಕುತ್ತಾ ಕುಳಿತಿದ್ದಾರೆ.

ಕೊನೆ ಹನಿ: ಎಲ್ಲಿಯವರೆಗೂ ಮೋಸ ಹೋಗುವ ಜನರಿರುತ್ತಾರೋ ಅಲ್ಲಿಯವರೆಗೂ ಮೋಸ ಮಾಡುವವರು ಜಗತ್ತಿನಲ್ಲಿದ್ದೇ ಇರುತ್ತಾರೆ. (ಅನಂತ್‌ನಾಗ್ ಉವಾಚ- ಚಿತ್ರ ಯಾರಿಗೂ ಹೇಳ್ಬೇಡಿ!)

-ವಸುಮತಿ ಭಾಸ್ಕರ್, ಬೆಂಗಳೂರು

ಬಂಡಲ್ ಬ್ರಹ್ಮಾಂಡ ಒಂದೂವರೆ ತಿಂಗಳಿನಿಂದ ಕರ್ನಾಟಕದ ಟಿ.ವಿ. ವೀಕ್ಷಕರ ಹಾದಿ ತಪ್ಪಿಸುತ್ತಿದ್ದರೂ ವಿಚಾರವಾದಿಗಳು ಸುಮ್ಮನಿರಲು ಕಾರಣ ಅವರು ಇಂತಹ ಕಾರ್ಯಕ್ರಮಗಳನ್ನು ನೋಡುವುದೇ ಇಲ್ಲ, ಹಾಗಾಗಿ ಈ ಬಗ್ಗೆ ಅವರಿಗೆ ಗೊತ್ತಿರಲಿಲ್ಲ.


ದೇವರು, ಜ್ಯೋತಿಷ್ಯ, ಪೂಜೆ, ಹರಕೆ ಮುಂತಾದ ಧಾರ್ಮಿಕ ಮೌಢ್ಯಗಳಿಗೆ ಹಿಂದೂ ಹೆಂಗಸರೇ ಏಕೆ ಹೆಚ್ಚಾಗಿ ಬಲಿ ಬೀಳುವುದು ಎಂಬ ಬಗ್ಗೆ ಮನೋವೈಜ್ಞಾನಿಕ ವಿಶ್ಲೇಷಣೆ ಅಗತ್ಯವಿದೆ. ಸೀರೆ, ಆಭರಣ ಕೊಳ್ಳಲು ಹೋದಾಗ ಮಹಿಳೆಯರು ಹತ್ತಾರು ಅಂಗಡಿ ತಿರುಗಿ ನೂರಾರು ಪ್ರಶ್ನೆ ಕೇಳಿ ಸಮಾಧಾನವಾದ ಮೇಲೆಯೇ ಏನನ್ನೂ ಕೊಳ್ಳುವುದು. ಆದರೆ ಎಲ್ಲಾ ವಿಷಯಗಳಲ್ಲಿ ವಿಪರೀತ ಪ್ರಶ್ನೆ ಕೇಳುವ, ಆಳವಾದ ತನಿಖೆ ನಡೆಸುವ ಮನೋಭಾವದ ಮಹಿಳಾ ವಕೀಲರ ಸಹಿತ ಎಲ್ಲಾ ಹಿಂದೂ ಹೆಂಗಸರೂ ದೇವರು–ಧರ್ಮದ ವಿಷಯ ಬಂದಾಗ ಮಾತ್ರ ಅದೇಕೆ ಒಂದೂ ಪ್ರಶ್ನೆ ಕೇಳದೇ ಇತರರು ತೋರಿಸಿದ ಮೌಢ್ಯದ ಬಾವಿಗೆ ಕಣ್ಣುಮುಚ್ಚಿ ಬೀಳುವುದು? ಒಂದೋ ಇದು ಹಿಂದೂ ಧರ್ಮದ ತರ್ಕವಿಹೀನ ಪೌರಾಣಿಕ ಕಥೆಗಳ ದುಷ್ಪರಿಣಾಮ. ಅಥವಾ ಹಿಂದೂ ಹೆಂಗಸರಲ್ಲಿ ಸಾಮಾಜಿಕ ಕಾರಣಗಳಿಂದ ಅಸುರಕ್ಷಾ ಭಾವನೆ (sense of insecurity) ಹೆಚ್ಚುತ್ತಿರುವುದರಿಂದ ಮೌಢ್ಯಕ್ಕೆ ಶರಣಾಗುತ್ತಿರಬೇಕು. ಹಾಗಾಗಿ ಒಮ್ಮೆ ಮಹಿಳೆಯರ ಮೈಂಡ್–ಸೆಟ್ ಬದಲಿಸಿ ಅವರಲ್ಲಿ ಧಾರ್ಮಿಕ ವಿಷಯಗಳ ಬಗ್ಗೆಯೂ ಪ್ರಶ್ನೆ ಕೇಳುವ ಅಭ್ಯಾಸ ಹುಟ್ಟಿಸಿದರೆ ನಂತರ ಇಡೀ ಸಮಾಜದಲ್ಲಿ ತೀವ್ರಗತಿಯಲ್ಲಿ ವಿಚಾರವಾದ ಹರಡುವುದು ಖಂಡಿತ. ಮಾನವನ ಪ್ರಶ್ನೆ ಕೇಳುವ ಅಭ್ಯಾಸದಿಂದಲೇ ತಾನೇ ಅವನು ಶಿಲಾಯುಗದಿಂದ ಕಂಪ್ಯೂಟರ್ ಯುಗಕ್ಕೆ ಮುಟ್ಟಲು ಸಾಧ್ಯವಾಗಿದ್ದು.

ಈ ಬಂಡಲ್‌ಶರ್ಮಾ ನಾಯಿಗಳು ಹಾಗೂ ಕ್ಷೌರಿಕರ ಬಗ್ಗೆ ಅಬದ್ಧ ನುಡಿದದ್ದು ಮಾತ್ರವಲ್ಲ, ಭಿಕ್ಷುಕರ ಬಗ್ಗೆಯೂ ಹೀಗೆ ಅಮಾನವೀಯವಾಗಿ ಆಡಿದ್ದ. ಭಿಕ್ಷುಕರಿಗೆ ದಾನ ಮಾಡುವುದರಿಂದ ಗೂಬೆ ಮೇಲೆ ಸವಾರಿ ಮಾಡುವ ಲಕ್ಷ್ಮಿ ಮುನಿಯುತ್ತಾಳೆ ಎಂದು ಈ ಗೂಬೆ ಹೇಳಿದ್ದ. ಭಿಕ್ಷುಕರಲ್ಲಿ ಕುರುಡರು, ಅಂಗವಿಕಲರು, ಅನಾಥರು, ನತದೃಷ್ಟರೂ ಇರುತ್ತಾರೆ ಎಂಬುದನ್ನು ಈ ಹೃದಯಹೀನ ಮರೆತಿದ್ದ.

ದೇಶದ ಪ್ರಧಾನಿ ಪಟ್ಟ ಅಲಂಕರಿಸಿದ "ಕನ್ನಡಿಗ" ರಾಜಕಾರಣಿಯೊಬ್ಬರು ಇನ್ನು ಮೂರೇ ತಿಂಗಳೊಳಗೆ ಸಾಯುತ್ತಾರೆ ಎಂದು ಈ ಮೂರ್ಖ ಜ್ಯೋತಿಷ್ಯ ಹೇಳಿ ಒಂದು ವರ್ಷವಾದರೂ ಆ ಕನ್ನಡಿಗ ಮಾಜಿ ಪ್ರಧಾನಿಗಳು ಗಟ್ಟಿಮುಟ್ಟಾಗಿದ್ದಾರೆ. ಆದರೆ ಅವರ ಮಗನ ಚಾನೆಲ್‌ನಲ್ಲೇ ಶರ್ಮಾ ಹೀಗೆ ಅವಿವೇಕತೆ ತೋರಿದ ಮೂರೇ ದಿನಕ್ಕೆ ಕುಮಾರಸ್ವಾಮಿ ಈ ಹುಂಬನನ್ನು ಕಸ್ತೂರಿ ಚಾನೆಲ್‌ನಿಂದ ಒದ್ದು ಓಡಿಸಿದ್ದರು.

ಇಂತಹ ಹುಚ್ಚ ಶರ್ಮನಿಗೆ ಕಾರ್ಯಕ್ರಮವನ್ನು ನೀಡುವ ಬದಲು ಜೈಲಿಗಟ್ಟಬೇಕಿದೆ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು



ಡಾ.ಎಂ.ಚಿದಾನಂದಮೂರ್ತಿ ಅವರಿಗೊಂದು ತೆರೆದ ಪತ್ರ

ಮಾನ್ಯರೆ,

ತಾವು ಅತ್ಯಂತ ಆತಂಕಿತರಾಗಿ 'ಸತ್ಯಕ್ಕೆ ಆಗುತ್ತಿರುವ ಅಪಚಾರವನ್ನು ತಾಳಲಾರದೆ' ದಿನಾಂಕ 01.02.2011ರ ನನಗೆ ಬರೆದ ಪತ್ರ ತಲುಪಿದೆ. ಅದಕ್ಕಾಗಿ ತಮಗೆ ನಾನು ಕೃತಜ್ಞನಾಗಿದ್ದೇನೆ. ಇಲ್ಲಿನ ವಿಷಯವು ಸಾಮಾಜಿಕವಾಗಿ ಮಹತ್ವವಾದುದರಿಂದ ನಾನು ತೆರೆದ ಪತ್ರವೊಂದನ್ನು ಬರೆಯುತ್ತಿದ್ದೇನೆ.

(1). ತಾವು ಮತ್ತೆ ಮತ್ತೆ ತಮ್ಮ ಸತ್ಯದ ಆರಾಧನೆ ಬಗ್ಗೆ ಬರೆಯುತ್ತಿರುತ್ತೀರಿ. ಸತ್ಯಕ್ಕಾಗಿ ಬದುಕಿರುವುದಾಗಿ ಹೇಳಿಕೊಳ್ಳುತ್ತಿರುತ್ತೀರಿ. ನನಗೆ ತಾವು ಬರೆದ ಪತ್ರದ ಮೇಲುಭಾಗದಲ್ಲಿ ತಮ್ಮ ಕೈಬರಹದಲ್ಲಿ 'ಹುಸಿಯ ನುಡಿಯಲು ಬೇಡ' ಎಂಬ ಶಿರೋನಾಮೆಯಿದೆ. ಇದಕ್ಕೆ ಸಂವಾದಿಯಾಗಿ ಪತ್ರದ ಒಳಭಾಗದಲ್ಲಿ ತಾವು ಎತ್ತಿರುವ ಪ್ರಶ್ನೆಗಳ ಬಗ್ಗೆ 'ನಾಗರಿಕ ಭಾಷೆ'ಯಲ್ಲಿ ಉತ್ತರಿಸಿ ಎಂದು ನನಗೆ ಹೇಳಿದ್ದೀರಿ. ಇವುಗಳ ಅರ್ಥವೇನು? ನಾನು ಹುಸಿಯನ್ನು ನುಡಿಯುತ್ತಿದ್ದೇನೆಂದು, ನಾನು ನಾಗರಿಕ ಭಾಷೆಯಲ್ಲಿ ಮಾತನಾಡುತ್ತಿಲ್ಲ-ಬರೆಯುತ್ತಿಲ್ಲವೆಂದು ತಮ್ಮ ಭಾವನೆಯೇನು? ನಾನು ಇದುವರೆವಿಗೂ ವೈಯಕ್ತಿಕವಾಗಿ ತಮಗೆ ಪತ್ರವನ್ನು ಬರೆದಿಲ್ಲ, ತಮ್ಮ ವಿಚಾರಗಳ ಬಗ್ಗೆ ನಾನು ಟೀಕೆಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿದ್ದೇನೆ. ತಮ್ಮ 'ವೀರಶೈವ ಧರ್ಮ: ಭಾರತೀಯ ಸಂಸ್ಕೃತಿ (ಹಿಂದೂ ಲಿಂಗಾಯತ)' ಎಂಬ (2000) ಕೃತಿಯ ಬಗ್ಗೆ ಮೂರು ಕಂತುಗಳಲ್ಲಿ 'ಹೊಸತು' ಮಾಸ ಪತ್ರಿಕೆಯಲ್ಲಿ (2003) ಟೀಕೆ ಬರೆದಿದ್ದೇನೆ. ತಾವು ಲಿಂಗಾಯತ-ವೀರಶೈವ ವಿಷಯ ಕುರಿತಂತೆ 2009ರ ಜುಲೈ 17 ರಂದು ಪ್ರಜಾವಾಣಿಯಲ್ಲಿ ಬರೆದ ಲೇಖನಕ್ಕೆ ಅದೇ ಪ್ರಜಾವಾಣಿಯಲ್ಲಿ (2009 ಜುಲೈ 31) 'ಲಿಂಗಾಯತದ ಮೂಲಧಾರೆ ಹಿಡಿದು' ಎಂಬ ಲೇಖನವನ್ನು ಪ್ರಕಟಿಸಿ ತಮಗೆ ಉತ್ತರ ಕೊಟ್ಟಿದ್ದೇನೆ. ಈ ಯಾವುದೇ ಬರಹಗಳಲ್ಲಿ ನಾನು ನನಗೆ ಗೊತ್ತಿರುವಂತೆ ಅನಾಗರಿಕ ಭಾಷೆಯನ್ನು ಬಳಸಿಲ್ಲ, ಹುಸಿಯನ್ನು ನುಡಿದಿಲ್ಲ. ಭಾಷಾ ಪಂಡಿತರಾದ ತಮಗೆ ಇದು ತಿಳಿದಿದೆ ಎಂದು ನಾನು ಭಾವಿಸಿದ್ದೇನೆ. ಅಂದಮೇಲೆ ತಾವು ಸುಳ್ಳನ್ನು ಏಕೆ ಹೇಳುತ್ತಿದ್ದೀರಿ? ಇದರ ಹಿಂದಿನ ಉದ್ದೇಶವೇನು? ಲಿಂಗಾಯತರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ನಿಮ್ಮ ಈ ಕ್ರಮದ ಬಗ್ಗೆ ನನ್ನ ಆಕ್ಷೇಪಣೆಯಿದೆ. ಇಲ್ಲಿ ತಾವು ಹೇಳುತ್ತಿರುವುದು ಸುಳ್ಳು ತಾನೆ? ಅನಾಗರಿಕ ಭಾಷೆಯನ್ನು ಬಳಸದ ನನಗೆ ಪತ್ರ ಬರೆದು ನಾಗರಿಕ ಭಾಷೆಯಲ್ಲಿ ಉತ್ತರಿಸಿ ಎಂದು ಉಪದೇಶ ನೀಡಿದರೆ ಅದು ಅಪ್ಪಟ ಸುಳ್ಳು ಎಂದು ನಾನು ಹೇಳಬೇಕಾಗುತ್ತದೆ. ಸತ್ಯದ ಆರಾಧಕರು ಎಂದು ಹೇಳಿಕೊಂಡು ಸುಳ್ಳನ್ನು ಹೇಳುವ ತಾವು ಒಮ್ಮೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಈ ವಿಷಯವೆಲ್ಲ ಜನರಿಗೆ ತಿಳಿಯಲೆಂದು ಸಾರ್ವಜನಿಕವಾಗಿ ತೆರೆದ ಪತ್ರದ ರೂಪದಲ್ಲಿ ನಾನು ಉತ್ತರ ಬರೆಯುತ್ತಿದ್ದೇನೆ.

(2) ಇನ್ನು ತಮ್ಮ ಪತ್ರದಲ್ಲಿನ 'ವಾದ' ಅಥವಾ ತಾವೆ ಹೇಳಿಕೊಂಡಿರುವಂತೆ 'ಪ್ರತಿಪಾದನೆ'. ವೀರಶೈವ ಮತ್ತು ಲಿಂಗಾಯತ ಬೇರೆಬೇರೆಯಲ್ಲ ಎಂಬುದು ತಮ್ಮ ಪ್ರಣಾಳಿಕೆ. ಮೊನ್ನೆ ಮೊನ್ನೆಯವರೆವಿಗೂ ಲಿಂಗಾಯತರು ನಾವೂ ಇದನ್ನು ನಂಬಿದ್ದೆವು. ಆದರೆ ಈಗ ಸ್ಪಷ್ಟವಾಗುತ್ತಿರುವುದೇನೆಂದರೆ ಅವು ಒಂದೆ ಅಲ್ಲ, ಅವು ಬೇರೆ ಬೇರೆ. ಅವೆರಡೂ ಬೇರೆಬೇರೆಯಲ್ಲ, ಒಂದೇ ಎಂಬುದಕ್ಕೆ ತಾವು ಕೆಲವು ವಚನಗಳ ಪುರಾವೆ ನೀಡಿದ್ದೀರಿ. ತಮಗೆ ಪುರಾವೆಗಳ ಬಗ್ಗೆ ಬಹಳ ನಂಬಿಕೆ. ಆ ನಂಬಿಕೆ ಇರಲಿ. ಇದಕ್ಕೆ ನನ್ನ ಉತ್ತರ ಹೀಗಿದೆ:

(ಅ). ವೀರಶೈವ ಮತ್ತು ಲಿಂಗಾಯತ ಎರಡೂ ಬೇರೆ ಬೇರೆ ಅಲ್ಲ ಎಂದಾದರೆ ಅದನ್ನು ನಾವು ಲಿಂಗಾಯತ ಎಂಬ ಹೆಸರಿನಲ್ಲಿ ಮಾತ್ರ ಕರೆದುಕೊಂಡರೆ ತಮಗೇನು ಬಾಧೆ? ವೀರಶೈವರಾದ ತಾವು ಲಿಂಗಾಯತ ಎಂದು ಕರೆದುಕೊಳ್ಳದಿದ್ದರೆ ಬೇಡ. ವೀರಶೈವದ ಬಗ್ಗೆ ತಮಗೆ ಒಂದು ರೀತಿಯ ವ್ಯಸನವಿದೆ. ಅದು ಇರಲಿ. ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದರೆ ನಮ್ಮನ್ನು ನಾವು ಲಿಂಗಾಯತ ಎಂದು ಕರೆದುಕೊಂಡರೆ ತಮಗೇನು ಆತಂಕ? ಇದುವರೆವಿಗೂ ಲಿಂಗಾಯತರು ತಾವು ವೀರಶೈವರೆಂದು ತಿಳಿದುಕೊಂಡಿರಲಿಲ್ಲವೆ? ಆದರೆ ವೀರಶೈವರಾದ ತಾವು ಮತ್ತು ತಮ್ಮ ಅನುಯಾಯಿಗಳು ಲಿಂಗಾಯತ ಎಂದು ಕರೆದುಕೊಳ್ಳುವುದಿಲ್ಲವೇಕೆ? ಅದರಿಂದ ತಮ್ಮ ಕುಲ ಕೆಟ್ಟು ಹೋಗುತ್ತದೆಯೇ?

(ಆ). ತಾವು ಲಿಂಗಾಯತ ಎಂದು ಬರೆದ ಕಡೆಯಲೆಲ್ಲ ಅದಕ್ಕೆ ಪೂರ್ವಪದವಾಗಿ 'ಹಿಂದೂ' ಎಂಬುದನ್ನು ಸೇರಿಸುತ್ತೀರಿ. ಲಿಂಗಾಯತವು ವೇದಾಗಮಶಾಸ್ತ್ರಪುರಾಣಗಳನ್ನು ಆಧರಿಸಿದ ಧರ್ಮವಲ್ಲ, ಅದಕ್ಕೆ ತಮಗೆ ಎಷ್ಟು ಪುರಾವೆಗಳು ಬೇಕು? ಇದೆಲ್ಲ ತಿಳಿದಿದ್ದೂ ತಾವು ಲಿಂಗಾಯತವನ್ನು ವೇದಾಗಮಶಾಸ್ತ್ರಪುರಾಣಗಳನ್ನು ಆಧರಿಸಿದೆ ಎಂದು ಬರೆಯುತ್ತೀರಿ. ಇದು ಸುಳ್ಳು ತಾನೆ? ಸುಳ್ಳನ್ನೇ ಹೇಳಿಕೊಂಡು ತಮ್ಮನ್ನು ತಾವು ಸತ್ಯದ ಆರಾಧಕನೆಂದು ಕರೆದುಕೊಳ್ಳುತ್ತೀರಿ. ಈ ಆಷಾಢಭೂತಿತನ ಯಾಕೆ? ಎಲ್ಲದಕ್ಕೂ ಪುರಾವೆಯನ್ನು ಒದಗಿಸುವ ತಾವು ವಚನಗಳಲ್ಲಿ ಹಿಂದೂ ಎಂಬುದು ಎಲ್ಲಿದೆ ಎಂಬುದಕ್ಕೆ ಯಾಕೆ ಪುರಾವೆಯನ್ನು ಒದಗಿಸುವುದಿಲ್ಲ?

(ಇ). ತಾವು ಹೇಳಿಕೊಳ್ಳುವಂತೆ ವೀರಶೈವ ಮತ್ತು ಲಿಂಗಾಯತಗಳು ಬೇರೆಬೇರೆಯಲ್ಲದೆ ಒಂದೇ ಆಗಿದ್ದರೆ ಯಾಕೆ ತಮ್ಮ ರಾಜ್ಯದಲ್ಲಿ ತಮ್ಮನ್ನು ತಾವು ವೀರಶೈವರೆಂದು ಕರೆದುಕೊಳ್ಳುವ ಗುರುಮಠದವರು ಬಸವನನ್ನು ಮತ್ತು ಇತರೆ ವಚನಕಾರರನ್ನು ಗೌರವದಿಂದ ಕಾಣುವುದಿಲ್ಲ? ತಮಗೆ ಗೊತ್ತಿರುವಂತೆ ಬಸವನು ತನ್ನ ವಚನಗಳಲ್ಲಿ ಮಾದಾರ ಚನ್ನಯ್ಯನನ್ನು ಹತ್ತಾರು ಬಾರಿ ಸ್ತುತಿಸುತ್ತಾನೆ. 'ಮಾದಾರ ಚನ್ನಯ್ಯನ ಮನೆಯ ಮಗನಾಗಿ ವೇದಕ್ಕೆ ಒರೆಯ ಕಟ್ಟುವೆ' ಎಂದು ಅವನು ಹೇಳಿಕೊಂಡಿದ್ದಾನೆ. 'ಕೂಡಲಸಂಗಯ್ಯನು ಮಾದಾರ ಚನ್ನಯ್ಯನ ಮನೆಯಲ್ಲಿ ಉಂಡ ಕಾರಣಕ್ಕೆ ವೇದಗಳು ನಡು ನಡುಗುತ್ತಿದ್ದವು' ಎಂದು ಬಸವ ಹೇಳುತ್ತಾನೆ. 'ಕೂಡಲಸಂಗನ ಶರಣರಲ್ಲಿ ಅಂಬಲಿ ನೇಮದಾತ ನಮ್ಮ ಮಾದಾರ ಚನ್ನಯ್ಯ' ಎಂದೂ ಬರೆಯುತ್ತಾನೆ. ಆದರೆ ವೇದಾಗಮಶಾಸ್ತ್ರಪುರಾಣ ಪ್ರಣೀತ ವೀರಶೈವರೆಂದು ತಮ್ಮನ್ನು ತಾವು ಕರೆದುಕೊಳ್ಳುವ ತಾವು ಮತ್ತು ತಮ್ಮ ರೀತಿಯವರು ಬಸವ ಪ್ರಣಾಳಿಕೆಯನ್ನು ಯಾಕೆ ಒಪ್ಪಿಕೊಳ್ಳುವುದಿಲ್ಲ? ವಾಸ್ತವವಾಗಿ ಬಸವನಿಗೆ ಮತ್ತು ಇತರೆ ವಚನಕಾರರಿಗೆ ಅವಮಾನವಾಗುವ ರೀತಿಯಲ್ಲಿ ಗುರುಮಠದವರು ಮತ್ತು ವೀರಶೈವರು ನಡೆದುಕೊಳ್ಳುತ್ತಿದ್ದಾರೆ. ಇದು ಸತ್ಯಸಂಧರಾದ ತಮಗೆ ತಿಳಿದಿದೆ. ಬಸವನ ಭಾವಚಿತ್ರವಿರುವ ಗೋಡೆಯ ಕೆಳಗೆ ಕೂರಲು ಅಥವಾ ಅಂತಹ ಭಾವಚಿತ್ರದ ಕೆಳಗೆ ಮೆರವಣಿಗೆ ಸಾಗಲು ಅಥವಾ ಅದನ್ನು ಸಹಿಸಲು ಗುರುಮಠದವರು ಸಿದ್ಧರಿಲ್ಲ. ಬಸವನನ್ನು ಧರ್ಮ ಪ್ರತಿಷ್ಠಾಪಕನೆಂದು ನಂಬಿರುವ ನಾವು, ಲಿಂಗಾಯತರು ತಮ್ಮನ್ನು ತಾವು ವೀರಶೈವಕ್ಕೆ ಸಂವಾದಿಯಾಗಿ ಯಾಕೆ ಗುರುತಿಸಿಕೊಳ್ಳಬೇಕು?

(3). ಇನ್ನು ನಾವು ನಮ್ಮನ್ನು ಲಿಂಗಾಯತ ಎಂದು ಮಾತ್ರ ಗುರುತಿಸಿಕೊಳ್ಳಲು ಬಯಸುತ್ತೇವೆ, ಏಕೆ? ನಾವು ವೀರಶೈವರಲ್ಲ, ಇವೆರಡೂ ಬೇರೆ ಬೇರೆ. ನಾವು ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ, ಕದಿರ ರೆಮ್ಮವ್ವೆ, ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಮುಂತಾದ ಶಿವಶರಣರ ಕುಲದವರು. ವೀರಶೈವರು ವೇದಾಗಮಶಾಸ್ತ್ರಪುರಾಣ ಪ್ರಣೀತದವರು. ಅಲ್ಲಿ ಕಾಳವ್ವೆಗೆ ಸ್ಥಾನವಿಲ್ಲ. ನಮಗೆ ವಚನ ಶಾಸ್ತ್ರವೇ ಅಂತಿಮವಾದ ಧರ್ಮಗ್ರಂಥ. ಇದಕ್ಕೆ ನಮಗೆ ಪುರಾವೆಗಳು ಬೇಡ. ಇದನ್ನು ನಾನು ತಮ್ಮ 2009ರ ಜುಲೈ 17ರ ಲೇಖನಕ್ಕೆ ನೀಡಿದ ಉತ್ತರದಲ್ಲಿ ಸ್ಪಷ್ಟಪಡಿಸಿದ್ದೇನೆ. ಅದನ್ನು ತಾವು ಸರಿಯಾಗಿ ಗ್ರಹಿಸಿದಂತೆ ಕಾಣುವುದಿಲ್ಲ, ಅದರಲ್ಲಿ ನಾನು ಹೀಗೆ ಬರೆದಿದ್ದೇನೆ. 'ತಮ್ಮನ್ನು ತಾವು ಲಿಂಗಾಯತ ಧರ್ಮಾವಲಂಬಿಗಳೆಂದು ಕರೆದುಕೊಳ್ಳುವುದು ಲಿಂಗಾಯತರಿಗೆ ಭಾವನಾತ್ಮಕ ಸಂಗತಿಯಾಗಿದ್ದರೆ ಅದಕ್ಕೆ ಸಾಕ್ಷಾಧಾರದ ಅಗತ್ಯವಿಲ್ಲ'. ಇಲ್ಲಿಗೆ ಮುಗಿಯಿತು. ಇದಕ್ಕೆ ಪುರಾವೆಗಳು ಮತ್ತು ಸಾಕ್ಷಾಧಾರಗಳು ಬೇಕಾಗಿಲ್ಲ, ಇದು ನಮ್ಮ ನಂಬಿಕೆ. ಇದಕ್ಕೆ ಪುರಾವೆ ನೀಡಿ ತಮ್ಮನ್ನು ಒಪ್ಪಿಸಬೇಕಾಗಿಲ್ಲ. ಆದ್ದರಿಂದ ಮಾನ್ಯರು ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡಲು ಕೋರಿಕೊಳ್ಳುತ್ತೇನೆ. ಇತ್ತೀಚೆಗೆ ಸುಪ್ರೀಂಕೋರ್ಟೂ ಕೂಡ ತನ್ನ ಒಂದು ತೀರ್ಪಿನಲ್ಲಿ ಪುರಾವೆಗಳಿಗಿಂತ ಜನರ ನಂಬಿಕೆ ಮುಖ್ಯವೆಂಬುದನ್ನು ಎತ್ತಿ ಹಿಡಿದಿದೆ. ಈ ತೀರ್ಪಿನ ಬಗ್ಗೆ ನಮಗೆ ಲಿಂಗಾಯತರಿಗೆ ವಿಶ್ವಾಸವಿಲ್ಲ, ಅದು ಬೇರೆ ಮಾತು. ಆದರೆ ತಮಗೆ ಆ ತೀರ್ಪಿನ ಬಗ್ಗೆ ಪೂರ್ಣ ವಿಶ್ವಾಸವಿದೆ ಎಂಬುದನ್ನು ನಾನು ಬಲ್ಲೆ. ಅಂದಮೇಲೆ ತಾವು ಪುರಾವೆಗಳ ಬಗ್ಗೆ ಯಾಕೆ ಹುಚ್ಚಿಡಿಸಿಕೊಂಡಿದ್ದೀರಿ? ನಮಗೆ ಪುರಾವೆ ಬೇಕಾಗಿಲ್ಲ, ನಾವು ವೀರಶೈವರಲ್ಲ, ನಾವು ಲಿಂಗಾಯತರು. ಇದು ನಮ್ಮ ನಂಬಿಕೆ. ಜನರ ನಂಬಿಕೆಯ ಜೊತೆಯಲ್ಲಿ ಆಟವಾಡುವುದು ಸರಿಯಲ್ಲ, ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡಿ. ತಾವು ತಮ್ಮನ್ನು ವೀರಶೈವರೆಂದು ಮಾತ್ರ ಕರೆದುಕೊಂಡರೆ ಅದಕ್ಕೆ ನಮ್ಮದೇನು ತಕರಾರಿಲ್ಲ, ನಮಗೆ ಸಂತೋಷ.

(4). ತಾವು ನಮ್ಮ ರಾಜ್ಯದ ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದ ವಿವಾದಗಳಲ್ಲಿ ವೇದಾಗಮಶಾಸ್ತ್ರಪುರಾಣ ವೀರಶೈವ ಪ್ರಣಾಳಿಕೆ ಪರವಾಗಿ ಯಾವಾಗಲೂ ವಾದ ಮಾಡುತ್ತಿರುತ್ತೀರಿ. ವಚನಸಂಸ್ಕೃತಿಯ ಪರವಾಗಿ ವಾದ ಮಾಡುವುದಿಲ್ಲ.

(ಅ). ಮೊದಲನೆಯದಾಗಿ ವೇದ-ಸಂಸ್ಕೃತ ವಿಶ್ವವಿದ್ಯಾಲಯವನ್ನು ಸರ್ಕಾರ ಆರಂಭಿಸುವುದಕ್ಕೆ ಸಂಬಂಧಿಸಿದಂತೆ ತಾವು 'ಗೆಲ್ಲುವ ಭಕ್ತರ ಭಾಷೆ'ಯ ಪರವಾಗಿ ನಿಂತುಕೊಳ್ಳದೆ 'ಕೊಲುವ ದೇವ ಭಾಷೆ'ಯ ಪರವಾಗಿ ನಿಂತು ಬಿಟ್ಟಿರಿ. ನಾಡಿನ ವಿದ್ವಾಂಸರೆಲ್ಲ ಅದಕ್ಕೆ ವಿರುದ್ಧವಿದ್ದರು. ಲಿಂಗಾಯತರು ಅದನ್ನು ತಿರಸ್ಕರಿಸಿದರು. ಈ ತಿರಸ್ಕಾರವು ವಚನ ಸಂಸ್ಕೃತಿ ಪ್ರಣಾಳಿಕೆಗೆ ಅನುಗುಣವಾಗಿತ್ತು. ಈಗ 'ವೀರಶೈವ ಬೇರೆಯಲ್ಲ-ಲಿಂಗಾಯತ ಬೇರೆಯಲ್ಲ' ಎನ್ನುವ ತಾವು ವೇದ-ಸಂಸ್ಕೃತ ವಿಶ್ವವಿದ್ಯಾಲಯದ ಸಂದರ್ಭದಲ್ಲಿ ವೀರಶೈವರ ಪರವಾಗಿ ನಿಂತು ಲಿಂಗಾಯತರಿಗೆ ಅನ್ಯಾಯವೆಸಗಿದಿರಿ. ತಮ್ಮ ವೀರಶೈವ-ಲಿಂಗಾಯತ ಬೇರೆ ಬೇರೆಯಲ್ಲ ಎಂಬ ಪ್ರತಿಪಾದನೆಯ ಹಿಂದೆ ಕೆಲಸ ಮಾಡುತ್ತಿರುವ ಸಂಗತಿಯು ಬಸವ ಪ್ರಣಾಳಿಕೆಯಲ್ಲ, ಅಲ್ಲಿ ಹಿಂದೂಶಾಹಿ ಪ್ರಣಾಳಿಕೆಯು ಕೆಲಸ ಮಾಡುತ್ತಿದೆ. ವಚನ ಸಂಸ್ಕೃತಿಯ ಬಗ್ಗೆ ಸುಳ್ಳನ್ನು ಹೇಳಿಕೊಂಡು ಅದನ್ನು ಅಪಮೌಲ್ಯಗೊಳಿಸಲು ತಾವು ಪ್ರಯತ್ನಿಸುತ್ತಿದ್ದೀರಿ. ಆದ್ದರಿಂದ ನಮಗೆ ತಮ್ಮ ಮೇಲೆ ವಿಶ್ವಾಸವಿಲ್ಲ.

(ಆ). ಕನ್ನಡ ವಿಶ್ವವಿದ್ಯಾಲಯದ ಭೂಮಿ ಪರಭಾರೆಯ ವಿವಾದ ಭುಗಿಲೆದ್ದಾಗ ತಾವು ಆ ವಿಶ್ವವಿದ್ಯಾಲಯದ ಪರವಾಗಿ ಮತ್ತು ಅದರ ಪರವಾಗಿ ಹೋರಾಟ ಮಾಡುತ್ತಿದ್ದವರ ಪರವಾಗಿ ನಿಲ್ಲುವುದಕ್ಕೆ ಪ್ರತಿಯಾಗಿ ಹಿಂದೂಶಾಹಿಯ ಪರವಾಗಿ, ಕೋಮುವಾದಿ ಸರ್ಕಾರದ ಪರವಾಗಿ, ಭೂಮಿ ಪರಭಾರೆ ಪರವಾಗಿ ನಿಂತಿರಿ. ತಮಗೆ ಗೊತ್ತಿದೆ. ಆ ಭೂಮಿಯ ಪರಭಾರೆಯು ಜನರ ಪರವಾದ ಕೆಲಸಕ್ಕೆ ಇರಲಿಲ್ಲ, ಅದು ಹಿಂದೂಶಾಹಿಯನ್ನು ಶಾಶ್ವತವಾಗಿ ನಮ್ಮಲ್ಲಿ ಸ್ಥಾಪಿಸಲು ನಡೆಸಿದ ಹುನ್ನಾರವಾಗಿತ್ತು, ಅದಕ್ಕಾಗಿ ಖಾಸಗಿ ಸ್ವರೂಪದ ಒಂದು 'ಶ್ರೀಕೃಷ್ಣದೇವರಾಯನ 500ನೆಯ ಪಟ್ಟಾಭಿಷೇಕದ ಪ್ರತಿಷ್ಠಾನ'ವನ್ನು ರೂಪಿಸಲಾಗಿತ್ತು, ಅದು ಕನ್ನಡದ ಅನನ್ಯತೆಗೆ, ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿತ್ತು. ಆದರೆ ತಾವು ಕೇವಲ ಹಿಂದೂಶಾಹಿಯನ್ನು ತೃಪ್ತಿಪಡಿಸುವುದಕ್ಕಾಗಿ ಕನ್ನಡ-ಕನ್ನಡಿಗರು-ಕರ್ನಾಟಕದ ವಿರುದ್ಧ ಅಂದು ಕೆಲಸ ಮಾಡಿದಿರಿ. ಆ ಹೋರಾಟದ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪರಿವಾರವು ಅದರ ಭೂಮಿಯನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದ್ದರೆ ತಾವು ಹಿಂದೂ ವೀರಶೈವ ಪ್ರಣಾಳಿಕೆಗೆ ಅನುಗುಣವಾಗಿ ಆ ಹೋರಾಟದ ಸಂಘಟನೆಯನ್ನು ಮುರಿಯಲು ಪ್ರಯತ್ನಿಸಿದಿರಿ. ನಮ್ಮ ವಿಶ್ವವಿದ್ಯಾಲಯದ ಆಯ್ದ ಅಧ್ಯಾಪಕರಿಗೆ ದೂರವಾಣಿಯ ಮೂಲಕ ಮಾತನಾಡಿ ಭೂಮಿಯ ಪರಭಾರೆಯನ್ನು ಬೆಂಬಲಿಸಿ ಎಂದು ಅವರಿಗೆ ಉಪದೇಶ ನೀಡಿದಿರಿ. ಪರಭಾರೆಯನ್ನು ವಿರೋಧಿಸಿ ಹೋರಾಡುತ್ತಿರುವವರ ವಿರುದ್ಧ ಮಾತನಾಡುವಂತೆ ಪ್ರಚೋದಿಸಿದಿರಿ. ಆದರೆ ಕನ್ನಡ ವಿಶ್ವವಿದ್ಯಾಲಯದ ಪರಿವಾರ ವಿಶ್ವವಿದ್ಯಾಲಯಕ್ಕೆ ದ್ರೋಹ ಬಗೆಯುವ ಕೆಲಸಕ್ಕೆ ಸಿದ್ಧವಿರಲಿಲ್ಲ, ಹಾಗಾಗಿ ಅವರು ತ[...] ಮಾತು ಕೇಳಲಿಲ್ಲ.



ನಮ್ಮ ವಿಶ್ವವಿದ್ಯಾಲಯದ ಭೂಮಿ ಪರಭಾ[...] ವಿಷಯದಲ್ಲಿ ಸರ್ಕಾರ ಸೋತಿತು ಮತ್ತು ಕೋಮುವಾದಿ[...] ಸೋತರು. ಆದರೂ ಸರ್ಕಾರ ಅಂದು ಸ್ಥಾಪನೆಗೊ[...] ಪ್ರತಿಷ್ಠಾನಕ್ಕೆ ನೂರಾರು ಕೋಟಿ ಹಣವನ್ನು ಅನುದಾನ[...] ನೀಡುತ್ತಿದೆ. ಆ ಹಣ ಏನಾಗಿದೆ, ಆ ಪ್ರತಿಷ್ಠಾನ [...] ಮಾಡುತ್ತಿದೆ ಎಂಬುದು ಇಂದಿಗೂ ಯಾರಿಗೂ ತಿಳಿ[...] ಆದರೆ ತಾವು ಅದು ಕೇವಲ ಹಿಂದೂಶಾಹಿ [...] ಕಾರಣಕ್ಕೆ ಅದರ ಪರವಾಗಿ ನಿಂತಿರಿ. ಇದು ಲಿಂಗಾ[...] ತತ್ವಕ್ಕೆ ವಿರುದ್ಧವಾದ ನಿಲುವಾಗಿತ್ತು, ಸಾರ್ವಜನಿಕ ಹಣ[...] ದೇವಾಲಯಗಳಂತಹ ಸ್ಮಾರಕಗಳನ್ನು, ದೇವಾಲಯಗ[...] ನಿರ್ಮಿಸುವ ಪ್ರಣಾಳಿಕೆಗೆ ಪರವಾಗಿ ತಾವು [...] ಮಾಡುತ್ತಿದ್ದೀರಿ. ನಿಮ್ಮ ನಿಲುವು ಹಿಂದೂ ವೀರಶೈ[...] ಅನುಗುಣವಾಗಿದೆ ವಿನಾ ಅದು ಲಿಂಗಾಯತಕ್ಕೆ ಅನುಗ[...]ವಾಗಿಲ್ಲ.

(5) ತಾವು 2009ರ ಜುಲೈ 17ರಂದು ಪ್ರಜಾವಾ[...]ಯಲ್ಲಿ ಬರೆದ ಲೇಖನದಲ್ಲಿ ಲಿಂಗಾಯತವು ಒ[...] ಧರ್ಮ ಎನ್ನುವುದರಿಂದ ಹಿಂದೂ ಧರ್ಮಕ್ಕೆ ಅಪಾ[...] ವಾಗುತ್ತದೆ ಎಂಬ ಅರ್ಥ ಬರುವ ಮಾತನ್ನಾಡಿದಿ[...] ಪುರಾವೆ-ಸಾಕ್ಷ್ಯಾಧಾರದ ಬಗ್ಗೆ ಬಹಳಷ್ಟು ವಿಶ್ವಾಸವಿ[...] ತಾವು ಈ ವಿಷಯದ ಬಗ್ಗೆ ಪುರಾವೆಗಳನ್ನು ಯ[...] ನೀಡುತ್ತಿಲ್ಲ? ಲಿಂಗಾಯತವು ಒಂದು ಧರ್ಮವಾಗು[...]ರಿಂದ ಹಿಂದೂ ಧರ್ಮಕ್ಕೆ ಯಾಕೆ, ಹೇಗೆ, ಎಲ್ಲಿ ಯಾ[...] ಅಪಾಯ ಬಂದಿದೆ ಎಂಬುದನ್ನು ಪುರಾವೆ ಸಹ[...] ತಾವು ಸಿದ್ಧ ಮಾಡಿಕೊಡಬೇಕು. ತಮ್ಮ ಲೇಖನದಲ್ಲಿ[...] ವಿಷಯ ಕುರಿತಂತೆ 'ಸುಳ್ಳು' ಹೇಳಿದ್ದೀರಿ. ಅಪಾಯ[...] ಮಾತು ಬಿಡಿ. ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿ[...] ಲಿಂಗಾಯತವು ಒಂದು ಧರ್ಮವಾದರೆ ಅದರಿ[...] ಸಮಾಜಕ್ಕೆ, ಸಮಾಜದ ಸಮುದಾಯಗ[...] ಯಾವುದೇ ನಷ್ಟವಿಲ್ಲ.

(6) ಕೊನೆಯದಾಗಿ ತಮ್ಮ ವೀರಶೈ[...] ಲಿಂಗಾಯತ ಬೇರೆ ಬೇರೆಯಲ್ಲ ಎಂಬ ಪ್ರತಿಪಾ[...]ಯಿದೆಯಲ್ಲ ಅದರಲ್ಲಿ ನಮಗೆ ಹಿಂದೂ ವೀರಶೈ[...] ಪರವಾದ ಮತ್ತು ಲಿಂಗಾಯತ ವಿರುದ್ಧವಾದ ಉ[...] ಗಟ್ಟಿಯಾಗಿ ಎದ್ದು ಕಾಣುತ್ತದೆ. ನಿಮ್ಮ ಪ್ರತಿಪಾದನೆಯ ಪ್ರಾಮಾಣಿಕತೆಯ ಬಗ್ಗೆ ನ(ಮ[...] ಅನುಮಾನವಿದೆ. ಈ ನಿಮ್ಮ ಪ್ರಣಾಳಿಕೆಯ ಪರ[...] ವಾದದ ಮೂಲಕ ತಾವು ಹಿಂದೂಶಾಹಿಯ[...] ಮೆಚ್ಚಿಸುವುದಕ್ಕಾಗಿ ಪ್ರಯತ್ನಿಸುತ್ತಿರುವುದು ನ[...] ಸ್ಪಷ್ಟವಾಗಿದೆ. ಈ ಬಗೆಯ ಪ್ರತಿಪಾದನೆಯನ್ನು ತಮ್ಮಂ[...] ಹಿಂದೂಶಾಹಿ ವಿದ್ವಾಂಸರು ಬಹಳ ಹಿಂದಿನಿಂದ [...] ನಡೆಸಿಕೊಂಡು ಬರುತ್ತಿದ್ದೀರಿ. ಲಿಂಗಾಯತರಾದ ನ[...] ಈ ವಿಷಯದಲ್ಲಿ ಮೋಸ ಹೋಗಿದ್ದೆವು. ಈಗ ನ[...] ತಿಳುವಳಿಕೆ ಬಂದಿದೆ. ಹಿಂದೆ ಅಕ್ಷರ ಸಂಸ್ಕೃತಿಯು ಹಿಂ[...] ವೀರಶೈವರಾದ ತಮ್ಮ ಗುತ್ತಿಗೆಯಾಗಿತ್ತು, ಈಗ [...] ಬದಲಾಗಿದೆ. ಹಡಪದರು, ಸಿಂಪಿಗರು, ಸಾದ[...] ನೊಳಂಬರು, ಪಂಚಮಸಾಲಿಗರು, ಬಣಜಿಗರು, ಜಾ[...] ಕುರುಹಿನಶೆಟ್ಟರು ಮುಂತಾದ ಹತ್ತು-ಹದಿನೆ[...] ಸಮುದಾಯಗಳಿಂದ ಕೂಡಿದ ಲಿಂಗಾಯತರಲ್ಲೂ [...] ಸಂಸ್ಕೃತಿ ಬೆಳೆದಿದೆ. ವೀರಶೈವರ ಮೋಸದಾಟ ಮುಗ್ಧ[...] ಲಿಂಗಾಯತರಿಗೆ ಇಂದು ತಿಳಿಯುತ್ತಿದೆ. ತಮ್ಮ ವೀರ[...] ಪರವಾದ ಪ್ರತಿಪಾದನೆಯ ಹಿಂದೆ ವೇದಾಗಮಶಾಸ್ತ್ರಪು[...] ಪ್ರಣಾಳಿಕೆಯು ಕೆಲಸ ಮಾಡುತ್ತಿದೆ ವಿನಃ ವಚನ [...] ಪ್ರಣಾಳಿಕೆಯಲ್ಲ ಎಂಬುದನ್ನು ನಾನು ಬಹಳ ಹಿಂದೆ[...] ಬಹಿರಂಗಪಡಿಸಿದ್ದೇನೆ.

ಇಂದು ನಡೆಯುತ್ತಿರುವ ಜನಗಣತಿಗೆ ಸಂಬಂ[...]ದಂತೆಯೂ ತಾವು ಲಿಂಗಾಯತದ ವಿರುದ್ಧ [...] ಮಾಡುತ್ತಿದ್ದೀರಿ. ನಮ್ಮದು ಪ್ರತ್ಯೇಕ ಲಿಂಗಾಯತ ಧ[...] ಅದು ಹಿಂದೂ ಧರ್ಮದ ಭಾಗವಲ್ಲವಷ್ಟೇ ಅಲ್ಲ, [...] ಹಿಂದೂ ಧರ್ಮದ ವಿರುದ್ಧ ಯುದ್ಧ ಸಾರಿದ ಧ[...] ಇದು ನಮ್ಮ ನಂಬಿಕೆ. ಇದಕ್ಕೆ ಪುರಾವೆಗಳು ಬೇಕಾ[...]

ಮಾನ್ಯ ಡಾ.ಎಂ.ಚಿದಾನಂದ ಮೂರ್ತಿ ಅವರೆ, ತ[...] ಎಷ್ಟೇ ಪುರಾವೆಗಳನ್ನು ತಂದಿಟ್ಟರೂ ಲಿಂಗಾಯ[...] ಹಿಂದೂ ವೀರಶೈವರಾಗುವುದಿಲ್ಲ. ಇದರ ಬಗ್ಗೆ ತ[...] ವಕೀಲಿ ನಡೆಸುವುದನ್ನು ಇನ್ನು ಮೇಲೆ ನಿಲ್ಲಿಸುವ[...] ಲೇಸು. ನಮ್ಮ ಬಸವಣ್ಣ ನಮ್ಮ ಪಕ್ಷವನ್ನು ಗಟ್ಟಿಯ[...] ಕಟ್ಟಿಕೊಳ್ಳಲು ಹೇಳಿದ್ದಾನೆ. 'ಶಿವಭಕ್ತನಾಗಿ ಭಕ್ತಪಕ್ಷವಿಲ್ಲದಿ[...]' ಎಂಬ ಮಾತನ್ನು ಬಸವ ತನ್ನ ಒಂದು ವಚನದಲ್ಲಿ ಆಡಿ[...] ಅದನ್ನು ನಾವು ನೆಮ್ಮಿಕೊಂಡಿದ್ದೇವೆ. ಹುಸಿಯನ್ನು ನುಡಿ[...] ಮತ್ತು ಅನಾಗರಿಕ ಭಾಷೆಯನ್ನು ಬಳಸದೆ ನನ್ನ ಬಹಿ[...] ಪತ್ರ ಮುಗಿಸುತ್ತಿದ್ದೇನೆ.

ಗೌರವಗಳೊಂದಿಗೆ, ತಮ್ಮ ವಿಶ್ವಾಸಿ

• ಟಿ.ಆರ್. ಚಂದ್ರಶೇ[...]
ಪ್ರಾಧ್ಯಾಪಕ, ಅಭಿವೃದ್ಧಿ ಅಧ್ಯಯನ ವಿಭಾಗ, [...]
ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583

ಇಂತ ಬಜೆಟ್ಟ ನಾನೂ ಮಾಡಿ ಕೊಡ್ತೀನಿ ಗೊತ್ತೇ!

ಯ ಲು ಸೀ ಮೆ

ಕಟ್ಟೆಪುರಾಣ

▶▶ಬಿ. ಚಂದ್ರೇಗೌಡ

"ಎಡೂರಪ್ಪನ ಕರ್ಸಿ ಬಜೆಟ್ಟಲ್ಲಿ ಏನೇನು ಕೊಟ್ಟವ್ರುನ್ಲ?" ಎಂದು ಸೀರ ಪಡೆದುಕೊಳ್ಳುವ ಹಕ್ಕುದಾರನಂತೆ ಕೇಳಿದ. "ನಿನಿಗೆ ಬೇಕಾದ್ದೇನು ಕೊಟ್ಟಿಲ್ಲ ಕಣೊ. ಅವುನಿಗೇನು ಬೇಕು ಅನ್ನಿಸ್ತೊ ಅದ ಕೊಟ್ಟವುನೆ. ಯಾಕಪ್ಪಾ ... ನೀವು ಕೃಷಿ ಬಜೆಟ್ ಮಾಡಪ್ಪ ಅಂತ ನಾವು ...ದ್ಯೋ? ಅವುನಷ್ಟಕವುನೆ ಕುಣದಾಡಿದ, ಮಾಡಿದ, ...ನಾದ ಅತ್ತಗೆ. ಅವ್ಯಾವೂ ನಮ್ಮತ್ರಕೆ ಬರದಂಗವೆ." ... ಉಗ್ರಿ.

"ಅಂಗೆ ಮಾಡಿದ್ನೆ?"

"...ಜೂ ಕಣೊ. ಅವುನ ಬಜೆಟ್ ನೋಡಿದ್ರೆ ಯಲಕ್ಷನ್ ...ಲ್ಲಿ ಮಾಡೊ ಸಂತೆ ಭಾಸಣದಂಗದೆ. ಒಂದ್ಸೈಟಂ ಇಷ್ಟವಿಲ್ದೆಯಿರೊ ಹೆಡತಿಗೆ ಒಂದು ರೇಷ್ಮೆ ಸೀರೆ ಕೊಟ್ಟಂಗದೆ." ಎಂದ ಉಗ್ರಿ.

"ರೈತರಿಗ್ಯಲ್ಲ ಒಂದು ಪರಸೆಂಟು ಬಡ್ಡಿಗೆ ಸಾಲ ...ದಂತಲ್ಲಾ?"

"ಅದ್ನೆ ನಾನು ರೇಷಮೆ ಅಂತ ಹೇಳಿದ್ದು. ಎಷ್ಟು ಅಂತ ಕೊಟ್ಟನೂ? ಅಂಗಂತ ಹೋಗಿ ಕೇಳಿನೋಡು."

"...ಬೇಕಾದೋಟು ಬೆನಿಪಿಟ್ಟು ಕೊಟ್ಟನಂತೆ."

"ಅವುನ ಬೆನಿಫಿಟ್ಟೇನು ಅಂತ ಗೊತ್ತೇನೊ ನಿಂಗೇ? ...ಲಾಗುತ್ತೆ, ನೀಡಲಾಗುತ್ತೆ, ಕೊಡಲಾಗುತ್ತೆ ಅಂತ ...ನೆ. ಅಂಗಂದ್ರೇನು? ಆ ಮಾತಲ್ಲೇ ದವ್ರುಟಿಲವೇನೊ. ...ಪ್ಪಾ ಅಂದ್ರೆ 'ನೋಡನ ನಡಿ' ಅಂತರಲ್ಲ ಅಂಗೆ."

"...ಣ್ಣೆಡುವಳಿದಾರರಿಗೆ ಹತ್ತು ಸವುರ ಕೊಟ್ಟನಂತೆ."

"ಅಂಗಂದವುನೆ ಸರಿ ಕಣೊ. ನಮ್ಮೂರಲ್ಲಿ ಇರೋರ್‍ಯಲ್ಲ ...ವಳಿದಾರರ್ರೆಯ. ಅಂಗಂತ ಇಲ್ಲಿ ಯಲ್ಲಾರಿಗೂ ...ಕ್ಕತೆ? ಆಟೊಂತರ ದುಡ್ಡು ಅವನತ್ರ ಎಲ್ಲಿದ್ದತೂ?" ...ಹಕಾರಿ ಸಾಲ ಯಲ್ಲಾರಿಗೂ ಎಲ್ಲಿ ಸಿಕ್ಕತ್ತು? ಯಾರೊ ...ರೋರು ವಡಕತ್ತರೆ. ತಲಿಕೆಟ್ಟ ಸರಕಾರ ಬಂದಾಗ ...ಡಿಸಿಗತ್ತರೆ. ಅಂಗೆ ತಾನೆ ನ್ಯಡಕಂಡು ಬಂದಿರದು" ... ಕಾಳಮಾವ.

"...ಡ ಕಣಮಾವ ನೀನೇಳಿದ್ದು. ಈಗ ಬಿಜೆಪಿ ಕಾರ್ಯಕರ್ತರು ಚುರುಕಾಯ್ತರೆ. ಹೋಗಿ ಬ್ಯಾಂಕ್ ಮ್ಯಾನೇಜರ್‌ತ್ರ ಮಾತಾಡಿ ತಮ್ಮೊರಿಗೆ ಸಾಲ ಕೊಡುಸ್ತರೆ. ಬ್ಯಾರೆ ಜನ ಹೋದ್ರೆ ಸಾಲದ ಕೋಟಾ ಮುಗೀತು ಅಂತರೆ."

"ಆಗೊಂದ ಸತಿ ಕಾಂಗ್ರೆಸ್ಸಿನೋರು ಪೂಜಾರಿ ಸಾಲ ತಗಂಡಿದ್ರು, ನೋಡು ಅಂಗೆ ಅನ್ನು" ಎಂದ ಸೀರ.

"ನೋಡದೇ ತರ ಈ ಒಂದು ಪರಸೆಂಟಿನ ಕತೆನೂ ಆಯ್ತದೆ."

"ಅಂಗರೆ ಕರ್ಸಿ ಬಡಜೆಟ್ಟನಿಂದ ಏನು ಆಗದಿಲ್ಲ ಅಂತಿಯಾ?"

"ಏನಾರ ಆಗಕ್ಕೆ ಯಂಗಾದತು ಮಾವ? ಅಂಗೇನಾರ ಆಗಬೇಕಾಗಿದ್ರೆ ಎಡೂರಪ್ಪ ಕೃಷಿ ಪರಿಣತ್ರು, ರೈತ ಸಂಘದೋರು, ಆಮ್ಯಾಲೆ ಇನ್ನು ಯಾರ್ಯಾರ್ನೊ ಕರದು ಮಾತಾಡಿ ಒಂದು ತೀರಮಾನಕ್ಕೆ ಬಂದು ಬಜೆಟ್ ಮಾಡಬೇಕಾಗಿತ್ತು, ಇದ್ಯಂಗಾಯ್ತು ಅಂದ್ರೇ, ಮಾಮೂಲಿ ಬಜೆಟ್ಟಲ್ಲೇ ಒಂದು ಹತ್ತು ಪುಟ ಹರಕಂಡು ಓದಿದಂಗದೆ. ಅದ್ಕೆ ಏಟೊಂದು ಪ್ರಚಾರ ಕೊಟ್ರು ಅಂತೀ. ಆ ಎಡೂರಪ್ಪ ಕಾಸಗಲ ಕುಂಕುಮ ಹಚಗಂಡು, ಸೂಟ್‌ಕೇಸ್ ದೇವರತ್ರ ಮಡಗಿ ಪೂಜೆ ಮಾಡಿ, ಅಲ್ಲಿಂದ ಮೃರವಣಿಗೆ ಬಂದು, ದೊಡ್ಡದಾಗಿ ಬಿಜೆಪಿ ರೈತರೆದ್ರಿಗೆ ಭಾಸಣ ಮಾಡಿ, ಕಡಿಗೆ ವಿಧಾನಸೌಧಕ್ಕೋಗಿ, ಬರಕ್ಕಂಡು ಬಂದಿದ್ದ ಓದ್ಯವುನೆ. ಅವ್ರುನೋದಿ ಹದುಮೂರು ದಿನಾಯ್ತು, ಯಲ್ಲ ತಣ್ಣಗಾಯ್ತಪ್ಪ ಅತ್ತಗೆ. ಎಡೂರಪ್ಪನ ಬಜೆಟ್ಟಿಂದ ಈ ವಾಟಿಸ್ಸೆ ಅಂಥೋರಿಗೆ ಒಂದಿಷ್ಟು ಅನುಕೂಲಾಯ್ತು" ಎಂದ ಉಗ್ರಿ.

"ನನಿಗ್ಯಾವ ಅನುಕೂಲಾಯ್ತೋ ಉಗ್ರಿ? ಸುಳ್ಳಸುಳ್ಳನೆ ಹೇಳಬ್ಯಾಡ" ಎಂದು ವಾಟಿಸ್ಸೆ ಹಾಜರಾದ.

"ವಿಸ್ಕಿ ಬ್ರಾಂದಿ ರೇಟೇರಿಸಿಲ್ಲ ಕಣೊ."

"ಏರಿಸಿದ್ರೆ ಕಳ್ಳಬಟ್ಟಿ ಸುರುವಾಯ್ತದೆ ಅಂತ ಏರಿಸಿಲ್ಲ ಗೊತ್ತೆ."

"ಆದ್ರು ಕಳ್ಳಬಟ್ಟಿನೂ ನಿಂತಿಲವಂತಲ್ಲ ಹೇಳು."

"ಅದ್ಯಂಗೆ ನಿಲ್ತದೊ ಉಗ್ರಿ. ನೀನೆಷ್ಟೇ ಬೀರು, ಬ್ರಾಂದಿ, ವಿಸ್ಕಿ ಕುಡಿ ಒಂದು ಕ್ವಾಟ್ರು ಶರಾಪಿನ ಕಿಕ್ಕೇಬ್ಯಾರೇ. ಅದ್ಕೆ ನೋಡು ಕಳ್ಳಬಟ್ಟಿ ಇಳಸೊ ಜಾಗಕ್ಕೆ ಹೋಗಿದ್ದ ರೇಣುಕಾಚಾರಿ ಟೀಮಿಗೆ ಕಲ್ಲುಬೀರಿ ಕಳಿಸ್ಯವುರೆ ಸದ್ಯಕೆ. ಅಬಕಾರಿ ಮಂತ್ರಿ ಕ್ಯಲಸೇನಪ್ಪ ಅಂದ್ರೆ ಕಳ್ಳಬಟ್ಟಿ ಜಾಗ ಹುಡಕದು, ಕಲ್ಲಲ್ಲಿ ಹ್ವಡಿಸಿಗಂಡು ಬರದು ಅನ್ನಂಗಾಗ್ಯದೆ" ಎಂದ ವಾಟಿಸ್ಸೆ.

"ಈ ರೇಣುಕಾಚಾರಿ ಮಾಡೋ ಕ್ಯಲಸ್ಯಂಗದೆ ಅಂದ್ರೆ ಇನ್ನು ಮುಂದೆ ಕಳ್ಳಬಟ್ಟಿ ರೈಡಿಗೆ ಮಂತ್ರಿನೂ ಬರಬೇಕು ಅನ್ನಂಗಾಗ್ಯದೆ."

"ಅವುನ ಕತೆ ಆಂಗಿರ್ಲಿ, ಎಡೂರ ರೈತರಿಗೆ ನಿಜವಾಗ್ಲು ಏನು ಕೊಟ್ಟವುನೆ ಅಂತ ನೀನಾರ ಹೇಳ್ಳ ವಸಿಯಾ" ಎಂದ ಸೀರ.

"ಸುಲಭವಾಗಿ ಮರಳು ಸಿಗಂಗೆ ಮಾಡ್ಯವುನೆ ಚಿಗಪ್ಪ."

"ಮಳ್ಳ ತಗಂಡೇನು ಮುಕುಳಿಗುಯ್ಯಕಳ್ಳೆ. ನಮ್ಮೂರ ಹಳ್ಳದಲ್ಲೇ ಬಿದ್ದದಪ್ಪ."

"ಅಮ್ಯಾಲೆ ನಿನ್ನ ಜಮೀನ ಸುತ್ತ ಮುಳ್ಳುಬೇಲಿ ಹಾಯ್ಕಬಹುದು. ಅದು ಚೀಪಾಗಿ ಸಿಕ್ಕದಂತೆ."

"ಮುಳ್ಳು ಬೇಲಿ ಹಾಕಕ್ಕೆ ಕಲ್ಲುಕಂಬಬೇಕು."

"ಅದು ನಿನ್ನ ಪಾಡು. ಅದಕೂ ಎಡೂರಪ್ಪನಿಗೂ ಸಮಂದಿಲ್ಲ. ನೀನು ಸರಕಾರಕೆ ತುಂಬಾ ಟ್ಯಾಕ್ಸ್ ಕಟ್ಟೊನಂಗೆ ಡಿಮ್ಯಾಂಡ್ ಮಾಡಬ್ಯಾಡ."



"ಯಾವ ಆದಾಯ ಇಲ್ದೆಯಿದ್ರೂ ಟ್ಯಾಕ್ಸ್ ಕಟ್ಟತಿನಿ ಕಂಡ್ಯ."

"ಅದ್ಯಂಗೆ ಕಟ್ಟತಿ ಚಿಗಪ್ಪ?"

"ನಾನೊಂದು ಬೀಡಿ ಸೇದಿದ್ರೆ ಹತ್ತು ಪೈಸ ಹೋಗಿ ಸರಕಾರದ ತಿಜವರಿವಳಿಕೆ ಟಣಾರಂತ ಬೀಳ್ತದೆ ಗೊತ್ತೇ?"

"ಓಹೋ, ನಾನೇ ಹೇಳಿದ ಡೈಲಾಗು ನನಿಗೇ ರಿಪಿಟಾಯ್ತು ಇರ್ಲಿ. ನೀನೇನು ಹೆದರಬ್ಯಾಡ ಚಿಗಪ್ಪ ಎಡೂರಪ್ಪ ಸುವರ್ಣಭೂಮಿ ಯೋಜನೆ ಅಂತ ಮಾಡಿ ಡ್ರೈಲ್ಯಾಂಡ್ ಪರಸನ್ನಗಳಿಗೆ ಸವುರಕೋಟಿ ಕೊಡ್ತನಂತೆ."

"ಅದ್ಯಂಕೊಟ್ಟನ್ಲ?"

"ಯರಡ್ಯಕರೆ ಜಮೀನಿರೊ ಬ್ಯಾಕ್‌ವರ್ಡ್ ಕಮ್ಯುನಿಟಿಗೆ ಹತ್ತು ಸವುರ ಕೊಡ್ತನಂತೆ."

"ಬ್ಯಾಕ್‌ವಾಡ್ ಕಮಿಟಿ ಅಂದ್ರೆ?"

"ಅಂದ್ರೆ ದಲಿತ್ರು, ಹಿಂದುಳದೋರ ಗುರುತು ಮಾಡಿ, ಯರಡು ಕಂತಲ್ಲಿ ಹತ್ತು ಸವುರ ಕೊಡ್ತನೆ. ಪ್ರಾಬ್ಲಂ ಏನಪ್ಪ ಅಂದ್ರೇ ನೀನು ಬ್ಯಾಕುವರ್ಡು ಅಲ್ಲ, ನಮ್ಮ ಹೋಟ್ಲು ಚಿಕ್ಕಣ್ಣ ಬ್ಯಾಕ್ ವರ್ಡಿಂದ ಡ್ರೈಲ್ಯಾಂಡ್ ತೋರಿಸಿ, ಹತ್ತು ಸವುರ ತಗಂಡು, ಹೋಟ್ಲು ಮ್ಯಾಲೆ ಹಾಯ್ಕಬವ್ರುದು. ಎನಿ ಹೌ ಎಡೂರಪ್ಪನ ಬಜೆಟ್ಟಿನ ಸಾರಾಂಶ ನೋಡಿದ್ರೆ ಅವ್ಯಲ್ಲ ಈ ಶತಮಾನದಲ್ಲಿ ಜಾರಿಯಾಗದು ಕಷ್ಟ. ಇಂತ ಬಜೆಟ್ಟ ಇಲ್ಲಿ ಕೂತಗುಂಡು ನಾನೂ ತಯಾರಿಸಿ ಕೊಡಬಲ್ಲೆ."

"ಅಂಗರಿವುನ ಬಜೆಟ್ಟು ಬುರ್ನಾಸು ಅಂತಿಯಾ?"

"ನಮ್ಮ ತಾಯಾಣೆ ದೊಡಪ್ಪ ಇಟೀಸ್ ನಾಟ್ ಸೋ ಈಜಿ. ಅರವತ್ತು ಸಾವುರುಪಾಯಿಲಿ ಯರಡು ಸಾವುರ ಮನೆಕಟ್ಟಿ ಕೊಡ್ತನಂತೆ. ಪಾಪ ಪ್ರವಾಹ ಬಂದು ಬೀದಿಗೆ ಬಿದ್ದೋರು ಇನ್ನು ಜಿಂಕ್‌ಶೀಟ್ ಶೆಡ್ಡಲ್ಲೇ ಅವುರೆ. ಅಂಗಿರುವಾಗ ಮೀನು ಹಿಡಿಯೋ ಜನಕೆ ಯರಡುಸವುರ ಮನೆಕೊಡ್ತನಂತೆ. ಇನ್ನುಳದೋರಿಗೆ ಮೂರು ಲಕ್ಷ ಮನೆಕಟ್ಟಿ ಕೊಡ್ತನಂತೆ. ಹಿಂಗೂ ಸುಳ್ಳೇಳ್ಯರೆ ದ್ವಡಪ್ಪ?"

"ಅದೇನಾರ ಆಗ್ಲಿ, ಅಂಗನವಾಡಿಯೋರಿಗೆ ವಳ್ಳೆದು ಮಾಡಿದ" ಎಂದಳು ಜುಮ್ಮಿ.

"ಅವುರಿಗೇನು ಮಾಡಿದಾ?"

"ಅವುರನ್ಯಲ್ಲ ಪರಮಿಟ್ಟು ಮಾಡ್ಯವುನೆ ಕಣಮಾವ. ಅದು ಅಲ್ದೆ ಅರುವತ್ತುರ್ಸಾದ ಮ್ಯಾಲೆ ಪಿಂಚಣಿ ಮಾಡ್ಯವುನೆ. ಹೆಂಗಸರಿಗೆ ತಿರಗ ಸೀರೆ ಕೊಟ್ಟನಂತೆ."

"ಅಂತೂ ಯಲ್ಲಾರ್ನೂ ಭಿಕ್ಷುಕುರ ಮಾಡಿಬುಟ್ಟ ಅನ್ನು."

"ಎಸ್ ದ್ವಡಪ್ಪ, ಇಂತ ಬಜೆಟ್ಟ ನಾನೂ ಮಾಡಿ ಕೊಡಬಲ್ಲೆ."

"ಓಹೊಹೂ ಮಾಡ್ತಿ ನೀನು. ಅದ್ಯಂಗೆ ಮಾಡ್ತಿಲಾ?"


"ವೆರಿ ಸಿಂಪಲ್ ಕಣಕ್ಕ, ಒಂದು ಕಡೆ ಪ್ರಾಬ್ಲಮ್ಮಿರತವೆ. ಇನ್ನೊಂದು ಕಡೆ ಅಮವುಂಟಿರತದೆ. ನನಿಗೆ ತಿಳದಂಗೆ ಹಂಚಿದರಾಯ್ತು, ದಟೀಸ್ ಬಜೆಟ್!" ●

ವೇಳೆಗೆ ಅಬದ್ಧರು

...ಮೊನ್ನೆ ಲಲಿತಾನಾಯಕ್ ಸಭೆಗೆ ತಡವಾಗಿ ಹೋಗಿದ್ದು ಹಾಗೆಯೇ ತಡವಾಗಿ ಹೋಗುವುದನ್ನೇ ಅಭ್ಯಾಸ ಮಾಡಿಕೊಂಡಿರುವುದು, ...ಗೌಡರ ಶೈಲಿಯೇ ತಡವಾಗಿ ಹೋಗುವುದು ಎಂಬುದು ವರದಿಯಾಗಿದೆ. ಈಚೆಗೆ ಸಾರ್ವಜನಿಕ ವೇದಿಕೆಯಿಂದ ಆಳುವವನ ...ಬರೆದೆ; ಈಗ ಅದಕ್ಕಿಂತ ಗಂಭೀರವಾದ ಈ ತಡವಾಗುವ ಉದ್ಧಟತನದ ಬಗ್ಗೆ ಬರೆಯುತ್ತಿದ್ದೇನೆ.

...ವು ಗೆಳೆಯನೊಬ್ಬನಿಗೆ ಇಂಥ ಸ್ಥಳದಲ್ಲಿ ಇಷ್ಟು ಸಮಯದಲ್ಲಿ ಸಿಕ್ಕುತ್ತೇನೆ ಎಂದು ಹೇಳಿದರೆ ಹಾಗೆ ಈ ಸ್ಥಳದಲ್ಲಿ ವೇಳೆಗೆ ...ಗಿ ಭೇಟಿಯಾಗುವುದು ನಿಮ್ಮ ಕರ್ತವ್ಯ, ಅದು ಗೆಳೆತನಕ್ಕೆ ಕೊಡುವ ಮರ್ಯಾದೆ; ಒಂದು ಕರಾರನ್ನು ಮನ್ನಿಸುವ ರೀತಿ. ... ಸಮಯಕ್ಕೆ ಸರಿಯಾಗಿ ಹೋಗದಿದ್ದರೆ ಎಲ್ಲ ಕರಾರೂ ಪ್ರೀತಿವಿಶ್ವಾಸದೊಂದಿಗೆ ಸೊನ್ನೆಯಾಗುತ್ತವೆ. ಆದಕ್ಕಿಂತ ಹೆಚ್ಚಾಗಿ ನಿಮ್ಮ ...ನಿಮಗೆ ಗೌರವವಿಲ್ಲ ಎಂಬುದು ತಿಳಿಯುತ್ತದೆ.


...ದು ಸಭೆಗಳ ಬಗ್ಗೆ ಇನ್ನೂ ಗಂಭೀರವಾದದ್ದು, ನಿಮಗಾಗಿ ಹತ್ತು ಜನ ನಿರೀಕ್ಷಿಸುತ್ತಿದ್ದರೆ ಸಮಯಕ್ಕೆ ಸರಿಯಾಗಿ ಹೋಗಬೇಕು. ಯಾವ ಕುಂಟುನೆಪವೂ ಇಲ್ಲಿ ನಡೆಯುವುದಿಲ್ಲ; ಅಂಥ ನೆಪವನ್ನೆಲ್ಲ ನಾನು ಆತ್ಮವಂಚನೆ ಎಂದು ಕರೆಯುತ್ತೇನೆ. ಹತ್ತು ಜನರನ್ನು ಕಾಲುಗಂಟೆ ಕಾಯಿಸುವ ವ್ಯಕ್ತಿ ನೂರು ಜನಕ್ಕೆ ಮೋಸ ಮಾಡಲು ಹೇಸದವನು.



ದೇವೇಗೌಡರು ಸಭೆಗೆ ತಡವಾಗಿ ಬರುವುದರಲ್ಲಿ ಎತ್ತಿದ ಕೈ. ತಡವಾಗಿ ಬಂದು ಸಭಿಕರ ಕ್ಷಮೆಯನ್ನು ಕೂಡ ಕೇಳುವುದಿಲ್ಲ, ಆಮೇಲೆ ವೇದಿಕೆಯ ಮೇಲೆ ಕೂತಾಗ ತೂಕಡಿಸುವುದು, ತೂಕಡಿಸಿದಂತೆ ವರ್ತಿಸುವುದು ಇವೆಲ್ಲ ನಡೆದದ್ದನ್ನು ನಾನೇ ನೋಡಿದ್ದೇನೆ. ಇದು ಬೇಜವಾಬ್ದಾರಿತನ. ನಿಮ್ಮ ಸಭೆಗೆ ಒಬ್ಬ ಶ್ರೋತೃ (ಅಥವಾ ಪ್ರೇಕ್ಷಕ!) ಬರಬೇಕೆಂದಿದ್ದರೆ ಆತ ತನ್ನ ದಿನಚರಿಯಲ್ಲಿ ಹೊಂದಾಣಿಕೆ ಮಾಡಿಕೊಂಡಿರುತ್ತಾನೆ. ತನ್ನ ಹೊಸ ದಿನಚರಿ ಸೃಷ್ಟಿಸಿ...ರುತ್ತಾನೆ; ನೀವು ತಡವಾದರೆ, ಸಭೆಗೆ ಬಾರದೆ ಹೋದರೆ ಆತನ ದಿನಚರಿಯನ್ನು ಮಾತ್ರವಲ್ಲ; ...ಲ್ಲರ ದಿನದ ಯೋಜನೆಗಳಿಗೆ ಕಲ್ಲು ಹಾಕುತ್ತೀರಿ.

...ನೇ ಬಲ್ಲಂತೆ ವೇದಿಕೆಯಿಂದ ಆಳುವವನು, ಸಭೆಗೆ ವೇಳೆಗೆ ಸರಿಯಾಗಿ ಬಾರದಿರುವವನು ಮುಂದೆ ...ನ್ನು ನಾನು ನೋಡೇ ಇಲ್ಲ, ಸಭೆಗೆ ವೇಳೆಗೆ ಸರಿಯಾಗಿ ಬರುವುದು ಅಪಮಾನಕರ ಎಂದು ಕೆಲವರು ...ರು ತಿಳಿದಿರುತ್ತಾರೆ. ಅದು ತಪ್ಪು, ಸಭೆಗೆ ವೇಳೆಗೆ ಸರಿಯಾಗಿ ಹೋಗುವುದು, ಸಭೆಯಲ್ಲಿ ಎಷ್ಟು ...ರೆ ಎಂಬುದನ್ನು ಲೆಕ್ಕಿಸದೆ ಕಾರ್ಯಕ್ರಮ ಶುರುಮಾಡುವುದು, ದಿನದ ಮುಂದಿನ ಕೆಲಸಗಳಿಗೆ ...ಗುವುದು-ಒಬ್ಬ ಶುದ್ಧಹಸ್ತನಾದ, ಶಿಸ್ತಿನ ವ್ಯಕ್ತಿ ಪಾಲಿಸುವ ಮುಖ್ಯ ನಿಯಮ. ಇದು ನನ್ನ ಪಾಲಿಗಂತೂ ...ಮುಖ್ಯ ನಂಬಿಕೆ.

...ನು ಕೆಲವು ಸಲ ಸಭೆಗೆ ತಡವಾಗಿ ಹೋಗಬೇಕಾಗಿ ಬಂದು ಮೈಪರಚಿಕೊಳ್ಳುವಂತಾಗಿದೆ. ಇದಕ್ಕೆ ಕಾರಣ ...ದ್ದೇನೆ. ಸಾಮಾನ್ಯವಾಗಿ ಹಲವರು ಜೊತೆಗಾರರೊಂದಿಗೆ ಒಂದು ಸಭೆಗೆ ಹೋಗಬೇಕಾಗಿ ಬಂದಾಗಲೆಲ್ಲ ...ಗಿದೆ. ಅವರಲ್ಲಿ ಯಾವನೋ ಒಬ್ಬ ತನ್ನ ಮುಖ್ಯ ಗುಳಿಗೆ ಮರೆತು ಬಂದಿರುತ್ತಾನೆ, ಇನ್ನೊಬ್ಬ ಬಟ್ಟೆ ...ಂದಿರುವುದಿಲ್ಲ, ಮತ್ತೊಬ್ಬ ತಿಂದಿ ಮುಗಿಸಿರುವುದಿಲ್ಲ, ಮಗದೊಬ್ಬ ಶೌಚಗೃಹದಲ್ಲಿ ಕೂತುಬಿಟ್ಟಿರುತ್ತಾನೆ! ...ನು ಒಬ್ಬೊಬ್ಬರಾಗಿ ಬರುತ್ತಾ ಅವರ ನಿಮಿಷ ತಮಗೇ ತಾವು ಭಾಷಣ ಮಾಡಿಕೊಂಡು ತಿದ್ದಿಕೊಳ್ಳಬೇಕು. ...ದೇವೇಗೌಡರು ಒಮ್ಮೆಯಾದರೂ ಎರಡು ನಿಮಿಷ ತಮಗೇ ತಾವು ಭಾಷಣ ಮಾಡಿಕೊಂಡು ತಿದ್ದಿಕೊಳ್ಳಬೇಕು. ಕ್ಯಾಬಿನೆಟ್ ಮೀಟಿಂಗ್ ಈ ಕುಸ್ತಿಗೆ ಮೀಸಲಾದರೂ ಹರವಾಗಿಲ್ಲ-ಈ ಬಗ್ಗೆ ಗಮನ ಕೊಡದಿದ್ದರೆ ದುರಂತ ಎದುರಿಸಲಿದ್ದಾರೆ.



ನೆಲ ತಾಗಿದೊಡನೆ......

ಸೆಪ್ಟೆಂಬರ್‌ನಲ್ಲಿ ಮೊದಲ ಸಲ ಕಣ್ಣಿನ ಆಪರೇಷನ್ ಮಾಡಿಸಿದಾಗ ನಮ್ಮ ವೈದ್ಯರಾದ ಎಲ್. ಗೋಪಾಲ್, 'ವಿಮಾನದಲ್ಲಿ ಪ್ರಯಾಣ ಮಾಡಬಾರದು, ದೈಹಿಕಶ್ರಮ ಒಳ್ಳೆಯದಲ್ಲ, ತೀರಾ ಅಗತ್ಯವಾದಾಗ ಮಾತ್ರ **pain killer** ಮಾತ್ರೆ ತೆಗೆದುಕೊಳ್ಳಿ' ಎಂದೆಲ್ಲ ಹೇಳಿದ್ದರು. ಮೊದಲನೆಯದು ಆರು ಗಂಟೆಯ ಶಸ್ತ್ರಚಿಕಿತ್ಸೆ. ನನಗೆ **detached retina,** ಶಸ್ತ್ರಚಿಕಿತ್ಸೆ ಮುಂತಾದವು ಗೊತ್ತೇ ಇರಲಿಲ್ಲ. ಆ ಗಂಭೀರ ಶಸ್ತ್ರಚಿಕಿತ್ಸೆಯ ವೇಳೆಯಲ್ಲಿ ವಿಮಾನ ಪ್ರಯಾಣ ಮಾಡಕೂಡದು. ಯಾಕೆಂದರೆ ಹೆಚ್ಚುಕಮ್ಮಿಯಾಗುವ ಗಾಳಿಯ ಒತ್ತಡ ಕಣ್ಣನ್ನು ಕಿತ್ತುಹಾಕಬಲ್ಲದು. ಆದರೆ ಆಮೇಲೆ ಆದ ಚಿಕಿತ್ಸೆಯ ನಂತರ ವಿಮಾನದಲ್ಲಿ ಹೋಗಬಹುದು ಎಂದು ಹೇಳಿದರು. ಅಷ್ಟರಲ್ಲಿ ಅದು ಗೊತ್ತಿಲ್ಲದೆ ನಾಲ್ಕಾರು ಸಲ ಕಣ್ಣಿನ ನೋವಿನಲ್ಲಿಯೇ ರೈಲು, ಕಾರಿನಲ್ಲಿ ಬೆಂಗಳೂರಿನಿಂದ ಮದ್ರಾಸಿಗೆ ಓಡಾಡಿದ್ದೆ!



ಈಗ ಯಾಕೆ ಹೇಳುತ್ತಿದ್ದೇನೆಂದರೆ, ತಿಂಗಳ ಹಿಂದೆ ಇಂಡಿಯನ್ ಏರ್‌ಲೈನ್ಸ್‌ನವರು ಮುಷ್ಕರ ಹೂಡಿದ್ದಾಗ ಅನೇಕ ಪೈಲಟ್‌ಗಳ ಬಗ್ಗೆ ನನಗೆ ಅನುಮಾನವಿತ್ತು. ಬಸ್ಸಿನ ಡ್ರೈವರ್ ಕೆಲಸಕ್ಕೆ ಬಾರದೆ ಇದ್ದಾಗ ಕಂಡಕ್ಟರ್ ಬಸ್ಸನ್ನು ನಡೆಸುತ್ತಿರಬಹುದು ಎಂಬಂಥ ಅನುಮಾನ.... ಆದಕ್ಕೆ ಸರಿಯಾಗಿ ವಿಮಾನ ಏರುವಾಗ ಮತ್ತು ನೆಲ ಮುಟ್ಟುವಾಗ ಗದ್ದಲ, ಆಘಾತ ಆಗುತ್ತಿದ್ದವು. ನಿಮಗೆ ಇದೆಲ್ಲ ಗೊತ್ತಿದೆಯೋ ಇಲ್ಲವೋ; ನನಗನ್ನಿಸುವಂತೆ ವಿಮಾನ ಪ್ರಯಾಣವೇ ವಿಚಿತ್ರ, ಮನುಷ್ಯನ ಪಾಲಿಗೆ ಅಸಹಜ. ಮನುಷ್ಯ ಹುಟ್ಟಿರುವುದೇ ಕಾಲಿನಿಂದ ನಡೆಯಲು; ಆದರೆ ಆತ ಗಾಲಿ, ಗಾಡಿ ಎಲ್ಲ ಕಂಡುಹಿಡಿದು ಆಕಾಶದಲ್ಲಿ ಹಾರಾಡುತ್ತಿದ್ದಾನೆ. ಸಾವಿರಾರು ಅಡಿ ಎತ್ತರದಲ್ಲಿ ಮೋಡಗಳ ಆಚೆ ವಿಮಾನ ಹೋಗುವಾಗ ಎಲ್ಲ ನೈಸರ್ಗಿಕ, ಅಪಾಯವಿಲ್ಲ ಎಂಬಂತೆ ಪ್ರಯಾಣಿಕರು ಇದ್ದರೂ ಒಳಗೆ ಎಲ್ಲೋ ಭಯ ಇದ್ದೇ ಇರುತ್ತದೆ. ವಿಮಾನಕ್ಕೆ ಹಕ್ಕಿ ಹೊಡೆದರೆ, ಒಂಚೂರು ಮುಗ್ಗರಿಸಿದರೆ, ಎದುರಿಂದ ಬಂದ ವಿಮಾನ ಕುಕ್ಕಿದರೆ, ಪೈಲಟ್ ತಲೆ ಕೆಟ್ಟು ಬೇರೆ ಸ್ವಿಚ್ ಒತ್ತಿದರೆ....

ಮೊನ್ನೆ ಅದಕ್ಕೆ ಸರಿಯಾಗಿ ನನ್ನನ್ನು ಮದ್ರಾಸ್‌ಗೆ ಕರೆದೊಯ್ದಿದ್ದ ನನ್ನ ಮಗಳು ವಿಮಾನ ನೆಲವನ್ನು ಮುಟ್ಟಿದೊಡನೆ ಒಂದು ಸುದ್ದಿ ಹೇಳಿದಳು. ನಾವೆಲ್ಲ ಭಯ ಅದಗಿಸಿಕೊಂಡಿರುತ್ತೇವೆ. ಈಜಿಪ್ಟ್‌ನಲ್ಲಿ ಹಾಗಿಲ್ಲವಂತೆ. ವಿಮಾನ ಮೃದುವಾಗಿ ನೆಲಕ್ಕೆ ತಾಗಿದೊಡನೆ ವಿಮಾನದಲ್ಲಿರುವ ಎಲ್ಲರೂ ಚಪ್ಪಾಳೆ ಹೊಡೆಯತೊಡಗುತ್ತಾರಂತೆ. ಆಕಾಶದಿಂದ ಇಳಿದದ್ದಕ್ಕೆ, ಅಸಹಜ ಚಟುವಟಿಕೆ ನಿಲ್ಲಿಸಿ ನೆಲ ತಾಗಿದ್ದಕ್ಕೆ, ಬದುಕಿ ಬಂದದ್ದಕ್ಕೆ, ಅಲ್ಲಾಗೆ ಕೃತಜ್ಞತೆ.......

-ಫೆಬ್ರವರಿ 1, 1995

ಅವರಿಗೆ 'V' ಬಂದಾಗದಂತೆ!

ಕೆಲವು ವರ್ಷಗಳ ಹಿಂದೆ ರಾಜ್ಯಸಭೆ ಚುನಾವಣೆಗಳು ಬಂತು ಅಂದರೆ ಶಾಸಕರಿಗೆ ಸೊಗಸಾದ ಕಬ್ಬಿನ ಫಸಲು ಕೈಗೆ ಬಂದಂಗೆ. ಒಬ್ಬೊಬ್ಬ ಶಾಸಕ ಮಹಾಶಯರೂ ತಮ್ಮ ಶಕ್ತ್ಯಾನುಸಾರ ಗಿಬರಿಕೊಳ್ಳುತ್ತಿದ್ದರು. ಆಮೇಲೆ ಆಮೇಲೆ ಶ್ರೀಮಂತ ಅಭ್ಯರ್ಥಿಗಳಿಗೆ ಇದೇನು ಗ್ರಹಚಾರ ಇವರ ಮನೆ ಬಾಗಿಲು ಕಾಯಬೇಕಲ್ಲ ಅನ್ನಿಸಿರಬೇಕು. ಶಾರ್ಟ್ ಕಟ್ ಹುಡುಕಿದರು. ವರಿಷ್ಠರನ್ನೇ ಹಿಡಿಯೋಕೆ ಶುರು ಮಾಡಿದರು. ವರಿಷ್ಠರೂ ಸಂತೋಷದಿಂದಲೇ ಇಂತಹ ಪ್ರಸ್ತಾವನೆಗೆ ಸ್ಪಂದಿಸಿರಬೇಕು. ವಿಪ್ ಅನ್ನೋದು ಒಂದು ಇತ್ತಲ್ಲ, ಅದನ್ನು ಯಶಸ್ವಿಯಾಗಿ ಬಳಸಿಕೊಂಡರು. ಪಾಪ ಶಾಸಕರಿಗೆ ಬರೋ ಹಣಾನೂ ಬರದಂಗೆ ಆಯ್ತು. ಇದು ಒಳ್ಳೆ ಬೆಳವಣಿಗೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದಂಗಾಯ್ತು ಅನ್ನುವ ಹಾಗಿಲ್ಲ, ಚಿಲ್ಲರೆಯಾಗಿ ಹಂಚ್ತಿದ್ದ ಹಣದ ಇಡೀ ಗಂಟಾಗಿ ವರಿಷ್ಠರಿಗೆ ತಲುಪುತ್ತಿತ್ತು ಅಷ್ಟೇ. ವಿಕೇಂದ್ರೀಕರಣ ಆಗಿದ್ದ ಭ್ರಷ್ಟಾಚಾರ ಕೇಂದ್ರೀಕೃತ ಆಯಿತು!

ಇಂತಹ ಕೇಂದ್ರೀಕೃತ ಭ್ರಷ್ಟ ವ್ಯವಸ್ಥೆ ಅಸ್ತಿತ್ವದಲ್ಲಿರುವಾಗ ಕಾಂಗ್ರೆಸ್-ಜೆಡಿಎಸ್‌ಗೆ ಸ್ವಾಭಿಮಾನ ಅನ್ನೋದು ಎದ್ದೆದ್ದು ಕುಣೀತು. ಈ ಸ್ವಾಭಿಮಾನ ಅನ್ನೋದು ಕುಂಭಕರ್ಣ ಜಾತಿಯದ್ದಿರಬೇಕು. ಯಾವಾಗಲೋ ಏಳುತ್ತೆ ಮತ್ತೆ ನಿದ್ದೆಗೆ ಹೋಗುತ್ತೆ. ಈಗ ಅದು ಎಚ್ಚರಗೊಂಡಿತ್ತು, ಯಾಕೆಂದರೆ ಸೋಲು ಕಟ್ಟಿಟ್ಟ ಬುತ್ತಿಯಾಗಿತ್ತು. ಗೆಲ್ಲುವ ಅವಕಾಶ ಲವಲೇಶವಾದರೂ ಇದ್ದಿದ್ದರೆ 'ಸ್ವಾಭಿಮಾನ' ಅನ್ನೋದು ಯಾವುದೋ ಮೂಲೆಯಲ್ಲಿ ಮುದುರಿಕೊಂಡು ಬಿದ್ದಿರ್ತಿತ್ತು. ಎಚ್ಚರಗೊಂಡ ಸ್ವಾಭಿಮಾನ ತಾನೆ ಅದು ಸಾಹಿತಿಗಳ ಕಡೆಗೆ ದೃಷ್ಟಿ ಹರಿಸಿತು. ಮಲಗಿದ್ದ ಸ್ವಾಭಿಮಾನ ಆಗಿದ್ದರೆ..... ಅದರ ಕತೇನೇ ಬೇರೆ ಇರುತ್ತಿತ್ತು. ಇದು ಕನಸಿನ ಕನ್ಯೆ V/s ಗಡ್ಡದ ಸ್ವಾಭಿಮಾನದ ಹಿಂದಿನ ಕತೆ.

ಹೇಮಾಮಾಲಿನಿಯವರ ನುಣುಪಾದ ಕೆನ್ನೆ ಹಲವರಿಗೆ ಸ್ಫೂರ್ತಿ ನೀಡಿದೆ. ಲಲ್ಲೂಪ್ರಸಾದ್ ಯಾದವ್ ಆ ಕೆನ್ನೆಗಳಿಗೆ ಮಾರುಹೋಗಿ ಬಿಹಾರದ ರಸ್ತೆಗಳನ್ನು ಹೇಮಾಮಾಲಿನಿ ಕೆನ್ನೆಯಂತೆ ಮಾಡುತ್ತೇನೆ ಅಂದಿದ್ದರು. ಅಸಂಖ್ಯಾತ ಮಕ್ಕಳ ತಂದೆಯನ್ನೇ ಮರುಳುಗೊಳಿಸಿದ ಕೆನ್ನೆಗಳ ಕನಸಿನ ಕನ್ಯೆಗೆ ಬದಲಾಗಿ ಗಡ್ಡದ ಭೈರಾಗಿಯಂತಹ ಮರುಳನಿಗೆ ಮತ ನೀಡಲು ಯಾರಿಗೆ ತಾನೇ ಮನಸ್ಸು ಬಂದೀತು? ನಿರೀಕ್ಷಿತ ಫಲಿತಾಂಶವೂ ಬಂದಿತು.

ಬೊಂಬಾಯಿ ಹುಡುಗಿ ಬೆಂಗ್ಳೂರಿಗೆ ಬಂತು
ಬಂದು ಏನ್ಮಾಡಿತು?
ರಾಜ್ಯಸಭೆ ಸದಸ್ಯೆ ಆಯ್ತು
ಆಮೇಲೆ ಏನ್ಮಾಡಿತು?
ಫುರ್ ಅಂತ ಹಾರೋಯ್ತು

ಹೋಗೋಕ್ಮುಂಚೆ.... ನಾನು ಕಲಾವಿದೆ. ದೇಶದ ಆಸ್ತಿ, ಬೇರೆಡೆಗಳಲ್ಲಿ ನನ್ನನ್ನು ತಮ್ಮವರೆ ಎಂದು ನೋಡ್ತಾರೆ. ಕರ್ನಾಟಕದಲ್ಲಿ ಮಾತ್ರ ಒಳಗಿನವರು-ಹೊರಗಿನವರು ಅಂತ ಭೇದಭಾವ ಮಾಡ್ತಿರೋದು ತಮಾಷೆಯಾಗಿದೆ. ಇಂತಹ ಆಲೋಚನೆಯೇ ಹಾಸ್ಯಾಸ್ಪದ ಎಂದು ಹೇಳುವುದರೊಂದಿಗೆ ಶಾಲಲಿ ಮುಚ್ಚಿಕೊಂಡು ಹೊಡೆದದ್ದು ಬಲೇ ನೊಚ್ಚಗಾಗಿರಬೇಕು. ಎಷ್ಟೇ ಆಗಲಿ ನುಣುಪಾದ ಕೆನ್ನೆಗಳ ನಡುವಿನಿಂದ ಹೊರಬಂದದ್ದು ಅಲ್ವೇ ಅವು!

ಇಡೀ ಪ್ರಕರಣದಲ್ಲಿ ನನಗೊಂದು ಸಂಶಯ ಪ್ರಾರಂಭ ಆಯಿತು. ಭಾಜಪ ನಾಯಕಮಣಿಗಳಾದ ಕರ್ನಾಟಕ ದಮನಕರುಗಳಿಗೆ ಇದ್ದಕ್ಕಿದ್ದಂತೆ `V' ಬಂದ್ ಆಗಿದೆಯಾ ಹೇಗೆ ಅಂತ. ಯಾಕೆ ಅಂದರೆ....

ಈ ಹಾಳು ನಾಗರಿಕತೆ ಅನ್ನೋದು ಯದ್ವಾತದ್ವಾ



ಹೆಚ್ಚಾಗಿ ಕೆಲವು ಸಾಮಾನ್ಯ ಪದಗಳಿಗೂ ಅಪಾರ್ಥ ಬಂದಿದೆ. ಎರಡ ಮಾಡ್ತೀನಿ, ಒಂದ ಮಾಡ್ತೀನಿ ಅನ್ನುವುದೇ ಅಸಹ್ಯ ಅಂತ ಮೂಗುಮುರಿಯುವ ಕಾಲ ಬಂದಿದೆ. ಚಿಕ್ಕಮಕ್ಕಳ ತನಕ ಸಾರ್ವಜನಿಕ ಸ್ಥಳಗಳಲ್ಲಿ ಇದನ್ನು ಬಳಸಲೇಬಾರದಂತೆ. ಅದಕ್ಕೆ ಅವು ಅವಸರ ಆದಾಗ ಯಾವುದಕ್ಕೆ ಅವಸರ ಆಗಿದೆ ಎನ್ನುವುದನ್ನು ಕೈಬೆರಳುಗಳ ಮೂಲಕ ಸೂಚಿಸಬೇಕಂತೆ. ಅಲ್ಲಾ ಕೈಬೆರಳೇ ಇಲ್ಲದೋರು ಏನು ಮಾಡ್ತಾರೆ ಅಂತ.....

ಯಡ್ಯೂರಪ್ಪನವರಂತೂ ಸಮಯ ಸಂದರ್ಭ ನೋಡದೆ `V' ಮಾಡುವವರು. ಅಂದ್ರೆ ಸಿಕ್ಕಸಿಕ್ಕಿದ ಕಡೆ ಎಲ್ಲ ಪ್ಯಾಂಟು ಬಿಚ್ತಾರೆ ಅಂತಲ್ಲ, ವಿಜಯದ ಸಂಕೇತವಾಗಿ ಈ ರೀತಿ ಬೆರಳು ಮಾಡಿ ಕೈ ಅಲ್ಲಾಡಿಸುವುದು ಬಲೇ ಜನಪ್ರಿಯ ಆಗಿದೆ. ಇತ್ತೀಚೆಗೆ ಟೀಮ್ ಇಂಡಿಯಾ-ಇಂಗ್ಲೆಂಡ್ ನಡುವೆ ಕ್ರಿಕೆಟ್ ಪಂದ್ಯ ನಡೀತಲ್ಲ, ಅದಕ್ಕೆ ಮುಖ್ಯಮಂತ್ರಿಗಳೂ ಹೋಗಿದ್ದರು. ಬಹುಮಾನ ವಿತರಣೆ ಸಮಯ. ಅಪ್ಪನವರೂ ಅಂಗಳಕ್ಕೆ ಹೋದರು. ಹೋಗಿದ್ದ ತಕ್ಷಣ ಮಾಡಿದ ಮೊದಲ ಕೆಲಸ ಅಂದ್ರೆ `V' ಮಾಡಿ ಕೈ ಅಲ್ಲಾಡಿಸಿದ್ದು! ಆದರೆ ಅವತ್ತು ಇಂಡಿಯಾ ಜಯಭೇರಿ ಬಾರಿಸಿರಲಿಲ್ಲ, ಪಂದ್ಯ ಟೈ ಆಗಿತ್ತು! ಹಾಗಿದ್ದೂ ಹಾಗೆ ಮಾಡಿದರು. ಪಾಪ ಅಪ್ಪನವರಿಗೆ ಅಭ್ಯಾಸಬಲ!

ಇನ್ನು ಹೇಮಾಮಾಲಿನಿ ನಾಮಪತ್ರ ಸಲ್ಲಿಸುವ ದಿವಸ. ಯಮದೂತರಂತೆ ಕನಸಿನ ಕನ್ಯೆಯ ಆ ಕಡೆ ಒಬ್ಬ ಈ ಕಡೆ ಒಬ್ಬ ಕುಳಿತಿದ್ದರಲ್ಲಾ ಯಡ್ಯೂರಪ್ಪ ಈಶ್ವರಪ್ಪನವರು. ಅವರೇನು ಮಾಡಿದರು ಅಂದ್ರೆ..... ನಾಮಪತ್ರ ಸಲ್ಲಿಸಿದ ತಕ್ಷಣ ಈಶ್ವರಪ್ಪನವರಿಗೆ ಅವಸರ ಆಯಿತು. ಅದೇ `V' ಮಾಡಿದರು. ಅಲ್ಲ ನಾಮಪತ್ರ ಸಲ್ಲಿಸುವುದೇ ವಿಜಯದ ಸಂಕೇತಾನೊ ಅಥವಾ ಅವರಿಗೆ ನಿಜವಾಗಿಯೂ ಅವಸರವೇ ಆಗಿತ್ತೊ ಎಂದು ಬೇಸರ ಪಡುವವರಿದ್ದರೆ ಇರಲಿ. ಆದರೆ ಅವಸರದ ಯಡ್ಯೂರಪ್ಪನವರೇನು ಮಾಡುತ್ತಿದ್ದರು? ಅವರಿಗೆ ಅವಸರವೇ ಆಗಲಿಲ್ಲವೆ ಅಂದರೆ ಯಡ್ಯೂರಪ್ಪನವರ ಬಲಗೈ ಎಂಗೇಜ್ ಆಗಿತ್ತು, ಅದೇನಾಗಿತ್ತು ಅಂದ್ರೆ ಹೇಮಮಾಲಿನಿ ಬಲಗೈ ಬಲವಾಗಿ ಹಿಡಿದುಕೊಂಡಿತ್ತು, ಅದನ್ನು ಬಿಡಲಾರದ ಸಂಕಟಕ್ಕೆ ಅವಸರ ಪ್ರಕೃತಿ ಮಾಯ ಆಗಿತ್ತು!

ನಾಮಪತ್ರ ಸಲ್ಲಿಸುವಾಗಲೇ `V' ಮಾಡುತ್ತಿದ್ದವರು ಕನಸಿನ ಕನ್ಯೆ ಜಯಭೇರಿ ಬಾರಿಸಿದಾಗ ಇದನ್ನು ಮಾಡಿದ್ದು ಎಲ್ಲೂ ಕಂಡುಬರಲಿಲ್ಲ, ಇವರಿಬ್ಬರಿಗೂ ಏನಾದರೂ `V' ಒಂದೇ ಆಗಿದೆಯಾ ಏನು ಕತೆ....

ದೇವರಿಗೇ ಮಾಟ!

ಕೆನ್ನಾಳು ಮಂಚಮ್ಮ ಅಂದ್ರೆ ಅಂತಿಂಥ ದೇವರಲ್ಲ. ಅವಳು ಕಣ್ಣು ಮೆಡ್ಡರಿಸಿದರೆ ಮುಗೀತು. ಮನೇನ ಮುರ್ಕತಾಳೆ. ನೇಮ ತಪ್ಪದೆ ಮಾಡಿದ್ರೆ ಒಲೀತಾಳೆ. ಕೇಳಿದ್ದ ಕೊಡ್ತಾಳೆ. ಹಿಂಗೆ ಒಳ್ಳೆದ್ಕೆ ಕೆಟ್ಟದ್ಕೆ ಎಲ್ಲಾವುದ್ಕೂ ಸುತ್ತಲಳ್ಳಿ ಜನ ನಡ್ಕೊತಿದ್ರಲ್ಲ ಅದೆ ಶಿಷ್ಟ ದೇವತೆಗಳು ನೋಡಿದ್ರು. ಎಲಾಎಲಾ ಈ ಯಾವುದೋ ಹಳ್ಳಿಮುಕ್ಕನೇ ಹಿಂಗೆ ಹಾರಾಡ್ತವ್ನಲ್ಲ ಅಂತ ಕೆಂಡ ಆದ್ರು. ಏನಾದರೇನು. ಅವಳು ಹೇಳಿಕೇಳಿ ಶಕ್ತಿದೇವತೆ. ನಾಲ್ಕು ಕಾಲು, ಎರಡು ಕಾಲು ಬಲಿ ತಗೋಳೋಳು. ಅವಳ ಮುಂದೆ ಪುಳಚಾರು ದೇವರ ಆಟ ಏನು ನಡೆದೀತು. ಅವಳ ಹಾವಳಿ, ಕೇಕೆ ನೋಡ್ತಾ ತೆಪ್ಪನೆ ಬಿದ್ದಿದ್ರೊ. ಹಿಂಗೆ ಬಿದ್ದಿದ್ರೂ ತಲೆ ಕೆಲ್ಸ ಮಾಡ್ತಾನೆ ಇತ್ತು, ಏಷ್ಟೇ ಆಗಲಿ-ಪುಳಚಾರು ತಿಂದ ತಲೆ ಅಲ್ವಾ. ಈ ಮುಂಡೇಗೆ ಮಾಟ ಮಾಡಿಬುಡಾನ ಅನ್ನೊ ಪಿಲಾನು ಹಾಕ್ಕೊ. ಮಲೆಯಾಳ ಮಂತ್ರವಾದಿ ಹಿಡ್ಕೊಂಡೊ ಮಾಟ ಮಾಡಿಸೇಬುಟ್ರೊ.

ಶುಕ್ರವಾರ ಅಂದ್ರೆ ಮಂಚಮ್ಮನ ವಾರ. ಅವತ್ತು ನೀರುಗೀರು ಹಾಕ್ಕೊಂಡು ಮಡಿಯಾಗಿ ಅಮ್ಮನ ಪೂಜೆಗೆ ಬರೋರು ಬಂದ್ರು. ಅಲ್ಲಿ ನೋಡಿದ್ರೆ.... ಗುಡಿ ಮುಂದೆ ನಾಯಿ ಸತ್ತು ಬಿದ್ದದೆ. ಅದರ ಕಿವಿ, ಬಾಲ ಕುಯ್ದದೆ. ಅವ ತಗೊಂಡೋಗಿ 'ಎಡೆ' ಇಡ್ತೀವಲ್ಲ ಹಂಗೇಯ ತಾಯಿ ಗುಡಿ ಬಾಗಿಲ ಮುಂದೆ ಇಟ್ಟದೆ!



ಎಚ್.ಎಲ್. ಕೇಶವಮೂರ್ತಿ

ಅಣಕ

ಅದೇನು ಬಾರಿ ಊರಾ ಜನ ಸೇರೋದು ತಡ ಆಗಕ್ಕೆ ಆಹೂ ಅನ್ನೋ ಅಷ್ಟರಲ್ಲಿ ಊರಾದ ಊರೆಲ್ಲ ಸೇರ್‍ತು ತಲೆಗೊಂದು ಮಾತು ಆಡೋಕೆ ನಿಂತರು. ಎಲ್ಲೋ ಏನೋ ಕೇಡುಗಾಲ ಕಾದದೆ, ಅಲ್ಲಿದ್ರೆ ನಾಯಿ ಅಂದ್ರೇನಯ್ಯಾ ನಾರಾಯಣ. ಭೈರವನ ಅವತಾರ ಅದು. ಅದನ್ನೇ ಬಲಿಕೊಟ್ಟು ಎಡೆ ಹಾಕವ್ರೆ ಅಂದ್ರೆ ಉಳಿಗಾಲ ಇದ್ದಾತಾ ಅಂತೆಲ್ಲ ತರ್ಕಿಸಿದರು. ವಸಿ ಅಂಥಾ ಇಂಥ ಬುಕ್ಕುಗಳ ಓದ್ದೋನು ಏನೂ ಕೇಡುಗಾಲ ಬರುವಲ್ಲ ಕನಾ. ಇದು ಯಾರೋ ಹಕ್ಕಿಪಿಕ್ಕಿಯವರ ಕೆಲ್ಸ ಇದ್ದಂಗದೆ ಅವರು ಏನೋ ವಿದ್ಯೆ ವಶೀಕರಣ ಮಾಡ್ತಳಕೆ ಹಿಂಗೆ ಮಾಡವ್ರೆ. ನಾಯಿ ಹುಟ್ಟಾಗ ಕಿವಿ ಮುಂದಾಗಿ ಹುಟ್ತದೆ ಕೊನೇಲಿ ಬಾಲ ಬತ್ತದೆ. ಅದ್ಕೆ ಅವೆರಡ್ನೂ ಕೂದು ಎಡೆ ಮಾಡವ್ರೆ ಅಂತ ತನಗೆ ತಿಳಿದದ್ದು ಹೇಳ್ದ. ಜನರಿಗೆ ಇನ್ನೊಂದು ಫಿಕೀರು ಶುರು ಆಯ್ತು. ವಶೀಕರಣ ವಿದ್ಯೆ ಕಲಿತಿರೋ ಹಕ್ಕಿಪಿಕ್ಕರೋನು ಮನೆತಾವ ಯಾವ ರೂಪದಲ್ಲಿ ಯಾವ ಮಾಯದಲ್ಲಿ ಬತ್ತಾನೋ ಅನ್ನೋ ಭಯದಿಂದ ಹೆದರಿ ನಡುಗಿಹೋಯ್ತು. ಇದೆಲ್ಲ ಕಂಡ ಹಿರೀಕ 'ಲೇ ಸುಮ್ನೆ ಇರ್‍ರ್‍ಲ, ತಲೆಗೊಂದು ಮಾತ ಆಡದ ಬುದ್ಧಿ ಯಾವುದ್ಕೂ ಶಾಸ್ತ್ರ ಕೇಳಾನು' ಅಂದ. ಆ ಶಾಸ್ತ್ರದಲ್ಲೇನು ಬತ್ತು ಅಂದ್ರೆ ಮೊದಲೇಳಿದ್ನೆಲ್ಲ ಅದೆಲ್ಲ ಬತ್ತು. ಶಾಸ್ತ್ರದಲ್ಲಿ ಬಂದ ದೋಷಗಳಿಗೆ ಪರಿಹಾರ ಇದ್ದೇ ಇರ್ತದೆ ಅಲ್ವ ಅದ್ಕೂ ಪರಿಹಾರ ಹೇಳಿದ್ರು.

ಅಂತೂ ಮಂಚಮ್ಮನ ತಡೆ ಒಡೆಸಿ, ಊರಿಗೆಲ್ಲ ಪರ ಮಾಡಿದ್ರಂತೆ. ಮನೆಗೊಂದು ಸಾವಿರ ಖರ್ಚು ಬತ್ತಂತೆ. ಆದರೂ ಶಾಸ್ತ್ರದೋನು ಬಹಳ ಅದ್ದೂರಿಯಾಗಿ ತಾಯಿಗೆ ಒದಗಿದ ಕಂಟಕಾನ ನಿವಾರಣೆ ಮಾಡಿದ ಅನ್ನೋದೆ ತೃಪ್ತಿ!

ಲಂಕೇಶ್ ಪತ್ರಿಕೆ ಇರುವುದು ಭ್ರಷ್ಟರನ್ನು ಮಟ್ಟ ಹಾಕುವ ತನಕ



ರೈಲ್ವೆ ಬಜೆಟ್ ಬಿಡುಗಡೆಯಾಯಿತು ಹೌದು! ಆದರೆ ರೈಲ್ವೆಯಲ್ಲಿನ ಪ್ರಯಾಣಿಕರ ಸುರಕ್ಷತೆಯ ಬಜೆಟ್ ಬಿಡುಗಡೆಯಾಯಿತೆ? 'ಇಲ್ಲ'. ಎಷ್ಟು ಜನ ಪ್ರಯಾಣಿಕರು ತಮ್ಮಿಂದ ನಷ್ಟ ಹೊಂದುತ್ತಿದ್ದಾರೆ. ಎಷ್ಟು ವಸ್ತುಗಳು ಕಳವಾಗುತ್ತಿದೆ. ಸುರಕ್ಷಿತವಾಗಿ ಒಂದು ಮಹಿಳೆಗೂ ಪ್ರಯಾಣಿಸಲಾಗುತ್ತಿಲ್ಲ. ಕಳೆದ ಫೆಬ್ರವರಿ ತಿಂಗಳಲ್ಲಿ ಕೇರಳದ ಎರಣಾಕುಳಂ ಜಿಲ್ಲೆಯಲ್ಲಿ ನಡೆದ ಒಂದು ಘಟನೆ ರೈಲಿನಲ್ಲಿ ತನ್ನ ಮನೆಗೆ ತೆರಳುತ್ತಿದ್ದ ಒಬ್ಬಳು ಪ್ರಯಾಣಿಕೆಯ ಮೇಲೆ ಅತ್ಯಾಚಾರವೆಸಗಲ್ಪಟ್ಟಿತು. ಈ ಸುದ್ದಿ ರಾಜ್ಯಮಟ್ಟದಲ್ಲೇ ಸುದ್ದಿಯಾಗಿ ರಾಜ್ಯ ರೈಲ್ವೆ ಅಧಿಕಾರಿಗಳ ತಲೆ ಹುಣ್ಣಾಗುವಂತಾಯಿತು. ಇಷ್ಟಕ್ಕೂ ಆಕೆ ಪ್ರಯಾಣಿಸುತ್ತಿದ್ದದು ಮಹಿಳೆಯರ ಬೋಗಿಯಲ್ಲೇ. ಅನಗತ್ಯವಾಗಿ ರೈಲ್ವೆ ಪ್ಲಾಟ್‌ಫಾರಂನಲ್ಲಿ ತಿರುಗುತ್ತಿರುವವರು ಇಂತಹ ನೀಚ ಕಾರ್ಯ ಎಸಗಿದ್ದಾರೆ. ಇಂತಹ ಧುರೀಣ ಸ್ಥಿತಿಯನ್ನು ರೈಲ್ವೆ ಅಧಿಕಾರಿಗಳು ಮುಕ್ತವಾಗುವಂತೆ ಪರಿಶ್ರಮ ವಹಿಸಬೇಕು.

-ಅಶೀರುದ್ದೀನ್, ಮಂಜನಾಡಿ

ಬಹುಶಃ ಲಂಕೇಶ್‌ರವರು ಇದ್ದಾಗಿನ ದಿನಗಳಿಗಿಂತ ಇವತ್ತಿನ ದಿವಸಗಳಲ್ಲೇ ಅವರ ಅವಶ್ಯಕತೆ ಹೆಚ್ಚಿತ್ತು ಅನಿಸುತ್ತಿದೆ. ಈ ಕಾರಣಕ್ಕಾಗಿ ಲಂಕೇಶ್ ಅಭಿಮಾನಿಗಳು ಪ್ರತಿ ವರ್ಷ ಆಚರಿಸಿಕೊಂಡು ಬರುತ್ತಿರುವ ಲಂಕೇಶ್ ನೆನಪಿನ ಕಾರ್ಯಕ್ರಮಕ್ಕೆ ಅವರದ್ದೇ ಆದ ಮಹತ್ವವಿದೆ.

ಜನರ ಹಾದಿ ತಪ್ಪಿಸುವಂತಹ ಶಕ್ತಿಗಳು ಅಟ್ಟಹಾಸದಿಂದ ಮೆರೆಯುತ್ತಿರುವ ಇವತ್ತಿನ ದಿನಗಳಲ್ಲಿ ನನ್ನಂಥವರಿಗೆ ಕಾಣುತ್ತಿರುವ ಒಂದೇ ಒಂದು ಆಶಾಕಿರಣವೆಂದರೆ ಅದು ಗೌರಿ ಲಂಕೇಶ್ ಬಳಗ ಮಾತ್ರ. ಈ ಮಾತನ್ನು ಯಾವುದೇ ಉತ್ಪ್ರೇಕ್ಷೆಗಳಿಲ್ಲದೆ ಹೇಳುತ್ತಿದ್ದೇನೆ. ಮೆಟ್ಟಿ ನಿಲ್ಲಲು ಕೆಲ ವ್ಯಕ್ತಿಗಳಾಗಲಿ, ಸಂಘಟನೆಗಳಾಗಲೀ ಇದ್ದಿದ್ದರೆ, ಇವತ್ತು ಬಹುತೇಕ ಮಂದಿ ವ್ಯವಸ್ಥೆಯೊಂದಿಗೆ ರಾಜಿಯಾಗಿ ತಮ್ಮ ಹಾಗು ತಮ್ಮವರು ನಂಬಿರುವ ಸಿದ್ಧಾಂತಗಳಿಗೆ ಎಳ್ಳು ನೀರು ಬಿಟ್ಟು, ಬಾಲ ಅಲ್ಲಾಡಿಸುವ ತಾಲೀಮಿಗೆ ಶುರುವಿಟ್ಟುಕೊಂಡ ಉದಾಹರಣೆಗಳು ನಮ್ಮ ಮುಂದಿವೆ. ಅಂಥಾದ್ದರಲ್ಲಿ ಲಂಕೇಶ್‌ರಂತಹ ಹೆಬ್ಬುಲಿಗೆ ತಕ್ಕಂತ ಮಗಳಾಗಿ ಕಾಣುತ್ತಿರುವುದು ಈ ಗೌರಮ್ಮ ಮಾತ್ರವೇ ಎಂಬುದನ್ನು ಪ್ರೀತಿಯಿಂದಲೇ ಹೇಳುತ್ತಿದ್ದೇನೆ.

ನಿಮ್ಮ ಲಂಕೇಶ್ -76 ಕಾರ್ಯಕ್ರಮ ಯಶಸ್ವಿಯಾಗಿ ಜರುಗಲೆಂದು ಹಾರೈಸುತ್ತೇನೆ.

-ರವಿ ಪುತ್ತೂರ, ದಕ್ಷಿಣ ಕನ್ನಡ

ತುಂಬಿದ ಹೂ ಸವಿಯುವ ಆಸೆ
ನಮಗೆ ಲಂಕೇಶ್ ಪತ್ರಿಕೆ ಓದುವ ಆಸೆ
ಊಟ ಮಾಡಿದ್ದು ಇರುವುದು ಹಸಿವು ಆಗುವ ತನಕ
ಲಂಕೇಶ್ ಪತ್ರಿಕೆ ಇರುವುದು ಭ್ರಷ್ಟರನ್ನು ಮಟ್ಟ ಹಾಕುವ ತನಕ

ಒಳ್ಳೆಯವರಿಗೆ ಬೆಲೆ ಸಿಗುವುದು ಸತ್ತ ತಿಳಿದ ಮೇಲೆ
ಭ್ರಷ್ಟರ ಬಣ್ಣ ಬಯಲಾಗುವುದು ಗೌರಿ ಲಂಕೇಶ್ ಪತ್ರಿಕೆ ಮೇಲೆ
ಕಾಡಿದೆ ಹೂ ಮರಗಳು ವನ್ಯಜೀವಿಗಳು ಚೆನ್ನ
ನಾಡಿಗೆ ಗೌರಿ ಲಂಕೇಶ್ ಪತ್ರಿಕೆ ಚೆನ್ನ
ಪಿ. ಲಂಕೇಶ್ ಪತ್ರಿಕೆ 76 ನೇ ಹುಟ್ಟು ಹಬ್ಬದ ಶುಭಾಶಯಗಳು
ಹಾಗು ಶಿವರಾತ್ರಿ ಹಬ್ಬದ ಶುಭಾಶಯಗಳು

-ಬಸವರಾಜ ಮತ್ತು ಶಿವಕುಮಾರ ಬಿ ಪಾಟೀಲ್, ಕಲ್ಮನಿ

ಹೇಮಾಮಾಲಿನಿ ಬ್ರಾಹ್ಮಣಳು, ಹಲವು ಹತ್ತು ಕಸರತ್ತಿನ ವಿದ್ಯೆ ಗೊತ್ತಿದೆ ಎಂದು ಅಸೂಯೆಪಡುವುದೇತಕ್ಕೆ? ಏನು ಬ್ರಾಹ್ಮಣರು/ಯಾರೇ ಆಗಲಿ ಉನ್ನತಿಯ ಹಲವು ಹಾದಿ ಹಿಡಿಯುವುದರಲ್ಲಿ ತಪ್ಪೇನಿದೆ? ಇತ್ತೀಚೆಗೆ ಈ ಟ್ಯಾಬ್ಲಾಯ್ಡ್‌ಗಳಲ್ಲಿ ಅತ್ಯಂತ ಸಣ್ಣ ಮನಸ್ಸಿನ ಪತ್ರಿಕೋದ್ಯಮ ಕಂಡುಬರುತ್ತಿದೆ. ಎಲ್ಲಾ ಕಳ್ಳ ಹಾದಿಗಳಲ್ಲಿ ಅನೈತಿಕತೆಯಲ್ಲಿ, ದ್ವಂದ್ವ ನೀತಿಗಳಲ್ಲಿ ನಿಷ್ಣಾತರಾಗಿರುವ ಪತ್ರಕರ್ತರಿಗೆ ಯಾರೂ ಸೊಪ್ಪು ಹಾಕುತ್ತಿಲ್ಲವೆಂದು ಮನವರಿಕೆಯಾದಷ್ಟು ಡಬ್ಬಿ ಹೊಡೆಯುವುದು ನಿಲ್ಲುತ್ತಿಲ್ಲ. ಪತ್ರಕರ್ತರ ಪಾರದರ್ಶಕತೆ ಎಲ್ಲೂ ಕಂಡುಬರುತ್ತಿಲ್ಲ. ಅಸಲಿಗೆ, ಪತ್ರಕರ್ತರು ದೊಡ್ಡ ಕುರುಡರು, ಅಜ್ಞಾನಿಗಳು, ಬದಲಾದ ಸಮಾಜದ ಪರಿವೆ ಇಲ್ಲದ ಮೂರ್ಖರು. ದಲಿತರು, ಅಲ್ಪಸಂಖ್ಯಾತ ಎನ್ನುವವರು ಎಲ್ಲೆಡೆಯಿಂದ ಸವಲತ್ತುಗಳನ್ನು ಪಡೆಯುತ್ತಾ ಉದ್ಧಟರಾಗಿ ಪರಿವರ್ತಿತರಾಗಿದ್ದಾರೆ. ಸೋಮಾರಿಗಳಾಗಿದ್ದಾರೆ. ಎಲ್ಲಿ ಪುಕ್ಕಟೆ ಸಿಗಬಹುದೆಂದು ಹೊಂಚು ಹಾಕುತ್ತಾ ತಮ್ಮ ಬೇಳೆ ಬೇಯಿಸುತ್ತಾ, ಮಕ್ಕಳ ಮೂಲಕ ಕಳ್ಳತನ ಮಾಡಿಸುತ್ತಾ ದರೋಡೆ ಮಾಡಿಸುತ್ತಾ ಸ್ಲಂಗಳಲ್ಲಿ ಐಷಾರಾಮದ ಜೀವನ ನಡೆಸುತ್ತಿದ್ದಾರೆ. ಶೋಷಣೆಯ ದಿನಗಳು ಕಳೆದವು. ಬರೆಯಲು ಹಲವಿದೆ, ಸಮಯ ಸಾಲದು ಅಷ್ಟೆ.


-ವಸಂತ್, ಬಾಂಬೆ

ಮಾರ್ಚ್ 9 ರ ಸಂಚಿಕೆ ಲಂಕೇಶ್‌ನಲ್ಲಿ ಬಾಗಲಕೋಟೆಯ ಕಿಸಬಾಯಿದಾಸ ಕಾರಜೋಳನ ಕಳ್ಳ ಸಾಮ್ರಾಜ್ಯ ಎಂಬ ವಿ.ಪಿ. ಮೇಘರಾಜ್‌ರವರ ವರದಿ ನೋಡಿ ದಿಗ್ಭ್ರಮೆಗೊಂಡೆ. ಮುಧೋಳ ಮತಕ್ಷೇತ್ರದ ಶಾಸಕ (ಕಂ) ಸಣ್ಣ ನೀರಾವರಿ ಮಂತ್ರಿ ಗೋವಿಂದ ಕಾರಜೋಳನ ಹಲಾಲುಕೋರತನ ತೀರಾ ನಾಚಿಕೆ ಹುಟ್ಟಿಸುವಂತಿದೆ. ದಲಿತರ ಹೆಸರು ಹೇಳಿಕೊಂಡು ರಾಜಕೀಯವಾಗಿ ಯಶಸ್ಸು ಕಂಡಿರುವ ಹರಾಮಕೋರ ಕಾರಜೋಳ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಮಂತ್ರಿ ಆದಾಗಿನಿಂದಲೂ ಸರ್ಕಾರಿ ಅಧಿಕಾರಿಗಳ ಜೇಬು ಕತ್ತರಿಸಿ ರೊಕ್ಕ ನೆಕ್ಕುವ ಪರಿ ಎಂಥವರಿಗೂ ದಂಗುಬಡಿಸುತ್ತೆ. ನೂರಾರು ಎಕರೆ ಭೂಮಿ ಕಬಳಿಸಲು ಸಂಚು ನಡೆಸಿರುವ ಈ ಹಲಾಲುಟೋಪಿ ಕಾರಜೋಳ ತನ್ನ ಚೇಲಾಗಳನ್ನು ಬಿಟ್ಟು ಕಳ್ಳ ಸಾಮ್ರಾಜ್ಯ ನಡೆಸಿರುವುದು ಬಾಗಲಕೋಟೆಯ ವಿನಾಶಕ್ಕೆ ಇಂಥ ಒಬ್ಬ ರಣ ಹಸಿವಿನ ತಿನ್ನುಬಾಕನೆ ಸಾಕು. ದಮನಿತರ ಹೆಸರೇಳಿಕೊಂಡು ಯಡ್ಡಿ ಸರ್ಕಾರದಲ್ಲಿ ಅಧಿಕಾರ ಪಡೆದಿರುವ ನಾಲಾಯಕ್ ಕಾರಂಜೋಳನಿಗೆ ಮುಖ್ಯಮಂತ್ರಿ ಯಡ್ಡಿ ಸಂಪುಟದಿಂದ ಗೇಟ್‌ಪಾಸ್ ನೀಡಬೇಕಿದೆ.

-ರಮಜಾನ ಕೆ. ಕೊರ್ತಿ, ಬಾದಾಮಿ


ನಿಮಾದವರ ಕನ್ನಡ ಸೇವೆಯೂ ಾಲಿಯಾದ ಖಜಾನೆಯೂ

ತ್ತ ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಳನಕ್ಕೆ ಕ್ಷಣಗಣನೆ ಆರಂಭವಾಗಿದ್ದರೆ ಅತ್ತ ನಗರದಲ್ಲಿ ಸಿನಿಮಾ ಕಲಾವಿದರು ಮತ್ತು ತಂತ್ರಜ್ಞರು ಮ್ಮೇಳನದಲ್ಲಿ 'ಕನ್ನಡಮ್ಮನ ಸೇವೆ' ಮಾಡಲು ಾಲಲ್ಲಿ ನಿಂತಿದ್ದಾರೆ. ಈ ಯೇ ತಿಳಿಸಿದಂತೆ ಬಸಂತ್ ್ ಪಾಟೀಲ್, ಹಂಸಲೇಖ, ಭರಣ, ಅಶೋಕ್ ಮತ್ತು ಮಂತ್ರಿ ಚಂದ್ರು ನೇತೃತ್ವದಲ್ಲಿ ಗುಂಪುಗಳು ಸಾಕಷ್ಟು ಸಿದ್ಧತೆ ್ದಾವೆ.



ಹಂಸಲೇಖ

ಮಾದವರ ನಡುವೆ ರವಿಕಿರಣ್ ದಲ್ಲಿ ಕಿರುತೆರೆಯ ಕಲಾವಿದರೂ ಿಯಲ್ಲಿ ಒಂದು ಮನರಂಜನಾ ಕ್ರಮ ನೀಡಲು ಡೇ ಅಂಡ್ ರಿ-ಹರ್ಸಲ್ ಮಾಡುತ್ತಿದ್ದಾರೆ. ವಿಶ್ವಕಪ್‌ನಲ್ಲಿ ಇಂಗ್ಲೆಂಡ್‌ಅನ್ನು ಐರ್ಲೆಂಡ್ ತಂಡ ಡಿಸಿದ ರೀತಿಯಲ್ಲೇ ಈ ಕಿರುತೆರೆಯ ಕಲಾವಿದರು ಕಲಾವಿದರನ್ನು ಮೀರಿಸುವಂತಹ ಮನರಂಜನಾ ಕ್ರಮ ನೀಡುವ ಸಾಧ್ಯತೆಗಳಿವೆ.


ವಿಶ್ವ ಕನ್ನಡ ಸಮ್ಮೇಳನದಲ್ಲಿ ನಿಮಾದವರ ಮರ್ಯಾದೆಯನ್ನು ಯ ಕಲಾವಿದರು ಹರಾಜು ಉತ್ಸಾಹದಲ್ಲಿದ್ದಾರೆ.


ನಾಗಾಭರಣ

ರೇ ಸಮ್ಮೇಳನದಲ್ಲಿ ಬಾಲಸುಬ್ರಮಣ್ಯರವರ ರಸಮಂಜರಿ ಕ್ರಮವೂ ಫಿಕ್ಸ್ ಆಗಿದ್ದು ು ಸರ್ಕಾರ 11 ಲಕ್ಷ ನ್ನು ನೀಡಲು ನಿರ್ಧರಿಸಿತ್ತು. ೀ ಮುಂಬೈ ಗಾಯಕ ಖೇರ್ ತಂಡಕ್ಕೂ ಒಂದು ಕಾರ್ಯಕ್ರಮಕ್ಕೆ ಡಲು ಸರ್ಕಾರ 9 ಲಕ್ಷ ರೂ.ಗಳ ಸಂಭಾವನೆ ಒಪ್ಪಿತ್ತು. ಈ ಮಧ್ಯೆ ಕನ್ನಡದವರೇ ಆದ ವೈ.ಕೆ.ಮುದ್ದುಕೃಷ್ಣ, ಶಿವಮೊಗ್ಗ ಸುಬ್ಬಣ್ಣ ಾ ಪ್ರಕಾಶ್, ಅಜಯ್ ವಾರಿಯಾರ್, ಪಲ್ಲವಿ, ಿಕಾ, ಅರ್ಚನ ಉಡುಪ.... ಮೊದಲಾದ ಮತ್ತು ಹೊಸ ವಗಳು ಕೂಡಾ ವಿಶ್ವ ಕನ್ನಡ ನದಲ್ಲಿ ಹಾಡುವುದೆಂದು ಗಿತ್ತು, ಆದರೆ ಇವರಿಗೆಲ್ಲಾ ದಕ್ಕೆ ತಲಾ 15 ಸಾವಿರ ್ನು ಸಂಭಾವನೆ ದೆಂದು ತೀರ್ಮಾನವಾಗಿತ್ತು. ು ಗೊತ್ತಾಗಿದ್ದೇ ತಡ, ಈ ಗಾಯಕಿಯರೆಲ್ಲ ನ್ನು ತರಾಟೆಗೆ ಳ್ಳಲಾರಂಭಿಸಿದರು. ವಿಶ್ವ ಮ್ಮೇಳನದಲ್ಲಿ ಪರಭಾಷಾ ಗೆ ಲಕ್ಷಾಂತರ ರೂ. ಕೊಟ್ಟು ಕನ್ನಡದವರಾದ 15 ಸಾವಿರ ನೀಡಿ ಸರ್ಕಾರ ಕನ್ನಡಿಗರನ್ನು ಿಸುತ್ತಿದೆ ಎಂದು ಟಿವಿ ಚಾನೆಲ್‌ಗಳಲ್ಲಿ ದರು. ಇದರ ಫಲವಾಗಿ ಈಗ ಇವರ ಯನ್ನು ಕನಿಷ್ಠ 30 ಸಾವಿರದಿಂದ ಗರಿಷ್ಠ 1 ಗಳವರೆಗೆ ಏರಿಸಲಾಗಿದೆ. ಈ ಪರಿಷ್ಕೃತ ು ಪ್ರಕಾರ ಕಿಕ್ಕೇರಿ, ವೈಕೆ, ಸುಬ್ಬಣ್ಣ ಮತ್ತು ಾ ಮೊದಲಾದವರು ತಮ್ಮ ನದಲ್ಲೇ ದಲಬಾರಿಗೆ ಹಾಡೊಂದಕ್ಕೆ ಕ್ಷ ರೂ. ಸಂಭಾವನೆ ನ ಸೌಭಾಗ್ಯ ಪಡೆದಿದ್ದಾರೆ.


ಅಶೋಕ್

ಂದು ತಮಾಷೆಯನ್ನು ುನಕ್ಕೆ ತರಲೇಬೇಕು. ರೆ ಲಹರಿ ಸಂಸ್ಥೆಯ ಶ್ವ ಕನ್ನಡ ಸಮ್ಮೇಳನಕ್ಕಾಗಿ ಶೇಷವಾದ ಸಿಡಿಯನ್ನು ದ್ದಾರೆ. ಅದರಲ್ಲಿ ಕನ್ನಡದ ುಮಾರು 3000 ಇವೆ. ಈ ಸಿಡಿಯ ಬೆಲೆ 2999 ಮಾತ್ರ! ಅಂದರೆ ಒಂದು ಹಾಡಿಗೆ ಒಂದು ್ತೊಂತಾಗುತ್ತದೆ. ಅಂದಹಾಗೆ ಈ ಸಿಡಿಯಲಿ ಗಾಯಕರು ಈಗ ಒಂದು ಹಾಡಿಗೆ ಒಂದು ಲಕ್ಷ ತೆಗೆದುಕೊಳ್ಳುತ್ತಿದ್ದಾರೆ. ಇದು ವಿನೋದವಲ್ಲದೆ ಮತ್ತೇನು?


ಮುಖ್ಯಮಂತ್ರಿ ಚಂದ್ರು

ಈ ಸಮ್ಮೇಳನದಲ್ಲಿ ಸಿನಿಮಾದವರ 'ಕನ್ನಡ ಸೇವೆ'ಯ ಕಥೆಯಂತೂ ಇನ್ನೂ ರೋಚಕವಾಗಿದೆ. ಹಂಸಲೇಖ ನೇತೃತ್ವದ ಕಲಾವಿದರೆಲ್ಲ ಹಾಡು ಕುಣಿದು ಕುಪ್ಪಳಿಸುವ ಒಂದೂವರೆ ತಾಸಿನ ರಸಮಂಜರಿ ಕಾರ್ಯಕ್ರಮಕ್ಕೆ ತಯಾರಿ ನಡೆಸುತ್ತಿದ್ದಾರೆ. ಒಂದೇ ಒಂದು ಸಮಾಧಾನದ ಅಂಶವೆಂದರೆ ಹಂಸಲೇಖ ಅವರು ಯಾವುದೇ ಸಿನಿಮಾ ಹಾಡುಗಳನ್ನು ಈ ಕಾರ್ಯಕ್ರಮಕ್ಕೆ ಬಳಸುತ್ತಿಲ್ಲ! ಅದರ ಬದಲಿಗೆ ಕನ್ನಡ ನಾಡು-ನುಡಿ-ಸಂಸ್ಕೃತಿಯನ್ನು ಹಾಡಿ ಹೊಗಳುವ ಹೊಸ ಹಾಡುಗಳನ್ನು ಬರೆದಿದ್ದಾರೆ. ಈ ಹಾಡುಗಳನ್ನು ರಚಿಸಲು ಹಂಸ್‌ಗೆ ಸರ್ಕಾರ 35 ಲಕ್ಷ ರೂ.ಗಳನ್ನು ನೀಡಿದೆ.

ಈ ಮಧ್ಯೆ ಚೇಂಬರ್ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ಮತ್ತು ಉಪಾಧ್ಯಕ್ಷ ಸಾ.ರಾ.ಗೋವಿಂದು ನೇತೃತ್ವದಲ್ಲಿ ಸುಮಾರು ಮೂವತ್ತು ಬಸ್ಸುಗಳಲ್ಲಿ ಸಿನಿಮಾ ನಟನಟಿಯರು ಬೆಳಗಾವಿಗೆ ಹೊರಟಿದ್ದಾರೆ. ಗಾಂಧಿನಗರದಿಂದ ಬೆಳಗಾವಿಗೆ ಬಸ್ಸುಗಳ ಮೆರವಣಿಗೆ, ಸಮ್ಮೇಳನದ ಉದ್ಘಾಟನೆಯ ದಿನದಂದು ಬೆಳಗಾವಿ ನಗರದಲ್ಲಿ ತಾರೆಯರ ಮೆರವಣಿಗೆ ನಡೆಯಲಿದೆ. ಅಂದಹಾಗೆ ಈ 'ಸೇವಾ ಪ್ರಯಾಣಕ್ಕೆ' ಸರ್ಕಾರದಿಂದ ಚೇಂಬರ್ ಪಡೆದಿರುವುದು ಕೇವಲ 30 ಲಕ್ಷ ರೂಪಾಯಿಗಳ 'ಆಮಿಷ'ವನ್ನು!

ಇದೆಲ್ಲವನ್ನು ನೋಡಿದ ಮೇಲೆ ಇದು ಕಲಾವಿದರು ಮಾಡುತ್ತಿರುವ 'ಕನ್ನಡಮ್ಮನ ಸೇವೆ'ಯಲ್ಲ ಬದಲಾಗಿ ಸರ್ಕಾರ ನೀಡಿದ ಹಣಕ್ಕಾಗಿ ಮಾಡಿದ 'ಶೇವೆ' ಎಂದರೆ ತಪ್ಪಾ?

ಅಂದಹಾಗೆ, ಸಿನಿಮಾ ನಟನಟಿಯರು ಸಮ್ಮೇಳನದ ಉದ್ಘಾಟನೆಯಾದ ಮರುದಿನವೇ ಮತ್ತೆ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ. ಸಿನಿಮಾ ತಾರೆಯರು ಯಾವುದೇ ಕಾರಣಕ್ಕೂ ಉಳಿದೆರಡು ದಿನ ಬೆಳಗಾವಿಯಲ್ಲಿ ಇರಬಾರದೆಂದು ರಾಜಕಾರಣಿಗಳು ತಾಕೀತು ಮಾಡಿದ್ದಾರೆಂಬ ಸುದ್ದಿಯೂ ಇದೆ. ಯಾಕೆಂದರೆ ಸಿನಿಮಾದವರಿದ್ದರೆ ರಾಜಕಾರಣಿಗಳ ಬಳಿ ಒಂದು ನರಪಿಳ್ಳೆಯೂ ಸುಳಿಯುವುದಿಲ್ಲ!

ಆದರೆ ಮರುಪ್ರಯಾಣ ಸಂದರ್ಭದಲ್ಲಿ ಕೆಲವು ಮುಖ್ಯವಾದ ನಗರಗಳಲ್ಲಿ ಸಿನಿಮಾ ತಾರೆಯರು ಕಾರ್ಯಕ್ರಮ ನೀಡಬೇಕು ಎಂಬುದು ಕಾರ್ಮಿಕ ನಾಯಕ ಅಶೋಕರ ಒತ್ತಾಸೆ. ಆದ್ದರಿಂದ ಬೆಳಗಾವಿಯಿಂದ ಹಿಂತಿರುಗುವಾಗ ಹುಬ್ಬಳ್ಳಿ-ಚಿತ್ರದುರ್ಗ-ಹಾವೇರಿ-ದಾವಣಗೆರೆ-ರಾಣೇಬೆನ್ನೂರು-ತುಮಕೂರು ಮೊದಲಾದ ಕಡೆ ಸಿನಿಮಾ ತಾರೆಯರು ಮೊಕ್ಕಾಂ ಹೂಡಲಿದ್ದಾರೆ. ಇವರ ಊಟ-ತಿಂಡಿ-ಇನ್ನಿತರ ವ್ಯವಸ್ಥೆಗಳನ್ನು ಒಬ್ಬೊಬ್ಬ ರಾಜಕಾರಣಿ ನೋಡಿಕೊಳ್ಳುತ್ತಿದ್ದಾರೆ. ದಾವಣಗೆರೆಯಲ್ಲಿ ಶಾಮನೂರು ಶಿವಶಂಕರಪ್ಪ, ಚಿತ್ರದುರ್ಗದಲ್ಲಿ ರೇಣುಕಾಚಾರ್ಯ, ಹುಬ್ಬಳ್ಳಿಯಲ್ಲಿ ಜಗದೀಶ್ ಶೆಟ್ಟರ್, ತುಮಕೂರಿನಲ್ಲಿ ಸೋಮಣ್ಣ... ಅಂದರೆ ಬಹುತೇಕ ಮಂತ್ರಿಗಳ ಆಶ್ರಯದಲ್ಲಿ ಸಿನಿಮಾ ತಾರೆಯರ ಮೆರವಣಿಗೆ ಸಾಗುತ್ತದೆ ಎಂದಾಯಿತು.

ಸಿನಿಮಾ ಅಕಾಡೆಮಿಯ ಅಧ್ಯಕ್ಷ ನಾಗಾಭರಣ ನೇತೃತ್ವದಲ್ಲಿ ಒಂದಿಷ್ಟು ಜನ ನಿರ್ದೇಶಕರು ಮತ್ತು ಬುದ್ಧಿಜೀವಿಗಳು ಬೆಳಗಾವಿಯಲ್ಲಿ ವಿಚಾರ ಸಂಕೀರ್ಣ, ಗೋಷ್ಠಿ ಮತ್ತು ಚಿತ್ರೋತ್ಸವ ಕಾರ್ಯಕ್ರಮಗಳನ್ನು ನಡೆಸಲಿದ್ದಾರೆ.

ಅಂದರೆ ಒಟ್ಟಾರೆಯಾಗಿ ಸರ್ಕಾರಿ ಹಣದಲ್ಲಿ ನಮ್ಮ ಸಿನಿಮಾ ಜನರು ತಮ್ಮ ಕನ್ನಡ ಪ್ರೇಮವನ್ನು ಪ್ರದರ್ಶಿಸಲಿದ್ದಾರೆ. ಆ ಭುವನೇಶ್ವರಿ ನಿಜಕ್ಕೂ ಧನ್ಯ!!

• ಶೆಣೈ



ಗನ್ ಹಿಡಿದವನ ಏಲಾಟ

ಹರೀಶ್‌ರಾಜ್ ಎಂಬ ಉದಯೋನ್ಮುಖ ನಾಯಕನಟ ಮೊನ್ನೆ ಕರ್ನಾಟಕದ ಜನರಿಗೆ ಪುಕ್ಕಟ್ಟೆ ಮನರಂಜನೆಯನ್ನು ನೀಡಿದರು!

ಈಗ ಎಲ್ಲರಿಗೂ ಗೊತ್ತಿರುವಂತೆ ಈತ ನಾಯಕ ನಟನಾಗಿರುವ 'ಗನ್' ಚಿತ್ರ ಸಂತೋಷ ಚಿತ್ರಮಂದಿರದಿಂದ ಒಂದೇ ವಾರಕ್ಕೆ ಎತ್ತಂಗಡಿಯಾಗಲಿದೆ ಎಂದು ಗೊತ್ತಾದ ತಕ್ಷಣ ಈತ ಚೇಂಬರ್‌ಗೆ ದೂರು ನೀಡುವ ಬದಲು ಕೈಯಲ್ಲಿ ಚಾಕು ಹಿಡಿದು ಸೀದಾ ಸಂತೋಷ್ ಥಿಯೇಟರ್‌ನ ಮಹಡಿ ಮೇಲೆ ನಿಂತು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಬೊಬ್ಬಿಡಲಾರಂಭಿಸಿದ.

ಹರೀಶ್‌ರಾಜ್‌ನ 'ಗನ್' ಚಿತ್ರವನ್ನು ಸಾವಿರಾರು ಮಂದಿ ವೀಕ್ಷಿಸಿದರೋ ಇಲ್ಲವೋ ಗೊತ್ತಿಲ್ಲ; ಆದರೆ ಈ ಪ್ರಹಸನವನ್ನು ನೋಡಲು ಸಂತೋಷ ಥಿಯೇಟರ್‌ನ ಸುತ್ತಮುತ್ತ ಸಾವಿರಾರು ಜನರು ನೆರೆದಿದ್ದರು. ಟಿವಿ ಕ್ಯಾಮೆರಾಮೆನ್‌ಗಳೂ ಹರೀಶ್‌ರಾಜ್‌ನ ಈ 'ಸಾಹಸ'ವನ್ನು ಸೆರೆಹಿಡಿದು ರಾಜ್ಯದ ಎಲ್ಲರಿಗೂ ತೋರಿಸಲು ಅಲ್ಲಿ ಸೇರಿದ್ದರು. ಪರಿಣಾಮವಾಗಿ ಸಂತೋಷ್ ಥಿಯೇಟರ್ ಸುತ್ತಮುತ್ತ ಟ್ರಾಫಿಕ್ ಜಾಮ್ ಆಯಿತು.

ಕೊನೆಗೆ ಪೊಲೀಸರು ಹೇಗೋ ಮಾಡಿ ಹರೀಶ್‌ರಾಜ್‌ನನ್ನು ಹಿಡಿದು ಕೆಳಗಿಳಿಸಿದರು. ಆ ನಂತರ ಎಂದಿನಂತೆ ಆತ್ಮಹತ್ಯೆ ಮಾಡಲು ಪ್ರಯತ್ನಿಸಿದ್ದಕ್ಕೆ ಮತ್ತು ಪೊಲೀಸ್ ಅಧಿಕಾರಿ ಜೊತೆ ಕಾದಾಡಿದಕ್ಕೆ ಆತನ ವಿರುದ್ಧ ಎರಡು ಪ್ರತ್ಯೇಕ ಕೇಸುಗಳನ್ನು ಪೊಲೀಸರು ದಾಖಲು ಮಾಡಿಕೊಂಡರು. ಹರೀಶ್‌ರಾಜ್‌ನ ಈ ದೊಡ್ಡ ಗಿಮಿಕ್ ಮಾಡಿದ್ದರೂ ಅದೇ ದಿನ ಸಂತೋಷ್ ಥಿಯೇಟರ್‌ನ ಮಾಲೀಕರು 'ಗನ್' ಚಿತ್ರವನ್ನು ಎತ್ತಂಗಡಿ ಮಾಡಿ ಮೂರು ದಿನಕ್ಕಾಗಿ 'ಮನಸಿನ ಮಾತು' ಚಿತ್ರವನ್ನು ಪ್ರದರ್ಶಿಸಿದರು.

ಈ ಘಟನೆ ಮೇಲ್ನೋಟಕ್ಕೆ ಹರೀಶ್‌ರಾಜ್‌ನ ಹುಡುಗಾಟಿಕೆಯಾಗಿ ಕಾಣಿಸಬಹುದು. ಆದರೆ ಇದರ ಹಿಂದಿರುವುದು ಈಗ ದೊಡ್ಡದಾಗಿ ಬೆಳೆದಿರುವ ಥಿಯೇಟರ್ ಸಮಸ್ಯೆ. ಈ ಸಮಸ್ಯೆಯಿಂದಾಗಿ ಈಗಾಗಲೇ ಅನೇಕ ನಿರ್ಮಾಪಕರು ತಮ್ಮ ಮನೆ-ಮಠಗಳನ್ನು ಕಳೆದುಕೊಂಡಿದ್ದಾರೆ. ಹರೀಶ್‌ರಾಜ್ ಚೇಂಬರ್‌ಗೆ ಯಾವುದೇ ದೂರು ನೀಡಿಲ್ಲ ಎಂಬ ಪ್ರತಿಕ್ರಿಯೆ ನೀಡಿರುವ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ಆ ಮೂಲಕ ಈ ಯುವ ನಾಯಕನ ಮೇಲೆಯೇ ಗೂಬೆ ಕೂರಿಸಿದ್ದಾರೆ.

ವಾಸ್ತವವಾಗಿ ಈ ಹಿಂದೆ ಥಿಯೇಟರ್ ಸಮಸ್ಯೆ ಕುರಿತಂತೆ ಪಾಟೀಲರನ್ನು ಸಂಪರ್ಕಿಸಿದ ಅನೇಕ ನಿರ್ಮಾಪಕರಿಗೆ ಇವರಿಂದ ಯಾವುದೇ ನ್ಯಾಯ ದೊರಕಿಲ್ಲ. ವಾರಕ್ಕೆ ಐದ್ಹೈದು ಕನ್ನಡ ಚಿತ್ರಗಳನ್ನು ಬಿಡುಗಡೆ ಮಾಡಲು ಅವಕಾಶ ಕೊಡುವ ಚೇಂಬರ್ ಖಂಡಿತವಾಗಿಯೂ ಇಂತಹ ಘಟನೆಗಳಿಗೆ ಪರೋಕ್ಷವಾಗಿ ಕಾರಣವಾಗುತ್ತದೆ. ಇವತ್ತು ಹರೀಶ್‌ರಾಜ್ ಆತ್ಮಹತ್ಯೆಯತ್ನ ಪ್ರಕರಣ ತಮಾಷೆಯಾಗಿ ಕಂಡರೂ ನಿಜವಾಗಿಯೂ ಅನೇಕ ಯುವ ನಾಯಕ ನಟರು ಇಂತಹ ಅಸಹಾಯಕ ಮನೋಸ್ಥಿತಿಯಲ್ಲಿದ್ದಾರೆಂಬುದು ನೂರಕ್ಕೆ ನೂರು ನಿಜ.

ಕನಿಷ್ಠ ಇನ್ನು ಮುಂದೆಯಾದರೂ ಇಂತಹ ಪ್ರಕರಣಗಳು ಮರುಕಳಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ಚೇಂಬರ್ ಮೇಲಿದೆ. ●



ತ್ರಿಭಾಷೆಗಳಲ್ಲಿ ಜಾಕಿ ಓಟ

ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ನೆರೆಯ ತೆಲುಗು ಭಾಷೆಗೆ ಹೋಗುತ್ತಿದ್ದಾರೆ! ಹೀಗಂತ ಹೇಳಿದಾಕ್ಷಣ ಅಪ್ಪು ಅಭಿಮಾನಿಗಳು ಆಶ್ಚರ್ಯದಿಂದ ಹುಬ್ಬೇರಿಸಬಹುದು. ನಿಜ ವಿಷಯವೆಂದರೆ ಅಪ್ಪು ಅಭಿನಯದ 'ಜಾಕಿ' ಚಿತ್ರದ ತೆಲುಗು ಅವತರಣಿಕೆ ಸದ್ಯದಲ್ಲೇ ಆಂಧ್ರದಲ್ಲಿ ತೆರೆ ಕಾಣಲಿದೆ.


ಸಾಧಾರಣವಾಗಿ ಚಿತ್ರವೊಂದು ಹಿಟ್ ಆದರೆ ಅದರ ರಿಮೇಕ್ ಹಕ್ಕನ್ನು ಪರಭಾಷೆಯವರು ಖರೀದಿಸುತ್ತಾರೆ. ಅದೇ ರೀತಿ 'ಜಾಕಿ' ಚಿತ್ರದ ರಿಮೇಕ್ ಹಕ್ಕಿಗಾಗಿ ತಮಿಳು-ತೆಲುಗು-ಮಲೆಯಾಳಂ ಉದ್ಯಮದಿಂದ ಒಳ್ಳೊಳ್ಳೆಯ ಆಫರ್‌ಗಳು ಬಂದಿದ್ದವು. ಆದರೆ ಅದರ ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ನಿರಾಕರಿಸಿದರು. ಜೊತೆಗೆ ಇದೇ ಮೊದಲ ಬಾರಿಗೆ ಅವರೊಳಗಿರುವ ಉದ್ಯಮಿ ಮತ್ತು ಸಾಹಸ ಮನೋಭಾವ ಜಾಗೃತವಾಗಿದೆ. ಹೀಗಾಗಿ ಒಂದಿಷ್ಟು ಲಕ್ಷಕ್ಕಾಗಿ ರಿಮೇಕ್ ಹಕ್ಕನ್ನು ಮಾರಾಟ ಮಾಡುವ ಬದಲು ತಾವೇ ಡಬ್ ಮಾಡಿ ಯಾಕೆ ಹಂಚಿಕೆಯನ್ನು ಮಾಡಬಾರದೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಪರಿಣಾಮವಾಗಿ ಮೊದಲಿಗೆ ಆಂಧ್ರ, ಅನಂತರ ತಮಿಳುನಾಡು ಕೊನೆಗೆ ಕೇರಳ... ಹೀಗೆ ದಕ್ಷಿಣದ ಮೂರು ರಾಜ್ಯಗಳಲ್ಲಿ ಪುನೀತ್ ರಾಜ್‌ಕುಮಾರ್ ಅದೃಷ್ಟ ಪರೀಕ್ಷೆಯಾಗಲಿದೆ. ಈ ಮೂರೂ ಭಾಷೆಗಳಲ್ಲಿ ನಾಯಕಿ ಭಾವನಾ ಈಗಾಗಲೇ ಪಾಪ್ಯುಲರ್ ಆಗಿರುವುದರಿಂದ 'ಜಾಕಿ' ಅಲ್ಲೂ ಕೂಡಾ ಜಾಕ್‌ಪಾಟ್ ಹೊಡೆಯಲು ಸಹಾಯವಾಗಬಹುದೋ ಏನೋ?

ಎಲ್ಲಕ್ಕಿಂತ ಮುಖ್ಯವಾಗಿ ರಿಮೇಕ್ ಚಿತ್ರಗಳ ಹಾಲಿನ ನಡುವೆ ಕನ್ನಡದ ನಿರ್ಮಾಪಕ-ನಿರ್ದೇಶಕ ಮತ್ತು ನಟ ಪರಭಾಷೆಯ ಮಾರುಕಟ್ಟೆಗೆ ಲಗ್ಗೆ ಹಾಕುತ್ತಿರುವುದು ಸ್ವಾಗತಾರ್ಹ. ಇಂತಹ ಸಾಹಸಕ್ಕೆ ಮತ್ತು ಸಂತೋಷಕ್ಕೆ ಮುನ್ನುಡಿ ಬರೆದ ನಿರ್ದೇಶಕ ಸೂರಿಯ ಕ್ರಿಯಾಶೀಲತೆಗೆ ಅಭಿನಂದನೆಗಳು...

Regd.No.KA/RNP/BGS/2036/2010-13 Posted at : GPO, Bangalore-01, Fri/Saturday R B P LANKESH, Kannada Weekly Price Rs. 12/- 23-3-2011 RNI No. KARKAN2005/1

● ಅರುಣ್

ಕಿಚ್ಚನ ಕಿಮ್ಮತ್ತು ಕೆಂಪೇಗೌಡರ ಗಮ್ಮತ್ತು!



ಥೇಟು ರಾಜಕಾರಣದಂತೆಯೇ ಸಿನಿಮಾವೊಂದರ ವಿಚಾರದಲ್ಲೂ ಜಾತಿ ಅಭಿಮಾನ ವರ್ಕ್‌ಔಟ್ ಆಗಿದೆ!

ಮೊನ್ನೆತನಕ 'ಜಾಕಿ' ಎಂಬ ಸಿನಿಮಾ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಬಿಡುಗಡೆ ಮುನ್ನವೇ ಅತಿ ಹೆಚ್ಚು ವಹಿವಾಟು ನಡೆಸಿದ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಆದರೀಗ ಸುದೀಪ್ ನಟಿಸಿ-ನಿರ್ದೇಶಿಸಿರುವ 'ಕೆಂಪೇಗೌಡ' ಚಿತ್ರರಂಗದ ಬಹಳಷ್ಟು ದಾಖಲೆಗಳನ್ನು ನೆಲಕ್ಕುರುಳಿಸಿ ನಿಂತಿದೆ. ಈ 'ಕೆಂಪೇಗೌಡ'ನ ಗತ್ತು ನೋಡಿದರೆ ಸದ್ಯದಲ್ಲೇ 'ಜಾಕಿ'ಯನ್ನೇ ಮೀರಿಸುವಂತಿದೆ. ಚಿತ್ರದ ಹೆಸರಲ್ಲೇ 'ಗೌಡ' ಎಂದು ಇರುವುದು ಇಡೀ ಒಕ್ಕಲಿಗ ಸಮುದಾಯದವರು ರೋಮಾಂಚನಗೊಂಡು ಸಿನಿಮಾವನ್ನು ಗೆಲ್ಲಿಸುತ್ತಾರೆ ಎಂಬ ಮಾಸ್ಟರ್ ಪ್ಲಾನ್ ಸುದೀಪ್ ಮತ್ತು ನಿರ್ಮಾಪಕ ಶಂಕರೇಗೌಡರದ್ದಾಗಿತ್ತು.



ಈಗ ಅವರ ಲೆಕ್ಕಾಚಾರ ಒಂದು ಮಟ್ಟಕ್ಕೆ ಯಶಸ್ವಿಯೂ ಆಗಿದೆ.

ಸ್ವಮೇಕ್ ಚಿತ್ರವೊಂದು ಈ ಪರಿಯ ಕ್ರೇಜ್ ಹುಟ್ಟಿಸಿದ್ದರೆ, ಹಣದ ಹೊಳೆ ಹರಿಸಿದ್ದರೆ ಬೇರೆ ಮಾತಾಗಿರುತ್ತಿತ್ತು. ಆದರೆ 'ಕೆಂಪೇಗೌಡ' ಕೆಲವೇ ತಿಂಗಳ ಹಿಂದೆ ಬಿಡುಗಡೆಯಾಗಿ ಸೂಪರ್ ಹಿಟ್ ಆಗಿದ್ದ 'ಸಿಂಗಂ' ಎಂಬ ತಮಿಳು ಚಿತ್ರದ ಕನ್ನಡಾವತಾರ. ತಮಿಳಿನಲ್ಲಿ ಸೂಪರ್ ಸ್ಟಾರ್ ಸೂರ್ಯ ನಟಿಸಿದ್ದ ಈ ಚಿತ್ರವನ್ನು ಹರಿ ನಿರ್ದೇಶಿಸಿದ್ದರು. ತೀರಾ ಅದ್ಭುತ ಎನಿಸಿಕೊಳ್ಳುವ ಕತೆ ಇಲ್ಲದಿದ್ದರೂ ಅದರ ಮೇಕಿಂಗ್ ಸ್ಟೈಲು, ತಾಂತ್ರಿಕತೆ ನೋಡುಗರನ್ನು ಮೋಡಿ ಮಾಡಿತ್ತು. ಸನ್ ಪಿಕ್ಚರ್ಸ್‌ನವರು 25 ಕೋಟಿ ರೂಪಾಯಿ ಬಜೆಟ್‌ನಲ್ಲಿ ನಿರ್ಮಿಸಿದ್ದ ಈ ಸಿನಿಮಾ ಅರವತ್ತೆಷ್ಟು ಕೋಟಿ ವಹಿವಾಟು ನಡೆಸಿತ್ತು.

ಸುದೀಪ್ ನಿರ್ಮಾಪಕರ ಪಾಲಿನ ಫೇವರಿಟ್ ನಟ. ತನ್ನನ್ನು ನಂಬಿ ಹಣ ಹೂಡಿದ ಯಾರಿಗೂ ನಷ್ಟವಾಗಬಾರದು ಎನ್ನುವ ಪ್ರಾಮಾಣಿಕ ಕಾಳಜಿ ಸುದೀಪ್‌ದ್ದು ಅದರಲ್ಲೂ ತನ್ನ ನಿರ್ದೇಶನದ ಚಿತ್ರಕ್ಕೆ ಹಣ ಹಾಕಿದವರ ಬಗ್ಗೆ ಸುದೀಪ್‌ಗೆ ವಿಶೇಷ ಮುತುವರ್ಜಿ.



ಈ ಹಿಂದೆ ಇದೇ ಶಂಕರೇಗೌಡ ಅವರು ಸುದೀಪ್ ನಿರ್ದೇಶಿಸಿ-ನಟಿಸಿದ್ದ 'ಜಸ್ಟ್ ಮಾತ್ ಮಾತಲ್ಲಿ' ಎಂಬ ಚಿತ್ರವನ್ನು ನಿರ್ಮಿಸಿದ್ದರು. ಸುದೀಪ್ ತುಂಬಾ ಇಷ್ಟಪಟ್ಟು ನಿರ್ದೇಶಿಸಿದ್ದ ಆ ಚಿತ್ರಕ್ಕೆ ವಿಮರ್ಶಕರಿಂದ ಅಭೂತಪೂರ್ವ ಪ್ರತಿಕ್ರಿಯೆಯೂ ಬಂದಿತ್ತು. ಅದು ಯಾರ ದುರಾದೃಷ್ಟವೋ ಏನೋ? ಬಾಕ್ಸ್ ಆಫೀಸ್‌ನಲ್ಲಿ ಸಿನಿಮಾ ಎದ್ದು ನಿಲ್ಲಲೇ ಇಲ್ಲ. ಪರಿಣಾಮವಾಗಿ ಶಂಕರೇಗೌಡ ಐದಾರು ಕೋಟಿ ರೂಪಾಯಿಗಳನ್ನು ಒಮ್ಮೆಲೇ ಕಳೆದುಕೊಂಡಿದ್ದರು.

ತನ್ನ ಚಿತ್ರದಿಂದ ನಷ್ಟಕ್ಕೀಡಾದ ಶಂಕರೇಗೌಡರಿಂದ ಕಮ್ಮಿ ಸಂಭಾವನೆ ಪಡೆದು ಅವರಿಗೆ ಮತ್ತೊಂದು ಚಿತ್ರವನ್ನು ನಿರ್ದೇಶಿಸುವ ನಿರ್ಧಾರವನ್ನು ಸುದೀಪ್ ತೆಗೆದುಕೊಂಡರು. ಆಗ ಸುದೀಪ್ ಆಯ್ಕೆ ಮಾಡಿಕೊಂಡಿದ್ದು ತಾನೇ ನಟಿಸಿದ್ದ ರಾಮ್‌ಗೋಪಾಲ್ ವರ್ಮ ನಿರ್ದೇಶಿಸಿದ್ದ 'ರಕ್ತಚರಿತ್ರ' ಎಂಬ ಹಿಂದಿ ಸಿನಿಮಾವನ್ನು. 'ರಕ್ತಚರಿತ್ರ' ಚಿತ್ರವನ್ನು 'ದಂಡಂ ದಶಗುಣಂ' ಹೆಸರಿನಲ್ಲಿ ಕನ್ನಡೀಕರಿಸಲು ಸುದೀಪ್ ಮುಂದಾದರು. ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಪೂಜೆಯನ್ನೂ ನಡೆಸಿದರು. ಆದರೆ ಈ ಚಿತ್ರ ಕನ್ನಡದಲ್ಲಿ ವರ್ಕ್‌ಔಟ್ ಆಗುತ್ತೋ ಇಲ್ಲವೋ ಎಂಬ ಅನುಮಾನ ಸುದೀಪ್‌ರನ್ನು ಕಾಡಿದ್ದರಿಂದ ಆ ಪ್ರಾಜೆಕ್ಟ್‌ಅನ್ನು ಅಲ್ಲಿಗೇ ಡ್ರಾಪ್ ಮಾಡಿದರು.

ಅದೇ ವೇಳೆಗೆ ಬಂದ 'ಸಿಂಗಂ' ಬಾಕ್ಸ್ ಆಫೀಸ್‌ನಲ್ಲಿ ಕೊಳ್ಳೆ ಹೊಡೆಯಲಾರಂಭಿಸಿತ್ತು. ಸೀದಾ ಚೆನ್ನೈಗೆ ಹೋಗಿ ಆ ಚಿತ್ರದ ರಿಮೇಕ್ ಹಕ್ಕುಗಳನ್ನು ತಂದ ಸುದೀಪ್ ಅದನ್ನು ಭಾಷಾಂತರಿಸಲು ನಿಂತುಬಿಟ್ಟರು.



ಆದರೆ 'ಕೆಂಪೇಗೌಡ' ಎಂಬ ಟೈಟಲ್ ನಿರ್ಮಾಪಕ ಸೂರಪ್ಪ ಬಾಬು ಬಳಿಯಿತ್ತು. ಬರೋಬ್ಬರಿ ಎಂಟು ಲಕ್ಷ ದುಡ್ಡು ಎಣಿಸಿ ಸೂರಪ್ಪನ ಬಳಿಯಿದ್ದ ಟೈಟಲ್‌ಅನ್ನು ಪಡೆದುಕೊಂಡರು. ಈವರೆಗೆ ಯಾರೂ ಒಂದು ಟೈಟಲ್‌ಗಾಗಿ ಎಂಟು ಲಕ್ಷ ರೂಪಾಯಿ ಕೊಟ್ಟಿದ್ದಿಲ್ಲ. ಅದು 'ಕೆಂಪೇಗೌಡ'ನ ಮೊದಲ ದಾಖಲೆಯಾಗಿತ್ತು.

ಸತತ 108 ದಿನಗಳ ಚಿತ್ರೀಕರಣವನ್ನು ನಡೆಸಿದ ಸುದೀಪ್ ಈಗ 'ಕೆಂಪೇಗೌಡ'ನನ್ನು ತೆರೆಗೆ ತಂದಿದ್ದಾರೆ. ತಮಿಳಿನಲ್ಲಿ 25 ಕೋಟಿ ಬಜೆಟ್‌ನಲ್ಲಿ ತಯಾರಾಗಿದ್ದ ಚಿತ್ರಕ್ಕೆ ಇಲ್ಲಿ ಏಳೆಂಟು ಕೋಟಿ ರೂ. ಹೂಡಲಾಗಿದೆ. ಈ ಚಿತ್ರಕ್ಕಾಗಿ ಈಗಾಗಲೇ ಹಾಕಿದ್ದ ದುಡ್ಡು ನಿರ್ಮಾಪಕ ಶಂಕರೇಗೌಡರ ಕಿಸೆಗೆ ಮರಳಿ ಬಂದಿದೆ. ಬಿಕೆಟಿಯ ಹಂಚಿಕೆಯನ್ನು ವಿತರಕ ಭಾಷಾ 2.50 ಕೋಟಿಗೆ ಖರೀದಿಸಿದ್ದಾರೆ. ಇನ್ನು ಎಂಎಂಸಿಎಚ್ ವಲಯವನ್ನು 1 ಕೋಟಿಗೆ, ಉತ್ತರ ಕರ್ನಾಟಕ 1 ಕೋಟಿಗೆ, ಹೈದ್ರಾಬಾದ್ ಕರ್ನಾಟಕದಿಂದ ಐವತ್ತು ಲಕ್ಷ ಸೇರಿದಂತೆ ಎಲ್ಲಾ ಏರಿಯಾಗಳೂ ಈಗಾಗಲೇ ಮಾರಾಟವಾಗಿದೆ. ಇನ್ನು ಚಾನೆಲ್ ರೈಟ್ಸ್‌ನಿಂದ 1.71 ಕೋಟಿ, ಡಿವಿಡಿ ಹಕ್ಕಿಗಾಗಿ 45 ಲಕ್ಷ ರೂಪಾಯಿಗಳ ನಿವ್ವಳ ಲಾಭ ಹರಿದುಬಂದಿದೆ.

ತನಗೆ ಬರಬೇಕಿದ್ದ ಬಾಕಿ ಬಾಬ್ತು ಬರಲಿಲ್ಲ ಎಂಬ ಕಾರಣಕ್ಕೆ ಚಿತ್ರದ ನೆಗೆಟೀವ್ ಕ್ಯಾನುಗಳನ್ನು ಮನೆಗೆ ಕೊಂಡೊಯ್ದು ಅಡಗಿಸಿಕೊಳ್ಳುವ ದರ್ಶನ್ ಮುಂದೆ ಆತನ ಪ್ರತಿಸ್ಪರ್ಧಿ ಎಂದೇ ಗುರುತಿಸಲ್ಪಟ್ಟಿರುವ ಸುದೀಪ್ ತನ್ನಿಂದ ಲುಕ್ಸಾನು ಅನುಭವಿಸಿದ ನಿರ್ಮಾಪಕನಿಗಾಗಿ ಫ್ರೀ ಕಾಲ್‌ಶೀಟ್ ನೀಡಿದ್ದು ಮಾತ್ರವಲ್ಲದೆ, ಹಗಲೂರಾತ್ರಿ ಕಷ್ಟಪಟ್ಟು ಸಿನೆಮಾ ಮಾಡಿ, ಅದಕ್ಕೊಂದು ಮಾರುಕಟ್ಟೆಯನ್ನೂ ನಿರ್ಮಿಸಿ ಕೊಟ್ಟಿದ್ದಾರೆಂದರೆ, ಕಿಚ್ಚ ಇಸ್ ರಿಯಲಿ ಗ್ರೇಟ್!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main